ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Monday, the 18th July 1975/Shravana 6, 1897 S.E.

The House met in the Assembly Chamber, Vidhana Soudha at One of the Clock.

MADAM SPEAKER (SMT. K. S. NAGARATHNAMMA) in the Chair.

OBITUARY REFERENCE

Re: Demise of Smt. Yellawwa Sambrani.

MADAM SPEAKER.—I regret to make a reference to the sad demise of Smt. Yellawwa Sambrani, a former Member of the Legislative Assembly.

Smt. Yellawwa Sambrani was a member of this House between 1962–1967. She was a social worker and strove hard for the welfare of the Harijan Community.

I request the members to stand in silence for two minutes as a mark of respect to the deceased.

The House stood in silence for two minutes.

Objection re: Suspension of Rules relating to business initiated by a Private Member.

ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ನಾನು ಈ ನಿರ್ಣಯವನ್ನು ಸದನದ ಅಂಗೀಕಾರಕ್ಕಾಗಿ ಮಂಡಿಸುತ್ತೇನೆ. ನನ್ನ ನಿರ್ಣಯ ಈ ರೀತಿ ಇದೆ.—

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆ. ಸಾಧಾರಣವಾಗಿ, ನಮ್ಮ ನಿಯಮಾವಳಿಗಳ ಪ್ರಕಾರ ಪ್ರಶ್ನೆಗಳನ್ನು ಕೇಳತಕ್ಕದ್ದು ಮೊದಲನೆಯ ಭಾಗವಾಗಿತ್ತು. ಕೆಲವು ಸಂದರ್ಭಗಳಲ್ಲಿ ಮಾತ್ರ ಅದಕ್ಕೆ ಒಪ್ಪಿಗೆ ಪಡೆದು ಮಾಡುತ್ತಿದ್ದೆವು. ಆದರೆ ಈ ಅಧಿವೇಶನದಲ್ಲಿ ಪ್ರಶ್ನೋತ್ತರ ವೇಳೆಯನ್ನು ಕಾರ್ಯಕಲಾಪದ ಪಟ್ಟಿಯಲ್ಲಿ ಸೇರಿಸದೇ ಇರುವುದು ಸರಿಯಾದುದಲ್ಲ ಎಂದು ನಾನು ಈ ಸಂದರ್ಭದಲ್ಲಿ ತಮಗೆ ಹೇಳಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಕೆಲವು ಸಂದರ್ಭಗಳಲ್ಲಿ ಪ್ರಶ್ನೋತ್ತರ ವೇಳೆಯನ್ನು ಬಿಟ್ಟು ಕೆಲಸ ಕಾರ್ಯಗಳನ್ನು ನಡೆಸಿದ್ದೇವೆ, ಇದು ತಮಗೆ ಜ್ಞಾಪಕ ಇರಬಹುದು. ಮಾನ್ಯ ಸಚಿವರು ರೆಸಲ್ಯೂಷನ್‌ನ್ನು ಮುಂದಕ್ಕೆ ಓದಲಿ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೇ ನರಸೀಪುರ).—ತಾವು ಸಮಜಾಯಿಷಿಗೆ ಉದಾಹರಣೆ ಕೊಟ್ಟಿದ್ದೀರಿ. ಕಳೆದ ಎರಡು ಬಾರಿ ಮಾತ್ರ ಪ್ರಶ್ನೋತ್ತರ ವೇಳೆಯನ್ನು ಬಿಟ್ಟಿದ್ದೇವೆ. ಅಂದರೆ ೧೯೭೫ರಲ್ಲಿ ಒಂದು ಸಾರಿ, ಮತ್ತು ಸಿಕ್ಕಿಮನ್ನು ಒಂದು ರಾಜ್ಯವನ್ನಾಗಿ ಭಾರತಕ್ಕೆ ಸೇರಿಸಿಕೊಳ್ಳುವ ಸಂವಿಧಾನ ತಿದ್ದುಪಡಿ ಮಾಡುವ ಸನ್ನಿವೇಶದಲ್ಲಿ ಮಾತ್ರ ಪ್ರಶ್ನೋತ್ತರ ವೇಳೆಯನ್ನು ಇಡದೆ, ಕಾರ್ಯಕಲಾಪ ನಡೆದಿದೆ, ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಆ ಸನ್ನಿವೇಶ ಇದಕ್ಕೆ ಕೊಡತಕ್ಕಂಥಾದು ಸರಿಯಾದುದಲ್ಲವೆಂದು ತಮಗೆ ನಿವೇದನೆ ಮಾಡಿಕೊಳ್ಳಲು ಇಚ್ಛೆಪಡುತ್ತೇನೆ. ಅದಕ್ಕೆ ಕಾರಣ ಇಷ್ಟೆ, ಆ ಎರಡು ಸನ್ನಿವೇಶಗಳಲ್ಲೂ ಕೂಡ ಎಮರ್ಜನ್ಸಿ ಸೆಷನ್ ಅನ್ನು ಕರೆಯಲಾಗಿತ್ತು. ಮತ್ತು ಗೊತ್ತಾದಂಥ ಕಾರ್ಯಕ್ರಮಗಳಿಗೋಸ್ಕರ ಕರೆಯಲಾಗಿತ್ತು. ಆದರೆ ಈ ಸಾರಿ ಕರೆದಿರತಕ್ಕಂಥ ಅಧಿವೇಶನ ಸಾಮಾನ್ಯವಾದಂಥ ಅಧಿವೇಶನ. ನಮಗೆ ತಿಳಿಸಿರುವ ಕಾರ್ಯಕ್ರಮದ ಪಟ್ಟಿಯಲ್ಲಿ ಹಲವಾರು ಸರ್ಕಾರಿ ಕಾರ್ಯಕಲಾಪಗಳನ್ನು ಸೇರಿಸಿದ್ದೀರಿ. ಆದುದರಿಂದ ಈ ಒಂದು ಸಭೆಯ ಸದಸ್ಯರಿಗೆ ಇರತಕ್ಕಂಥ ಹಕ್ಕನ್ನು ಮೊಟಕು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ ನಾನು ಇನ್ನೂ ನಿರ್ಣಯವನ್ನೇ ಮಂಡಿಸಿಲ್ಲ.

SRI H. D. DEVE GOWDA.—Before that, the Hon. Member Sri T. R. Shamanna has raised a point of order.

SRI S. M. KRISHNA.—I am awaiting the ruling of the Chair.

ಅಧ್ಯಕ್ಷರು.—ಹಿಂದೆ ಎರಡು ಸಾರಿ ಪ್ರಶ್ನೋತ್ತರ ವೇಳೆ ಇಲ್ಲದೇ ಕಾರ್ಯಕಲಾಪ ನಡೆಸಿದ್ದೇವೆ. ನಾವು ಅದಕ್ಕೋಸ್ಕರವೇ ಈಗ ರೆಸಲ್ಯೂಷನ್ ಆದ ಕಾರ್ಯಕ್ರಮವನ್ನು ಶುರುಮಾಡುತ್ತಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಹಿಂದೆ ಎರಡು ಸಾರಿ ನಡೆದದ್ದು ವಿಶೇಷವಾದಂಥ ಮತ್ತು ಗೊತ್ತಾದಂಥ ಕಾರ್ಯಕ್ರಮಗಳನ್ನು ನಡೆಸುವುದಕ್ಕೋಸ್ಕರವಾಗಿ ಕರೆದಂಥ ಅಧಿವೇಶನಗಳು. ಆದರೆ ಇದು ಹಾಗಲ್ಲ. ಇದು ಸಾಮಾನ್ಯವಾದಂಥ ಅಧಿವೇಶನ. ಕಾರ್ಯಕ್ರಮದ ಪಟ್ಟಿಯಲ್ಲಿ ಸರ್ಕಾರಿ ಕಾರ್ಯಕಲಾಪಗಳನ್ನು ಸೇರಿಸಿದ್ದೀರಿ. ಮತ್ತು ಸಭೆಯ ಸದಸ್ಯರಿಗೆ ಒಂದು ವಾರದ ಕಾರ್ಯಕ್ರಮದಲ್ಲಿ ಈ ಸಭೆಯಲ್ಲಿ ಏನೇನು ಮಾಡಬೇಕು ಎಂದು ತಿಳಿಸಿ ಕೊಟ್ಟಿದ್ದೀರಿ. ತಾವು ರೂಲ್ಸ್ ಪ್ರಕಾರ ತುರ್ತು ಪರಿಸ್ಥಿತಿಗೋಸ್ಕರವಾಗಿ ಯಾವುದೇ ಒಂದು ವಿಶೇಷವಾದಂಥ ಕಾರ್ಯಕ್ರಮವನ್ನು ಮಾಡಿಕೊಳ್ಳುವುದಕ್ಕೆ ಈ ಸಭೆಯನ್ನು ಕರೆದಿಲ್ಲ. ಇದರಲ್ಲಿ ಗೊತ್ತಾದಂಥ ಕಾರ್ಯಕ್ರಮವಿಲ್ಲ. ಈ ಅಧಿವೇಶನದಲ್ಲಿ ಸರ್ಕಾರದ ಸರ್ವೇಸಾಮಾನ್ಯವಾದ ಕಾರ್ಯಕ್ರಮಗಳನ್ನು ತೀರ್ಮಾನ ಮಾಡತಕ್ಕಂಥಾದ್ದೇ ಇದರ ಉದ್ದೇಶವೆಂದು ಕಾಣುತ್ತದೆ.

SRI T. R. SHAMANNA.—I have got a legal point. I wanted to submit the same to the Hon. Speaker.

ಅಧ್ಯಕ್ಷರು.—ಈ ರೂಲ್ಸ್‌ಗಳನ್ನೆಲ್ಲಾ ಈ ಸಭೆ ಮಾಡಿದೆ. ಈಗ ಸದನದ ಮುಂದೆ ರೆಸಲ್ಯೂಷನ್ನನ್ನು ಇಡುತ್ತಾರೆ. ಅದು ಬಿದ್ದು ಹೋಯಿತು ಎಂದರೆ ರೂಲ್ಸ್ ಪ್ರಕಾರ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಬಹುದು ಎಂದರೆ ನನ್ನ ಅಡ್ಡಿ ಏನೂ ಇಲ್ಲ. ರೂಲ್ಸ್‌ಗಳನ್ನು ಈ ಸಭೆ ಮಾಡಿದೆ, ಈ ರೂಲ್ಸ್ ಪ್ರಕಾರ ನಡೆಯುವುದಕ್ಕೆ ನಾನು ಸಿದ್ಧವಾಗಿರುವುದು ರೆಸಲ್ಯೂಷನ್ನನ್ನು ಮಂಡಿಸುತ್ತಾರೆ, ಅದು ಪಾಸ್ ಆಗಲಿಲ್ಲ ಎಂದರೆ ಪ್ರಶ್ನೆಗಳನ್ನು ತೆಗೆದುಕೊಳ್ಳುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. The House is the custodian of the rules.

ಶ್ರೀ ಎಚ್. ಡಿ. ದೇವೇಗೌಡ.—ಆ ರೆಸಲ್ಯೂಷನ್ ಬಂದು ಸಭೆಯು ಅಂಗೀಕಾರ ಆದಮೇಲೆ ನಾವು ನಡೆಸತಕ್ಕಂಥ ಕಾರ್ಯಕ್ರಮವೇ ಬೇರೆ. ಆ ರೆಸಲ್ಯೂಷನ್ ಇನ್ನೂ ನಮ್ಮ ಮುಂದೆ ಬಂದಿಲ್ಲ. ಕಾರ್ಯಕ್ರಮದ ಪಟ್ಟಿಯನ್ನು ತಾವು ಏನ ಒದಗಿಸಿದ್ದೀರಿ, ಅದರಲ್ಲಿ ಪ್ರಶ್ನೋತ್ತರ ವೇಳೆ ಇಲ್ಲ. ಇವತ್ತು ರೂಲ್ಸ್ ಸಸ್ಪೆಂಡ್ ಆಗತಕ್ಕಂಥ ಕಾಲದಲ್ಲಿ ರೂಲ್ಸ್ ಸಸ್ಪೆಂಡ್ ಆಗುವುದಕ್ಕೆ ಮುಂಚೆ ನಿಯಮಾವಳಿ ಪ್ರಕಾರ ಪ್ರಶ್ನೆಗಳನ್ನು ಕೇಳತಕ್ಕಂಥಾದ್ದು ಮಾನ್ಯ ಸದಸ್ಯರ ಹಕ್ಕು. ಪ್ರಶ್ನೋತ್ತರ ವೇಳೆಯನ್ನು ಕಿತ್ತು ಹಾಕುವುದಕ್ಕೆ ಮತ್ತು ಕಾರ್ಯಕ್ರಮದ ಪಟ್ಟಿಯಲ್ಲಿ ಅದನ್ನು ತೆಗೆದುಹಾಕುವುದಕ್ಕೆ ಸಭೆ ಅಧಿಕಾರ ಕೊಟ್ಟಿಲ್ಲ, ಆ ಅಧಿಕಾರಕ್ಕೆ ಚ್ಯುತಿಯಾಗಿದೆ. ಆದುದರಿಂದ ಅದನ್ನು ಮಾನ್ಯ ಶಾಮಣ್ಣನವರು ಹೇಳುತ್ತಿದ್ದಾರೆ.

---

†Indicate that remarks or speeches have not been revised by the member concerned.

SRI T. R. SHAMANNA.—I would like to read the relevant Rules. Madam Speaker.— Rule No. 322 says as follows.—

> "322. Suspension of Rules.—Any Member may, with the consent of the Speaker, move that any rule may be suspended in its application to a particular motion before the Assembly and if the motion is carried the rule in question shall be suspended for the time being."

"Rule in question" ಎಂದು ಇದೆ. Here, it involves number of rules relating to Calling Attention, Questions etc. I would like to say that many other rules are embodied here. You have got a particular rule but it can be applied for the suspension of the particular rule only and not for the suspension of all the rules.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ, ಜರೂರು ಪರಿಸ್ಥಿತಿ ಯಾವ 26 ನೇ ತಾರೀಖು ಈ ದೇಶದಲ್ಲಿ ಜಾರಿಗೆ ಬಂತು, ಅನಂತರ ಪ್ರಧಾನಮಂತ್ರಿಗಳು 20 ಅಂಶಗಳ ಕಾರ್ಯಕ್ರಮಂದ ಪಟ್ಟಿಯನ್ನು ಏನು ದೇಶದ ಮುಂದೆ ಇಟ್ಟಿದ್ದಾರೆ ಅದರ ಬಗ್ಗೆ ರಾಜ್ಯ ಸರ್ಕಾರದವರು ಕೆಲವಾರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಆದುದರಿಂದ ಈ ಅಧಿವೇಶನವನ್ನು ಕರೆಯತಕ್ಕಂಥಾದ್ದು. ಕೆಲವು ಸೀಮಿತವಾದಂಥ ಮತ್ತು ಗೊತ್ತಾದಂಥ ಸರ್ಕಾರದ ಗೊತ್ತುವಳಿಗಳನ್ನು ಠರಾವುಗಳನ್ನು ಸಭೆಯ ಮಂಜೂರಾತಿಗಾಗಿ ಮಂಡಿಸಬೇಕಾಗಿದೆ ಎನ್ನುವ ದೃಷ್ಟಿಯಿಂದ ಸಭೆಯನ್ನು ಕರೆದಿದ್ದೇವೆ ಈ ಒಂದು ವಿಶೇಷ ಪರಿಸ್ಥಿತಿಯಲ್ಲಿ ವಿಶೇಷವಾದಂಥ ಠರಾವನ್ನು ಸಭೆಯ ಮುಂದೆ ಮಂಡಿಸಿ, ಬಾಕಿ ಏನೆಲ್ಲಾ ಕಾರ್ಯಕ್ರಮಗಳು ಇವೆ ಅವುಗಳನ್ನು ಒತ್ತಟ್ಟಿಗಿಟ್ಟು ಸರ್ಕಾರಿ ಕಾರ್ಯಕ್ರಮಗಳಿಗೆ, ಜನತಾ ಪ್ರಗತಿಯ ಕಾರ್ಯಕ್ರಮಗಳಿಗೆ ಆದ್ಯತೆಯನ್ನು ಕೊಡಬೇಕು ಈ ವಿಶೇಷವಾದಂಥ ವಿಧಾನವನ್ನು ಅನುಸರಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಂಸದೀಯ ಸಚಿವರು ಕೊಟ್ಟಂಥ ಕಾರಣ ಏನಿದೆ ಬಹುಶಃ ಆ ಕಾರಣ ಸತ್ಯಕ್ಕೆ ಸ್ವಲ್ಪ ದೂರವಾದುದು ಎಂದು ಹೇಳಬೇಕಾಗುತ್ತದೆ. ನಮ್ಮ ಕಾರ್ಯಕ್ರಮದ ಪಟ್ಟಿಯಲ್ಲಿ ತಾವು ತಿಳಿಸಿರತಕ್ಕ ಪ್ರಕಾರ ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್ ಬಿಲ್ಲನ್ನು ಈ ಸಭೆಯಲ್ಲಿ ಪಾಸ್ ಮಾಡತಕ್ಕದ್ದು ಇದೆ. ಇದು ಪ್ರಧಾನಿಯವರ 20 ಅಂಶದ ಕಾರ್ಯಕ್ರಮದಲ್ಲಿ ಇಲ್ಲ. ಮೊನ್ನೆ ದಿನ ಜಂಟಿ ಸಮಿತಿಯವರು ಶಿಫಾರಸ್ಸು ಮಾಡಿ ಕಳುಹಿಸಿರತಕ್ಕ ಅಗ್ರಿಕಲ್ಚರಲ್ ಯೂನಿವರ್ಸಿಟಿ ಬಿಲ್ಲಿಗೆ ಮಾನ್ಯತೆ ಕೊಡತಕ್ಕದ್ದು ಇದೆ. ಅದು ಪ್ರಧಾನ ಮಂತ್ರಿಗಳ ಕಾರ್ಯಕ್ರಮದ ಪಟ್ಟಿಯಲ್ಲಿ ಇಲ್ಲ. ಇದೇ ರೀತಿ ಈ ಪಟ್ಟಿಯಲ್ಲಿ ಅಳವಡಿಸಿರತಕ್ಕ ಹಲವಾರು ಕಾರ್ಯಕ್ರಮಗಳನ್ನು ನೋಡಿದರೆ ಪ್ರಧಾನಿಯವರು ಘೋಷಿಸಿರತಕ್ಕ ಆರ್ಥಿಕ ಕಾರ್ಯಕ್ರಮಕ್ಕೂ ಇದಕ್ಕೂ ಸಂಬಂಧವಿಲ್ಲ. ಆದುದರಿಂದ ಇದು ವಿಶೇಷ ಅಧಿವೇಶನ ಎನ್ನುವುದಕ್ಕೆ ಸರಿಯಾದ ಕಾರಣ ಕೊಡಲಿಲ್ಲ ಎಂದು ಹೇಳಬೇಕಾಗುತ್ತದೆ. ಪ್ರಶ್ನೋತ್ತರ, ವೇಳೆ ಮತ್ತು ಗಮನ ಸೆಳೆಯುವ ಸೂಚನೆಯನ್ನು ಮೊಟಕುಗೊಳಿಸಿ ಸದಸ್ಯರು ಪ್ರಶ್ನೆ ಕೇಳುವ ಹಕ್ಕನ್ನು ಮೊಟಕು ಮಾಡಿ ಕಾರ್ಯಕ್ರಮ ಮಾಡುವುದಕ್ಕೆ ಅವಕಾಶವಿಲ್ಲ ಸದಸ್ಯರಿಗೆ ಇರತಕ್ಕ ಹಕ್ಕನ್ನು ಮೊಟಕುಗೊಳಿಸದೆ ನಾವು ಈ ಸಭೆಯ ಎಲ್ಲಾ ಕಾರ್ಯಕ್ರಮಗಳನ್ನೂ ಮಾಡಿಕೊಡಲು ಸಿದ್ಧರಿದ್ದೇವೆ. ನೀವು ಯಾವ ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ಯೋಚಿಸಿದ್ದೀರೋ ಅದನ್ನು ಚರ್ಚೆ ಇಲ್ಲದೆ ಈ ಸಭೆಯಲ್ಲಿ ಮಾಡಿಕೊಡುವುದಕ್ಕೆ ಸಿದ್ಧರಿದ್ದೇವೆ ಇಂಥ ಸನ್ನಿವೇಶದಲ್ಲಿ ತಾವು ದಯಮಾಡಿ ಸದನದ ಸದಸ್ಯರಿಗೆ ಇರತಕ್ಕ ಹಕ್ಕನ್ನು ಮೊಟಕು ಮಾಡುವ ಕೆಟ್ಟ ಸಂಪ್ರದಾಯ ಹಾಕುವುದು ಬೇಡ. ಈ ವರ್ಷ ಅಂತರಾಷ್ಟ್ರೀಯ ಮಹಿಳಾ ವರ್ಷ. ತಾವು ಅಧ್ಯಕ್ಷರ ಸ್ಥಾನದಲ್ಲಿ ಕುಳಿತುಕೊಂಡು ಇದಕ್ಕೆ ಒಪ್ಪಿಗೆ ಕೊಡತಕ್ಕದ್ದು ಯೋಗ್ಯವಲ್ಲ ಎಂದು ಸವಿನಯ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅರಿತ ಮತ್ತು ನುರಿತ ಸಂಸದೀಯ ಸಚಿವರು ಈ ಸದನಕ್ಕೆ ತಾವು ಬಹಳ ದಿವಸಗಳ ಅನುಭವಗಳ ಆಧಾರದ ಮೇಲೆ ಅತ್ಯುತ್ತಮ ಸಲಹೆ ನೀಡುತ್ತಾರೆಂದು ನಾನು ತಿಳಿದುಕೊಂಡಿದ್ದೆನು. ಅವರ ತಲೆಯಲ್ಲಿ ಮೌಢ್ಯತೆ ಪ್ರಾರಂಭವಾದ ಮೇಲೆ ಅವರ ಅನುಭವ ಕಳಚಿ ಬಿದ್ದಿದೆ. ಮಾನ್ಯ ದೇವೇಗೌಡರು ಎತ್ತಿರತಕ್ಕ ಪ್ರಶ್ನೆ ಏನು ಇದೆ ಎಂದರೆ ತುರ್ತು ಅಧಿವೇಶನ ಎನ್ನುವ ವ್ಯಾಖ್ಯಾನದ ವ್ಯಾಪ್ತಿಯಲ್ಲಿ ಈ ಅಧಿವೇಶನ ಬರುವುದಿಲ್ಲ ಎಂದು. ನಮಗೆ ಅನುಭವ ಇದೆ. ನಮ್ಮನ್ನು ಸಿಕ್ಕಿಂಗೆ ಸಂಬಂಧಪಟ್ಟ ರಾಜ್ಯಾಂಗ ತಿದ್ದುಪಡಿಗೆ ಒಪ್ಪಿಗೆ ಕೊಡುವುದಕ್ಕೋಸ್ಕರ ವಿಶೇಷ ಅಧಿವೇಶದಲ್ಲಿ ಕರೆಸಿದ್ದರು. ಆಗ ಬೇರೆ ವಿಷಯವನ್ನು ಚರ್ಚೆ ಮಾಡಲಿಲ್ಲ. ಕಾರ್ಯಕ್ರಮದ ಪಟ್ಟಿಯಲ್ಲಿರತಕ್ಕ

ವಿಷಯವನ್ನು ಬಿಟ್ಟು ಬೇರೆ ಯಾವ ವಿಷಯವನ್ನು ಪ್ರಸ್ತಾಪ ಮಾಡಲಿಲ್ಲ. ಆದ್ದರಿಂದ ಅದು ತುರ್ತು ಅಧಿವೇಶನವೆಂದು ಅಂದುಕೊಂಡಿದ್ದೇನೆ. ಆದ ಕಾರಣ ಈವತ್ತಿನ ಈ ಅಧಿವೇಶನಕ್ಕೆ ತುರ್ತು ಅಧಿವೇಶನ ಎನ್ನುವ ಅರ್ಥವನ್ನು ಯಾವ ಕಾರಣದಿಂದಲೂ ಕೊಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಕಾರ್ಯಕ್ರಮಗಳನ್ನು ಅಂತ್ಯಗೊಳಿಸತಕ್ಕದ್ದು ಉಚಿತವಲ್ಲ ಇದಕ್ಕೆ ತಾವು ಅಧ್ಯಕ್ಷರು ಅವಕಾಶ ಕೊಡಬಾರದು. ಅದಕ್ಕೆ ರೂಲ್ ೩೨೨ ರಲ್ಲಿ ಈ ರೀತಿ ಸ್ಪಷ್ಟವಾಗಿ ಇದೆ.—

> "Any Member may with the consent of Speak r move that any rule may be suspended in its application to a particular motion before the Assembly and if the motion is carried the rule in question shall be suspended for the time being".

Suppose if I Had sent a motion for your kind consideration say privilege or adjournment motion. then this would apply. So far as suspending of a particular rule, it would admit certain motions that are going to be moved by the hon. Members ಏಕೆಂದರೆ ಸಂಸದೀಯ ಸದಸ್ಯರು ಮಂಡಿಸತಕ್ಕಂಥ ಮೋಷನ್ ಏನು ಇದೆ ಅದು ಹಲವಾರು ಅಂಶಗಳನ್ನು ಒಳಗೊಂಡಿದೆ. ಪ್ರಶ್ನೆಗೆ ಸಂಬಂಧಪಟ್ಟದ್ದು ಇದೆ ಇತರ ಎಲ್ಲಾ ಕಾರ್ಯಕ್ರಮಗಳನ್ನು ಅಂತ್ಯಗೊಳಿಸತಕ್ಕ ಪ್ರಯತ್ನ ಇದರ ಮುಖೇನ ಮಾಡುವುದಕ್ಕೆ ಹೊರಟಿದ್ದೀರಿ. ರೂಲ್ ೩೨೨ ರಲ್ಲಿ ನಿರ್ದಿಷ್ಟವಾದ ಸೂಚನೆಗಳಿಗೆ ಸಂಬಂಧಪಟ್ಟಂತೆ ಯಾವುದಾದರೂ ರೂಲನ್ನು ಸಸ್ಪೆಂಡ್ ಮಾಡಿ ಆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಮಾತ್ರ ಅವಕಾಶ ಇದೆ. ಆದರೆ ಇಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಒಂದೇ ಸಲ ಸೇರಿಸಿ ರೂಲ ೩೨೨ ರ ಪ್ರಕಾರ ಸಸ್ಪೆಂಡ್ ಮಾಡುವುದಕ್ಕೆ ಸಂಸದೀಯ ಮಂತ್ರಿಗಳು ಪ್ರಯತ್ನಪಡುತ್ತಾರೆ. ಅದು ರೂಲಿನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಇದರಿಂದ ಹಿಂದಿನ ಎಲ್ಲಾ ಪ್ರಿಸಿಡೆನ್ಸ್ ಏನು ಇವೆ ಅವನ್ನು ಮುರಿದುಹಾಕಿ ಹೊಸ ಸಂಪ್ರದಾಯ ಬೆಳಸುವುದಕ್ಕೆ ಅವಕಾಶ ಮಾಡಿಕೊಡಬಾರದು. ಆದುದರಿಂದ ಈ ವ್ಯಾಪ್ತಿಯಲ್ಲಿ ಸಂಸದೀಯ ಸಚಿವರ ಅಭಿಪ್ರಾಯ ಏನು ಇದೆ ಅದು ಈ ರೂಲ್ ೩೨೨ ರಲ್ಲಿ ಬರುವುದಿಲ್ಲ. ಆದುದರಿಂದ ದಯವಿಟ್ಟು ಅದನ್ನು ಈ ಸದನದ ಮುಂದೆ ತರುವುದಕ್ಕೆ ಅವಕಾಶ ಮಾಡಿಕೊಡಬಾರದೆಂದು ನನ್ನ ಒತ್ತಾಯ.

† ಶ್ರೀ ಎಸ್. ಬಂಗಾರಪ್ಪ (ಸೊರಬ) —ಮಾನ್ಯ ಅಧ್ಯಕ್ಷರೇ, ರೂಲ್ ೩೨೨ ರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ಹೇಳಿದ್ದಾರೆ ಮಾನ್ಯ ಸದಸ್ಯರಾದಂತಹ ಶ್ರೀಮಾನ್ ಕಾಗೋಡು ತಿಮ್ಮಪ್ಪನವರ ವ್ಯಾಖ್ಯಾನದಲ್ಲಿ ಪ್ರಿವಿಲೇಜ್ ಮೋಷನ್ಸ್ ಅಡ್ಜರ್ನ್‌ಮೆಂಟ್ ಮೋಷನ್ಸ್ ಕ್ವೆಶ್ಚನ್ ಅವರ್ ಎಲ್ಲವನ್ನು ಒಟ್ಟಿಗೆ ಸೇರಿಸಿ ಅದನ್ನು ಕೈಬಿಡಬೇಕೆಂದು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ರೂಲ್ ೩೨೨ರಲ್ಲಿ ಇನ್ನೊಂದು ಅರ್ಥ ಬರುತ್ತದೆ ಎನ್ನುವ ಅಭಿಪ್ರಾಯವನ್ನು ನಾನು ಹೊಂದಿದ್ದೇನೆ. ಇದರಲ್ಲಿ ಆ ವಿಷಯವನ್ನು ಪರಿಗಣಿಸಬೇಕು. "Any Member may with the consent of the Speaker a particular motion before the Assembly and if the motion is carried the rule in question shall be suspended for the time being". ಆದುದರಿಂದ, ನಿರ್ದಿಷ್ಟವಾದ ಸೂಚನೆ ಮಾತ್ರ ರೂಲ್ ೩೨೨ ರಲ್ಲಿ ಬರುತ್ತದೆ. ರೂಲ್ಸ್ ಪುಸ್ತಕ ನಾನು ನೋಡಿದ್ದೇನೆ, ರೂಲ್ ೩೨೨ ನ್ನು ಬಿಟ್ಟರೆ ಇದಕ್ಕೆ ಬೇರೆ ಯಾವ ರೂಲ್ ಕೂಡ ಇಲ್ಲ. ಮಾನ್ಯ ದೇವೇಗೌಡರು ಅಡ್ಜರ್ನ್‌ಮೆಂಟ್ ಮೋಷನ್ ಏನು ಹಾಕಿದ್ದಾರೆ, ಬೇರೆ ಬೇರೆ ಮಾನ್ಯ ಸದಸ್ಯರು ಏನು ಮೋಷನ್ಸ್ ಹಾಕಿದ್ದಾರೆ ಅವೆಲ್ಲ ಪೆಂಡಿಂಗ್ ಇದ್ದರೆ ಮಾತ್ರ ರೂಲ್ ೩೨೨ ಬರುತ್ತದೆ. Motion may be moved by any Member suspending that particular rule which would give certain rights to a particular Member to move certain motions. ಯಾವುದನ್ನು ಸಸ್ಪೆಂಡ್ ಮಾಡುವುದಕ್ಕೆ ಹೊರಟಿದ್ದೀರಿ ಎಂದು ನನಗೆ ಅರ್ಥವಾಗುವುದಿಲ್ಲ. ಇದು ರೂಲ್ ೩೨೨ ರ ಪರಿಮಿತಿಯಲ್ಲಿ ಬರುವುದಿಲ್ಲ ಅಷ್ಟೆ. ಆದುದರಿಂದ ಈಗ ಸಂಸದೀಯ ಸಚಿವರು ಜನತಾ ಕಾರ್ಯಕ್ರಮಗಳನ್ನು ಅತಿ ಶೀಘ್ರವಾಗಿ ಪರಿಗಣಿಸಬೇಕಾಗಿದೆ. ಆದುದರಿಂದ ನಾವು ರೂಲ್ಸ್ ಸಸ್ಪೆಂಡ್ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತೇವೆ. ನಾವು ಕೂಡ ಅದೇ ಜನತಾ ಕಾರ್ಯಕ್ರಮದ ಬಗ್ಗೆ ಪ್ರಶ್ನೆಗಳನ್ನು ಕಳುಹಿಸಿರುತ್ತೇವೆ ನಮ್ಮ ಹಕ್ಕನ್ನು ಮೊಟಕು ಮಾಡುವುದಕ್ಕೆ ಹೊರಟರೆ ಅದು ಕಾನೂನಿಗೆ ವಿರೋಧ ಪ್ರಜಾಸತ್ತಾತ್ಮಕ ಪದ್ಧತಿಯಲ್ಲಿ ಜನತೆಯ ಹಕ್ಕನ್ನು ಕಿತ್ತುಹಾಕತಕ್ಕ ಪ್ರಯತ್ನ ಇದು ಎಂದು ಸ್ಪಷ್ಟಪಡಿಸುತ್ತೇನೆ, ರೂಲ್ ೩೨೨ ರಲ್ಲಿ only when the motion is pending before the Assembly ಎಂದು ಹೇಳಿದೆ.

ಆದುದರಿಂದ ನಾವು ಕಳುಹಿಸಿರತಕ್ಕ ಮೋಷನ್ ಯಾವುದು ಇಲ್ಲ, ಏನು ಇಲ್ಲ. ಯಾವ ರೂಲ್ ಕೆಳಗೆ ತಾವು ರೆಸಲ್ಯೂಷನ್ ಕಳುಹಿಸಿದ್ದೀರಿ ಅದು ಇದ್ದರೆ ಒಪ್ಪಬಹುದಿತ್ತು. ಅದು ಇಲ್ಲವೆ ಇರುವುದರಿಂದ ಈ ವಿಷಯವನ್ನು ಮೂವ್ ಮಾಡುವುದಕ್ಕೆ ತಮ್ಮ ಒಪ್ಪಿಗೆ ಕೊಡಬಾರದು ಎನ್ನತಕ್ಕದ್ದು ನಮ್ಮ ಅಭಿಪ್ರಾಯ. ಆದುದರಿಂದ, ನಾನು ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಳ್ಳುವುದೇನೆಂದರೆ, ಪ್ರಜಾಸತ್ತಾತ್ಮಕ ಪದ್ಧತಿಯಲ್ಲಿ ಹೀಗೆ ಮಾಡುವುದು ಸರಿಯಲ್ಲ; ಇದಕ್ಕೆ ತಾವು ಏನಾದರೂ ಅವಕಾಶ ಮಾಡಿಕೊಟ್ಟರೆ, ಮುಂದೆ ಇದೊಂದು ಮಾದರಿಯಾಗುತ್ತದೆ. ಆದುದರಿಂದ, ತಾವು ಈ ನಿರ್ಣಯವನ್ನು ತಡೆ ಹಿಡಿಯಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಂಸದೀಯ ಸಚಿವರು ಈಗ ಮಾತನಾಡುವಾಗ ಈ ಸದನದ ಹಕ್ಕುಬಾಧ್ಯತೆಗೆ ಚ್ಯುತಿ ತರತಕ್ಕಂಥ ಮಾತನ್ನು ಇಲ್ಲಿ ಹೇಳಿದ್ದಾರೆ. ಮಾನ್ಯ ಸಚಿವರು, ಈ ಸಭೆಯ ಪ್ರಶ್ನೋತ್ತರ ವೇಳೆಯನ್ನು ಮತ್ತು ಇತರ ಸಮಯವನ್ನು ಸಸ್ಪೆಂಡ್ ಮಾಡುವುದರ ಮೂಲಕ ಜನತಾ ಕಾರ್ಯವನ್ನು ಮಾಡಬೇಕೆಂದು ಹೇಳಿದರು. ಹಾಗಾದರೆ, ನಾವು ಇತರ ಸಮಯದಲ್ಲಿ ಜನತಾ ಕಾರ್ಯವನ್ನು ಮಾಡುತ್ತಾ ಇರಲಿಲ್ಲವೇ ? ನಾವು ಹಿಂದಿನ ಸದನಗಳಲ್ಲಿ ಮಾಡಿದ್ದೆಲ್ಲಾ ಜನತಾ ಕಾರ್ಯಗಳಲ್ಲವೇ ? ಆದುದರಿಂದ, ಮಾನ್ಯ ಸಂಸದೀಯ ಸಚಿವರು ಈ ಸದನದ ಹಕ್ಕುಬಾಧ್ಯತೆಗೆ ಚ್ಯುತಿಯನ್ನು ತಂದಿದ್ದಾರೆ. ನಾವು ಮಾನ್ಯ ಸಂಸದೀಯ ಸಚಿವರ ಬಗ್ಗೆ ಒಂದು ಒಳ್ಳೆಯ ಕಲ್ಪನೆಯನ್ನು, ಭ್ರಮೆಯನ್ನು ಇಟ್ಟುಕೊಂಡಿದ್ದೆವು, ಅವರು ಪ್ರಜಾಪ್ರಭುತ್ವವಾದಿಗಳು, ಜನತಂತ್ರವಾದಿಗಳು ಎಂದು ತಿಳಿದಿದ್ದೆವು. ಆದರೆ, ಈಗ ಅವರ ಹೆಸರಿನ ಹಿಂದೆ ಮಾಜಿ ಎಂದು ಸೇರಿಸಬೇಕಾಗುತ್ತದೆ. ಈ ಮಾತನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಮಾನ್ಯ ಸಚಿವರು ಪ್ರಜಾ ಸೋಷಲಿಸ್ಟ್ ಪಕ್ಷದಲ್ಲಿ ಇದ್ದಂತವರಾಗಿ, ಪ್ರಜಾಪ್ರಭುತ್ವ ಅವಸಾನವಾಗಿರುವ ಅಮೇರಿಕಾ ದೇಶದಲ್ಲಿ ವಿದ್ಯಾಭ್ಯಾಸ ಮಾಡಿದಂತವರಾಗಿ, ಮಾನ್ಯ ಸಂಸದೀಯ ಸಚಿವರಾಗಿ ಇಲ್ಲಿ ಕುಳಿತು, ಈ ಸದನದ ಸಂಪೂರ್ಣ ಬಾಯಿ ಬಂದ್ ಮಾಡಿ, ಈ ಸದನದ ಸದಸ್ಯರ ಹಕ್ಕು ಭಾಧ್ಯತೆಯನ್ನು ಸಂಪೂರ್ಣವಾಗಿ ಬಂದ್ ಗೊಳಿಸತಕ್ಕ ಮಾತನ್ನು ಹೇಳುತ್ತಾರೆ ಎಂದು ನಾವು ಕಲ್ಪನೆಯನ್ನೇ ಮಾಡಿರಲಿಲ್ಲ. ಮಾನ್ಯ ಮಂತ್ರಿಗಳು ವಿವೇಕ ಇದ್ದೋ ಇಲ್ಲದೆಯೋ ಎಡವಿದ್ದಾರೆ. ಆದುದರಿಂದ, ತಾವು ಅವರಿಗೆ ವಿವೇಕ ಹೇಳಬೇಕಾಗುತ್ತದೆ. ಆದುದರಿಂದ, ನಮಗೆ ಪ್ರಶ್ನೋತ್ತರ ವೇಳೆ ಅತಿ ಮುಖ್ಯವಾಗಿದೆ. ಅದನ್ನು ತಾವು ಬಿಡುವುದಕ್ಕೆ ಅವಕಾಶ ಮಾಡಿಕೊಡಬಾರದು, ಮಾನ್ಯ ಅಧ್ಯಕ್ಷರೇ, ತಮಗೆ ಹಕ್ಕಿದೆ–ಯಾವ ಮೋಷನ್ನನ್ನು ಯಾವಾಗ ಮೂವ್ ಮಾಡಿಸಬೇಕು ಯಾವುದನ್ನು ಅಲೋ ಮಾಡಬೇಕು, ಯಾವುದನ್ನು ಅಲೋ ಮಾಡಬಾರದು ಎಂದು. ಆದರೆ, ಮಾನ್ಯ ಸಚಿವರು ಈ ಒಂದು ನಿರ್ಣಯವನ್ನು ತಂದು ತಮಗಿರುವ ಒಂದು ಹಕ್ಕಿನ ಮೇಲೂ ಕೂಡ ಒಂದು ರೀತಿಯ ಆಘಾತವನ್ನು ಉಂಟು ಮಾಡತಕ್ಕ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆದುದರಿಂದ, ತಾವು ದಯವಿಟ್ಟು ಈ ಪ್ರಶ್ನೋತ್ತರ ವೇಳೆ ಮತ್ತು ಇತರ ಸದನದ ಕಾರ್ಯಕಲಾಪಗಳನ್ನು ನಮಗೆ ಲಭ್ಯ ಮಾಡಿಕೊಡತಕ್ಕ ಒಂದು ರಕ್ಷಣೆ ಒದಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಸದನದ ಮಾನ್ಯ ಸದಸ್ಯರನೇಕರು ಕ್ರಿಯಾಲೋಪವನ್ನು ಎತ್ತಿ ಸಭೆಯ ಮುಂದೆ ತಂದಿರತಕ್ಕ ನಿರ್ಣಯಕ್ಕೆ ಅವಕಾಶ ಕೊಡಕೂಡದು, ಈ ಒಂದು ನಿರ್ಣಯ ಕಾನೂನು ಆಧಾರದಿಂದ ಸರಿಯಲ್ಲ ಎನ್ನುವಂಥ ವಾದವನ್ನು ಮಾಡುತ್ತಿದ್ದಾರೆ. ಆದುದರಿಂದ, ಇದರ ಬಗ್ಗೆ ಕಾನೂನಿನ ಆಧಾರ ಇದೆಯೋ ಇಲ್ಲವೋ ಎನ್ನುವುದನ್ನು ಸಾಬೀತು ಮಾಡಬೇಕಾದುದು ನಮ್ಮ ಕರ್ತವ್ಯ ಮೊದಲನೆಯದಾಗಿ ಮಾನ್ಯ ದೇವೇಗೌಡರು ನಮ್ಮ ಮುಂದೆ ಇರತಕ್ಕ ಅಜೆಂಡಾದಲ್ಲಿ ಈ ಮೋಷನ್ ಇಲ್ಲ ಎಂದು ಹೇಳಿದರು. ಆದುದರಿಂದ ನಾನು ಅಜೆಂಡಾವನ್ನು ಓದುತ್ತೇನೆ.

8th Session,

List of Business–Monday the 28th July 1975.

Time 1 P.M.

(1) Obituary reference
(2) Motion to be moved by the Chief Minister
(3) Secretary's Report
(4) Papers to be laid on the Table
(5) Legislative Business
(6) Bills for introduction

The above is the agenda for today. ಈ ಅಜೆಂಡಾ ಪೇಪರಿನಲ್ಲಿ ಹೇಗೆ ಮೋಷನ್ ತರಬೇಕೆಂದು ನಮೂದಾಗಿದೆ, ಇನ್ನು ರೂಲ್ಸ್ ಆಫ್ ಬಿಸಿನೆಸ್ ನೋಡೋಣ. ಅಲ್ಲಿನ ಚಾಪ್ಟರ್ ೭ರಲ್ಲಿ ಕ್ವೆಶ್ಚನ್ಸ್ ಎಂದು ಇದೆ. ಅದರ ಪ್ರಕಾರ ೩೨ರಲ್ಲಿ ಏನು ಹೇಳಿದೆ ಎಂದರೆ,

"32.—Unless the Speaker otherwise directs..."

I would like the Hon'ble Leader of the Opposition and other leaders to carefully hear what I am saying.

> "Unless the Speaker other wise directs, the first hour of every day of meeting shall be available for asking and answering of questions"

So, the question hour is available to this House only when the Speaker directs. If the Speaker chooses to direct otherwise, then that is the issue before us. I do not think you and I are in a mood to question the authority of the Speaker, when the Speaker says that I hereby direct the motion to be moved. Now we come to other rule-rule 322.—which says—

> "Any member may, with the consent of th Speaker, move that any rule may be suspended in its application to a particular motion bef re the Assembly and if the motion is carried the rule in question shall be suspended for the time being"

ಈಗ ಮೋಷನ್ ತಂದು, ಅದು ಮಾನ್ಯ ಸಭೆಯ ಒಪ್ಪಿಗೆ ಪಡೆದಾದಮೇಲೆ ಈ ರೂಲ್ ಸಸ್ಪೆಂಡ್ ಆಗುತ್ತದೆ ಹಾಗಾದರೆ, ಈ ರೂಲ್ ತರುವ ವಿಧಾನ ಹೇಗೆ ? ಪ್ರಶ್ನೋತ್ತರ ವೇಳೆ ಕಳೆದ ಮೇಲೆ ತರಬೇಕೇ. ಮೊದಲೇ ತರಬೇಕೇ, ಅಥವಾ ಯಾವಾಗ ತರಬೇಕು ಎನ್ನುವುದಕ್ಕೆ ರೂಲ್ ೩೨ರಲ್ಲಿ ಸ್ಪಷ್ಟವಾಗಿ ಹೇಳಿದೆ. Under Rule 32 the speaker has the full authority under the rule to direct this House to take up such a motion even during the question hour because the very first sentence says "unless the Speaker otherwise directs" If the Speaker directs that this motion may be taken up immediately then she has the authority to do so. So far as suspension of the rule under 322 is concerned, the House has the authority. But to say that this motion for suspending a rule or rules should be taken up even in the beginning itself, the Speaker has the authority. So, it is perfectly in accordance with the Rules of Procedure. And now so far as the interpretation of the section is concerned...

SRI H. D. DEVE GOWDA.—I have not raised that point at all.

ಶ್ರೀ ಡಿ. ದೇವರಾಜ ಅರಸ್.— ಮಾನ್ಯ ಸದಸ್ಯರಾದ ಶ್ರೀ ಬಂಗಾರಪ್ಪನವರು ಲಾಯರ್ ಆಗಿದ್ದಾರೆ. ಇದರ ವಿಚಾರವಾಗಿ ಚೆನ್ನಾಗಿ ತಿಳಿದಿದ್ದಾರೆ. ಅವರು ಇಂಟರ್‌ಪ್ರಿಟೇಷನ್ ಬಗ್ಗೆ ಹೇಳಿದ್ದನ್ನು ನಾನು ಗಮನವಿಟ್ಟು ಕೇಳಿದ್ದೇನೆ. ಅಡ್ಜರ್ನ್‌ಮೆಂಟ್ ಮೋಷನ್, ಪ್ರಿವಿಲೇಜ್ ಮೋಷನ್ ಮತ್ತು ಇತರ ಮೋಷನ್‌ಗಳನ್ನು ಮೂವ್ ಮಾಡುವುದಕ್ಕೆ ಅವಕಾಶ ಇಲ್ಲದೇ ಇರುವಾಗ, ಇದು ಯಾವುದಕ್ಕೆ ಸಂಬಂಧಪಡುತ್ತದೆ ಎನ್ನುವ ಒಂದು ಪ್ರಶ್ನೆಯನ್ನು ಹಾಕಿದರು. ಆದುದರಿಂದ, ಇದನ್ನು ಅವರು ಸ್ವಲ್ಪ ನಿಧಾನವಾಗಿ ಓದಿಕೊಂಡರೆ, ಅರ್ಥ ಸ್ಪಷ್ಟವಾಗುತ್ತದೆ.

'Any member may with the consent of the Speaker move that any rule may be suspended in its application to a particular motion" ಎಂದರೆ ಅಜೆಂಡಾದಲ್ಲಿ ಏನು ಮೋಷನ್ ಇದೆ, ಅದನ್ನು ಮೂವ್ ಮಾಡಿದ್ದೇವೆ. Which is that particular motion ? ನಾವು ಕಳುಹಿಸಿರತಕ್ಕ ನಿರ್ಣಯ ಇದರಲ್ಲಿ ಇರತಕ್ಕದ್ದು. ಇದನ್ನು ನಾನು ಮಾನ್ಯ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಅಷ್ಟೇ ಅಲ್ಲದೆ, ಈ ಮೋಷನ್ ಅನ್ನು ಇವತ್ತಿನ ಅಜೆಂಡಾದಲ್ಲಿ ಸೇರಿಸಿದ್ದಾರೆ.

With particular reference to this motion, we are seeking the House to give leave for suspending the question hour or the particular rule or rules.

According to article 208 of the Constitution, "the Houses of Legislature of a State may make rules for regulating, subject to the provisions of this Constitution, its procedure and the conduct of its business." So, it is the House that makes rules, it is the house that suspends the rules The House which has the power to make rules, has equally the power to suspend rules. Your argument holds good when the Houses does not approve of it. That is why it is before the House. Otherwise we would have requested the Speaker to carry on. The Speaker in her own authority will not be in a position to do it. The Speaker has the authority to say that I direct that this motion may be taken up for discussion.

1-30 P. M.

I take it that under that authority the Speaker has directed this House to take up this motion. So, I submit that the point of order raised by the hon. Members including the Leader of the Opposition has no basis and they have not been able to show, in spite of their laborious efforts, that we are going against any rule or law or against the Constitution. There is therefore no substance in their argument.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯುವರೇ, ಮುಖ್ಯ ಮಂತ್ರಿಗಳು ನಾನು ಈಗ ಎತ್ತಿರತಕ್ಕ ಕ್ರಿಯಾಲೋಪದ ಬಗ್ಗೆ ವಿವರಣೆಯನ್ನು ಕೊಟ್ಟು ನನ್ನ ಕ್ರಿಯಾಲೋಪದಲ್ಲಿ ಹುರುಳಿಲ್ಲ ಎನ್ನುವ ವಾದವನ್ನು ಮಂಡಿಸಿದ್ದಾರೆ, ಅದರ ಬಗ್ಗೆ ನಾನು ಒಂದು ವಿವರಣೆಯನ್ನು ಕೊಡಲು ಇಷ್ಟ ಪಡುತ್ತೇನೆ. ಮುಖ್ಯ ಮಂತ್ರಿಗಳು ಮೊದಲನೆಯ ವಾದ, ರೂಲ್ ೩೨೦ರ ಪ್ರಕಾರ ಅಧ್ಯಕ್ಷರಿಗೆ ಇರತಕ್ಕ ಅಧಿಕಾರದ ವ್ಯಾಪ್ತಿಯನ್ನು ತಿಳಿಸಿದ್ದಾರೆ ಮತ್ತೆ ರೂಲ್ ೩೨೦ರ ಪ್ರಕಾರ ಅವರು ಇದನ್ನೂ ಜೋಡಣೆ ಮಾಡಿ, ಈ ಸಾರಿ ಪ್ರಶ್ನೋತ್ತರ ವೇಳೆಯನ್ನು ಕಿತ್ತು ಹಾಕುವುದಕ್ಕೆ ಅವರಿಗೆ ಅಧಿಕಾರ ಇದೆ ಇದಕ್ಕೆ ಮಂಜೂರಾತಿಯನ್ನು ಈ ಒಂದು ಮೋಷನ್ ಅನ್ನು ತರುವುದರ ಮುಖೇನ, ಕೊಡುವುದಕ್ಕೆ ಅವಕಾಶ ಇದೆಯೆಂದು ಹೇಳಿದರು ಪ್ರಶ್ನೋತ್ತರ ವೇಳೆಯನ್ನು ಕಿತ್ತುಹಾಕುವುದಕ್ಕೆ ಸಭೆಯ ಎರಡು ಭಾಗದ ಆರ್ಗ್ಯುಮೆಂಟ್ಸ್ ಏನು ಇದೆ ಅದನ್ನು ನಾವು ಗಮನಿಸಬೇಕು ರೂಲ್ ೩೨೦ರ ಪ್ರಕಾರ ಪ್ರಶ್ನೋತ್ತರ ವೇಳೆಯನ್ನು ತೆಗೆದುಹಾಕುವುದಕ್ಕೆ ಸಭೆಗೆ ಅಧಿಕಾರ ಇದೆಯೆಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ ಈ ಸಭೆಯು ಇಂಥ ಒಂದು ನಿರ್ಣಯವನ್ನು ಇನ್ನೂ ತೆಗೆದುಕೊಂಡಿಲ್ಲ. ಇದು ಅಧಿವೇಶನದ ಪ್ರಥಮ ದಿನ. ನಿಯಮದ ಪ್ರಕಾರ ಸದಸ್ಯರಿಗೆ ಇರತಕ್ಕ ಅಧಿಕಾರವನ್ನು ಮೊಟಕು ಮಾಡತಕ್ಕದ್ದನ್ನು ತಾವು ಕಾರ್ಯಕ್ರಮದ ಪಟ್ಟಿಯಲ್ಲಾಗಲೀ ಅಥವಾ ಅಧಿವೇಶನದ ಪ್ರಾರಂಭದಲ್ಲಾಗಲೀ ತಿಳಿಸಿಲ್ಲ.

SRI D. DEVARAJ URS,—I again repeat that we are not well within our rights to make any charge against the Speaker and say that she has curtailed the rights of this House. To say that she has purposely gone into the question of curtailing the rights or privileges of members is not correct ; it is also not fair on our part to lay that charge at the door of the Speaker.

ಶ್ರೀ ಎಚ್. ಡಿ. ದೇವೇಗೌಡ,—ನಾನು ಸಭಾಧ್ಯಕ್ಷಣೀಯವರ ಮೇಲೆ ಆಪಾದನೆ ಮಾಡುತ್ತಾ ಇಲ್ಲ. ಆದರೆ ನಮ್ಮ ಹಕ್ಕನ್ನು ರಕ್ಷಣೆ ಮಾಡಬೇಕು ಎಂದು ಮಾತ್ರ ಕೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ರೂಲ್ ೩೨೦ ಅನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಅದರ ಪ್ರಕಾರ ತಾವು ಕಾರ್ಯಕ್ರಮದ ಪಟ್ಟಿಯನ್ನು ಕೊಡತಕ್ಕ ಕಾಲದಲ್ಲಿ ಇಂಥ ಒಂದು ಕಾರಣದಿಂದ ಪ್ರಶ್ನೋತ್ತರವೇಳೆಯನ್ನು ಕಿತ್ತುಹಾಕಿ

ದ್ದೇವೆ, ಅಧಿವೇಶನದ ಪ್ರಥಮ ದಿನ ಪ್ರಶ್ನೋತ್ತರವೇಳೆಯಿಲ್ಲ ಎಂದು ತಿಳಿಸಿಲ್ಲ. ಸಭೆಯ ಕಾರ್ಯ ಕಲಾಪ ಪ್ರಾರಂಭವಾದಾಗ ಸಂತಾಪ ಸೂಚಕ ನಿರ್ಣಯವಾದ ಮೇಲೆ ಮಾನ್ಯ ಸಂಸದೀಯ ಸಚಿವರು ತಮ್ಮ ಒಂದು ಮೋಷನ್ ಅನ್ನು ಸಭೆಯ ಮುಂದೆ ಇಡಲಿಕ್ಕೆ ಪ್ರಯತ್ನ ಪಟ್ಟು ಈ ದಿವಸ ಪ್ರಶ್ನೋತ್ತರ ವೇಳೆಯಿಲ್ಲ ಎಂದು ತಿಳಿಸಿದ್ದಾರೆ. ಈ ಅಧಿವೇಶನದಲ್ಲಿ ಇಂಥ ಕಾರಣದಿಂದ ಪ್ರಶ್ನೋತ್ತರವೇಳೆಯನ್ನು ಕಿತ್ತುಹಾಕಿದ್ದೇವೆ ಎಂಬ ತಾವು ನಿರ್ದೇಶನವನ್ನು ಕೊಟ್ಟಿದ್ದರೆ ಈ ಒಂದು ಸಮಸ್ಯೆ ಬಹುಶಃ ಉದ್ಭವವಾಗುತ್ತಾ ಇರಲಿಲ್ಲ.

ಅಧ್ಯಕ್ಷರು.—ನಾರ್ಮಲ್ ಕೋರ್ಸಿನಲ್ಲಿ ಪ್ರಶ್ನೋತ್ತರ ವೇಳೆಯನ್ನು ಹಾಕುವುದಕ್ಕೆ ಅವಕಾಶ ಇದೆ ಆದರೆ ರೆಸಲ್ಯೂಷನ್‌ನಲ್ಲಿ ಇನ್‌ಕ್ಲೂಡಿಂಗ್ ಕೊಶ್ಚನ್ಸ್, ಕಾಲಿಂಗ್ ಅಟೆನ್‌ಷನ್ಸ್ ಅಂಡ್ ಎನಿ ಅದರ್ ಬಿಸಿನೆಸ್ ಅನ್ನು ಸಭೆಯ ಮುಂದೆ ತರುವುದಕ್ಕೆ ಬರುವುದಿಲ್ಲವೆಂದು ಇರುವುದರಿಂದ ಪ್ರಶ್ನೋತ್ತರ ವೇಳೆ ಬೇಡ ಎಂದು ರೆಸಲ್ಯೂಷನ್ ಅನ್ನು ಕಾರ್ಯಕಲಾಪದ ಪಟ್ಟಿಯಲ್ಲಿ ಸೇರಿಸುವುದಕ್ಕೆ ಒಪ್ಪಿಕೊಂಡಿದ್ದೇವೆ. ಅದನ್ನು ನಿಮ್ಮ ಮುಂದೆ ಇಟ್ಟಿದ್ದೇವೆ. ಅದರಂತೆ ಪ್ರಶ್ನೆಗಳನ್ನು ಸೇರಿಸಿಲ್ಲ. ತಾವು ಈಗ ಹೇಳುತ್ತಾ ಇರುವುದರಲ್ಲಿ ಯಾವ ತರಹದ ಬಲವಿಲ್ಲ ಎಂದು ಅನ್ನಿಸುತ್ತದೆ.

ಶ್ರೀ ಕಾಗೋಡುತಿಮ್ಮಪ್ಪ.—ಈ ನಿರ್ಣಯ ಸದನದಲ್ಲಿ ಅಂಗೀಕಾರವಾದಮೇಲೆ ಯಾವ ತೀರ್ಮಾನವನ್ನು ಕೈಗೊಳ್ಳುತ್ತಾರೋ ಅದಕ್ಕೆ ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ಇದರ ಬಗ್ಗೆ ಇವತ್ತು ತೀರ್ಮಾನ ಆಗಬಹುದು, ನಾಳೆ ಆಗಬಹುದು, ಯಾವಾಗ ಆಗುತ್ತದೆಯೋ ಯಾವಾಗ ಹೋಗುತ್ತದೆಯೋ ಎನ್ನುವುವನ್ನು ಈ ಸಂದರ್ಭದಲ್ಲಿ ನಿರೀಕ್ಷಣೆ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರವರ ರೂಲಿಂಗ್ ಅನ್ನು ಪ್ರಶ್ನೆ ಮಾಡುವುದು ಸರಿಯಲ್ಲ. ರೂಲ್ ೩೨ರ ಕೆಳಗೆ ಏನು ಹೇಳಿದ್ದಾರೆಂದರೆ "Unless Speaker otherwise directs" ಎಂದು ಇದೆ, ಇದರ ಪ್ರಕಾರ ಅವರು ಡೈರೆಕ್ಟ್ ಮಾಡುತ್ತಾರೆ. ಅದರ ಪ್ರಕಾರ ಮೋಷನ್ ಅನ್ನು ತೆಗೆದುಕೊಳ್ಳಿ ಎಂದು ಪ್ರಿಂಟ್ ಮಾಡಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಿಂಟ್ ಆಗಿರುವುದು ನಮ್ಮ ಹತ್ತಿರವೂ ಇದೆ.

ಶ್ರೀ ಡಿ. ದೇವರಾಜ ಅರಸ್.—ಸರಿ, ಓದಿಕೊಳ್ಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಓದಿಕೊಂಡೇ ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಇಂಥ ವಿಶೇಷ ಪರಿಸ್ಥಿತಿಯಲ್ಲಿ ಅಧ್ಯಕ್ಷರವರಿಗೆ ನಿರ್ದೇಶನವನ್ನು ಕೊಡಲಿಕ್ಕೆ ಅಧಿಕಾರ ಇದೆ, ಆದ್ದರಿಂದ ಪ್ರಶ್ನೋತ್ತರ ವೇಳೆಯನ್ನು ಕಿತ್ತುಹಾಕುವುದಕ್ಕೆ ಡೈರೆಕ್ಟ್ ಮಾಡಿದ್ದಾರೆ The Hon Member cannot question her authority to direct. To that extent the Speaker has the authority and she has given a ruling. Why are they again questioning ?

ಶ್ರೀ ಕಾಗೋಡು ತಿಮ್ಮಪ್ಪ.—ಇದನ್ನು ಮೊದಲೇ ಹೇಳಿದ್ದರೆ ಈ ಸಮಸ್ಯೆಯೇ ಉದ್ಭವವಾಗುತಾ ಇರಲಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಪ್ರಶ್ನೋತ್ತರ ವೇಳೆಯನ್ನು ಕಿತ್ತು ಹಾಕತಕ್ಕದ್ದು, ಕಿತ್ತು ಹಾಕದೇ ಇರತಕ್ಕದ್ದು, ಈ ಸದನ ಏನು ಅಭಿಪ್ರಾಯ ಕೊಡುತ್ತದೆಯೋ ಅದನ್ನು ಅವಲಂಬಿಸಿದೆ.

ಅಧ್ಯಕ್ಷರು.—ಪ್ರಶ್ನೋತ್ತರವೇಳೆ ಇದ್ದಿದ್ದರೆ ಅಜೆಂಡದಲ್ಲಿ ಬರುತ್ತಿತ್ತು.

SRI S. M. KRISHNA.—If the House wants to have the question hour or wants to move an adjournment motion or any other motion, the House can take a decision in the next few minutes Let us have patience. The Speaker has made it abundantly clear that she leaves it to the House. According to the framers of the Constitution, the House shall take that decision. It is only after taking the consent of the House that the question hour is included in the agenda.

ಶ್ರೀ ಕಾಗೋಡು ತಿಮ್ಮಪ್ಪ.—ಇದಕ್ಕೆ ಪ್ರಿಸಿಡೆಂಟ್ ಇಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ವಿರೋಧಪಕ್ಷದ ಸದಸ್ಯರುಗಳು ತಮ್ಮ ರೂಲಿಂಗ್‌ಅನ್ನು ಧಿಕ್ಕರಿಸಬೇಕು ಎಂದು ತೀರ್ಮಾನ ಮಾಡಿಕೊಂಡು ಬಂದಿದ್ದಾರೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ತಾವು ರೂಲಿಂಗ್ ಕೊಟ್ಟಿದ್ದೀರಿ ಅದನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ನಾನು ಇಷ್ಟು ಮಾತ್ರ ತಮ್ಮ ಹತ್ತಿರ ನಿವೇದನೆ ಮಾಡಿಕೊಳ್ಳಬಲ್ಲೆ, ಮಾನ್ಯ ಪುಟ್ಟಸ್ವಾಮಿಯವರು ಈಗತಾನೆ ಹೇಳಿದ್ದಾರೆ.

ಮಾನ್ಯ ಅಧ್ಯಕ್ಷರೆ, ತಮ್ಮ ರೂಲಿಂಗನ್ನು ರಿವೈಸ್ ಮಾಡಿ ಎಂದು ಕೇಳಿಕೊಳ್ಳಬೇಕಾಗಿದೆ. ರೂಲ್ ೩೨ರ ಪ್ರಕಾರ "Unless the Speaker otherwise directs" ಎಂದು ಇದೆ. So it is exclusively your right. It is not before the House.

ಅಧ್ಯಕ್ಷರು.—ತಿರುಗಿ ತಾವು ಹಿಂದಕ್ಕೆ ಹೋಗುತ್ತಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ರೂಲಿಂಗ್ ಕೊಡತಕ್ಕ ಸಂದರ್ಭದಲ್ಲಿ ತಾವು ಒಂದು ವಿಷಯವನ್ನು ಹೇಳಿದಿರಿ. ಅದೇನೆಂದರೆ ಈ ಹೌಸ್ ಅಗ್ರೀ ಆಗುವ ಹಾಗಿದ್ದರೆ ನನ್ನದೇನು ಅಭ್ಯಂತರವಿಲ್ಲ ಎಂದು. ರೂಲ್ ೩೨ರ ಪ್ರಕಾರ ಈ ಸಭೆ ತಮಗೆ ಅಧಿಕಾರ ಕೊಟ್ಟಿದ್ದರೆ, ನಾವು ಈ ಹೌಸ್‌ಗೆ ಅದನ್ನು ರೆಫರ್ ಮಾಡಿ ಈ ಸಭೆಗೆ ಅಧಿಕಾರ ಕೊಡಬೇಕಾಗಿತ್ತು. ರೂಲ್ ೩೨ರ ಪ್ರಕಾರ ಅಧಿಕಾರ ತಮಗೆ ಇರತಕ್ಕದ್ದು "Unless the speaker otherwise directs" ಅಷ್ಟೇ ಇರುವುದು ರೂಲ್ ೩೨ರ ಪ್ರಕಾರ ಈ ವಿಷಯವನ್ನು ಸದನಕ್ಕೆ ಬಿಟ್ಟಿದ್ದೇನೆ, ಇದನ್ನು ತಾವೇ ತೀರ್ಮಾನ ಮಾಡಿ ಎಂದು ಹೇಳುತ್ತೀರಿ. ಆದರೆ ಇದು ರೂಲ್ ೩೨ರ ಪ್ರಕಾರ ಬರುವುದಿಲ್ಲವೆಂದು ನನ್ನ ಅಭಿಪ್ರಾಯ. ಒಂದು ವೇಳೆ ತಾವು ಇದನ್ನು ಸಸ್ಪೆಂಡ್ ಮಾಡಬೇಕಾಗಿದ್ದರೆ ಆ ಬಗ್ಗೆ ತಮಗೆ ಹಕ್ಕು ಇದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ನಾನು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಯಾರಾಗಿಲ್ಲ. ಪ್ರಶ್ನೋತ್ತರ ವೇಳೆಯನ್ನು ಬಿಡುವುದಕ್ಕೆ ಏನು ಅಂಥ ಕಂಪೆಲಿಂಗ್ ರೀಸನ್ಸ್ ಇವೆ? ಅವರು ಹೇಳಿದ ಹಾಗೆ ಮೋಷನ್ ಇರುವುದರಿಂದ ಎಂದು ಹೇಳುತ್ತೀರಿ. ಈಗಲೂ ಕೂಡ ಈ ಮೋಷನ್ ನಮ್ಮ ಮುಂದೆ ಇಲ್ಲ ಆ ಮೋಷನ್ ನಮ್ಮ ಮುಂದೆ ಇದ್ದಿದ್ದರೆ ಅದು ಕಂಟಿನ್ಯೂ ಆಗಿದ್ದರೆ ಆಗ ಅದು ಬರುತ್ತಿತ್ತು. ಆದುದರಿಂದ ತಾವು ಈಗ ಏನೊಂದು ರೂಲಿಂಗ್ ಕೊಟ್ಟಿದ್ದೀರಿ; ಅದನ್ನು ರಿವೈಸ್ ಮಾಡಿ ಅವಕಾಶವನ್ನು ಮಾಡಿಕೊಡಬೇಕು. ಅನಂತರ ಇದರ ಬಗ್ಗೆ ನಾವು ಚರ್ಚೆ ಮಾಡಿ ನೋಡೋಣ.

ಅಧ್ಯಕ್ಷರು.—ನಾನು ಮತ್ತೊಂದು ಸಾರಿ ಹೇಳುತ್ತೇನೆ. ಏನೆಂದರೆ ಈ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳುವುದು, ಬಿಡುವುದು, ಬಹಳ ದೊಡ್ಡ ಜವಾಬ್ದಾರಿ. ಇಂಥ ಒಂದು ದೊಡ್ಡ ಜವಾಬ್ದಾರಿಯನ್ನು ನಾನು ಹೊತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದು ದೊಡ್ಡ ಜವಾಬ್ದಾರಿ ಕೆಲಸವಾಗಿರುವುದರಿಂದ ಇದನ್ನು ಮಾನ್ಯ ಸದಸ್ಯರಿಗೆ ಬಿಟ್ಟಿದ್ದೇನೆ. ಮಾನ್ಯ ಸದಸ್ಯರು ಬೇಕಾದರೆ ಈ ನಿರ್ಣಯವನ್ನು ಪಾಸ್ ಮಾಡಬಹುದು, ಇಲ್ಲದೇ ಹೋದರೆ ಬಿಡಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷಿಣಿಯವರೆ, ತಾವು ಈ ಜವಾಬ್ದಾರಿಯನ್ನು ಈ ಸದನದ ಮೇಲೆ ಹಾಕುವುದರ ಬದಲು, ಆ ನಿರ್ಣಯವನ್ನು ಮಂಡಿಸುವುದಕ್ಕೆ ಆದೇಶವನ್ನು ಕೊಡಿ. ಇದು ಪ್ರಜಾಪ್ರಭುತ್ವದ ದೃಷ್ಟಿಯಿಂದ ಸಂಪ್ರದಾಯದ ದೃಷ್ಟಿಯಿಂದ ಬಹಳ ಯೋಗ್ಯವಾದುದು; ಇದು ಬಹಳ ಮುಖ್ಯವಾದುದಾಗಿರುವುದರಿಂದ ತಾವು ಈ ಬಗ್ಗೆ ಒಂದು ಐತಿಹಾಸಿಕ ನಿರ್ಣಯವನ್ನು ತೆಗೆದುಕೊಳ್ಳಬೇಕು. ನಾಡಿನ ಜನತಂತ್ರದ ಇತಿಹಾಸದಲ್ಲಿ ಒಂದು ದೊಡ್ಡ ಕಳಂಕಪ್ರಾಯವಾದ ಅಧ್ಯಾಯವನ್ನು ಸಂಸತ್ತಿನ ಸಚಿವರು ಮಾಡುತ್ತಾ ಇರುವಹಾಗೆ ಕಾಣುತ್ತಿದೆ ಇಂಥಾ ಒಂದು ಕೆಟ್ಟ ಸಂಪ್ರದಾಯವನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡಬಾರದು ತಾವು ದಯವಿಟ್ಟು ಇದಕ್ಕೆ ಆದೇಶವನ್ನು ಕೊಡಬೇಕು. ತಾವು ಇದರ ಬಗ್ಗೆ ಅವರಿಗೆ ಸ್ವಲ್ಪ ವಿವೇಕವನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

OFFICIAL RESOLUTION

Re : Suspension of Rules relating to business intiatel by a private Member

† SRI S. M. KRISHNA.—I beg to move :

"That this House resolves that the current Session of Legislative Assembly being in the nature of an Emergency Session to transact certain urgent and important Govern-

ment business, only Government Business and no other business whatsoever including questions, call attention and any other business to be initiated by a private member be brought before are transaoted during the session and all relevant rules on the subject in the Rules of Procedure and Conduct of Business in Legislative Assembly stand suspended to the extent.''

MADAM SPEAKER.—Resolution moved :

"That this House resolves that the current Session of Legislative Assembly being in the nature of an Emergency Session to transact certain urgent and important Government businesss, only Government Bussiness and no other business whatsoever including questions, call attention and any other business to be initiated by a private member be brought before or transacted during the session and all relevant rules on the subject in the Rules of Procedure and Conduct of Business in Legislative Assembly stand suspended to the extent."

MADAM SPEAKER.— There is an Amendment by Sri T. R. Shamanna.

SRI T. R. SHAMANNA.—I move :

"At the end of the resolution, the following proviso shall be added :

Provided that during the Emergency Session a member with previous consent of the Hon. Speaker be permitted to raise under rule 312 or in any other manner as suggested by the Speaker, any matter of public interest,''

MADAM SPEAKER.—Amendment moved :

"At the end of the resolution, the following proviso shall be added :

Provided that during the Emergency Session a member with previous consent of the Hon. Speaker be permitted to raise under rule 312 or in any other manner as suggested by the speaker, any matter of public interest.''

ಶ್ರೀ ಎಚ್. ಡಿ. ದೇವೇಗೌಡ.— ಶ್ರೀಮಾನ್ ಕೃಷ್ಣರವರು ಈಗ ಏನೊಂದು ಮೋಷನ್‌ನ್ನು ಮೂವ್ ಮಾಡಿದ್ದಾರೆ ಅದನ್ನು ೩೧೨ರ ರೂಲ್ ಕೆಳಗೆ ಮೂವ್ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. Am I corrtect ? Under what provision of the rules you have moved that resolution Please tell us ?

ಶ್ರೀ ಎಸ್. ಎಂ. ಕೃಷ್ಣ.—ಈಗಾಗಲೇ ರೆಸಲ್ಯೂಷನ್‌ನ್ನು ಮೂವ್ ಮಾಡಿದ್ದಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಯಾವ ಸೆಕ್ಷನ್ ಪ್ರಕಾರ ಅವರು ಮೂವ್ ಮಾಡಿದ್ದಾರೆ ?

ಶ್ರೀ ಡಿ. ದೇವರಾಜ ಅರಸ್.—ಆರ್ಟಿಕಲ್ ೨೦೮ರ ಪ್ರಕಾರ ಮೂವ್ ಮಾಡಿದ್ದಾರೆ.

SRI KAGODU THIMMAPPA.—Authorises the House to frame rules. Here is the rule framed by this House.

SRI D. DEVARAJ URS.—This is again a rule We want to have a rule to suspend rules.

ಶ್ರೀ ಕಾಗೋಡು ತಿಮ್ಮಪ್ಪ.—ಇದಕ್ಕೆ ನಾವು ವಿತ್ತಂಡವಾದ ಎಂದು ಕರೆಯುತ್ತೇವೆ. ಹಿಂದೆ ರಾಜ್ಯಾಂಗದ ಪ್ರಕಾರ ಏನೊಂದು ಅಧಿಕಾರ ಈ ಸದನಕ್ಕೆ ಇತ್ತೋ ಅದರ ಪ್ರಕಾರ ಒಂದು ರೂಲನ್ನು ಮಾಡಿಕೊಂಡಿದ್ದೇವೆ. ನಾವು ಹೊಸದಾಗಿ ರೂಲನ್ನು ಮಾಡಿಕೊಳ್ಳುವವರೆಗೂ ಈಗ ಸಧ್ಯದಲ್ಲಿ ಏನೊಂದು ಅದರ ಕೆಳಗೆ ಈ ನಿರ್ಣಯವನ್ನು ಅವರು ಇಡಬೇಕು. ಈಗ ಇವರು ರೂಲ್ಸ್ ಆಫ್ ಪ್ರೊಸೀಜರ್ ಏನಿದೆ ಅದರ ಕೆಳಗೆ ಈ ನಿರ್ಣಯವನ್ನು ರೂಲ್ಸ್ ಆಫ್ ಪ್ರೊಸೀಜರ್ ಇದ್ದೆ ಮಂಡಿಸುತ್ತಿದ್ದಾರೆಯೋ ಎಂಬುದು ನಮಗೆ ಬೇಕು. ನೀವು ಮಾಡತಕ್ಕ ಪ್ರತಿಯೊಂದು ಕೆಲಸವೂ ಕೂಡ ಸಂಪ್ರದಾಯಬದ್ಧವಾಗಿರಬೇಕು.

SRI S. M. KRISHNA.—Apart from Article 208 there is also Article 209 of the Constitution which gives authority for the regulation or laws, Procedure in the L. A. in relation to Financial business and all other business,

ಶ್ರೀ ಹೆಚ್. ಡಿ. ದೇವೇಗೌಡ.—ಆರ್ಟಿಕಲ್ ೨೦೮ರ ಪ್ರಕಾರ ಈ ಮೋಷನ್‌ನ್ನು ಸಭೆಯ ಮುಂದಿಟ್ಟಿದ್ದಾರೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅದರ ಪ್ರಕಾರ ಈ ಸಭೆಯ ಕಾರ್ಯ ಕಲಾಪಗಳು ಯಾವರೀತಿಯಲ್ಲಿ ನಡೆಯಬೇಕು ಎನ್ನತಕ್ಕಂಥಾದ್ದನ್ನು ನಿರೂಪಣೆ ಮಾಡಿದ್ದಾರೆ. ರೂಲ್ಸ್ ಆಫ್ ಪ್ರೊಸೀಜರ್ ೨೦೮ರ ಪರಿಮಿತಿಯೊಳಗೇ ಈ ಸಭೆಯ ಕಾರ್ಯಕಲಾಪಗಳು ನಡೆಯಬೇಕೆಂಬುದನ್ನು ಈ ಮಾನ್ಯ ಸಭೆ ಈಗಾಗಲೇ ಅಂಗೀಕಾರ ಮಾಡಿದೆ. ಈಗ ಈ ಒಂದು ನಿಯಮಾವಳಿಗೆ ತಿದ್ದುಪಡಿಯನ್ನು ತರಬೇಕಾದರೆ ಈ ಸಭೆ ಅದನ್ನು ಪುನಃ ಪರಿಶೀಲನೆ ಮಾಡುವುದಕ್ಕೆ ಅವಕಾಶ ಇದೆ, ಈ ನಿಯಮಾವಳಿ ಗಳಲ್ಲಿ ಮಾರ್ಪಾಡು ಮಾಡಬೇಕೆಂಬ ವಿಷಯದಲ್ಲಿ ಈ ಸದನಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನೂ ಕೂಡ ರಚನೆ ಮಾಡಿದೆ. ಅಲ್ಲದೆ ಆ ಸಮಿತಿಯು ಯಾವ ಯಾವ ನಿಯಮಾವಳಿಗಳನ್ನು ಮಾರ್ಪಾಡು ಮಾಡಬೇಕೆಂಬ ಬಗ್ಗೆ ತನ್ನ ಕರ್ತವ್ಯವನ್ನೂ ಕೂಡ ನಿರ್ವಹಣೆ ಮಾಡುತ್ತಿದೆ. ಅಂಥಾದ್ದರಲ್ಲಿ ಈ ಸಮಿತಿಯ ಕಾರ್ಯವನ್ನು ಮೊಟಕುಮಾಡಿ ಈ ರೀತಿಯ ಒಂದು ಮೋಷನ್‌ನ್ನು ತರುವ ಔಚಿತ್ಯವಾದರೂ ಏನು ಎಂಬುದನ್ನು ಈ ಸಭೆಗೆ ದಯಮಾಡಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಆರ್ಟಿಕಲ್ ೨೦೮ರ ಪ್ರಕಾರ ಈ ಮನೆಗೆ ಪೂರ್ಣ ಅಧಿಕಾರ ಕೊಟ್ಟಿದೆ. ರೂಲ್ಸ್ ಫ್ರೇಮ್ ಮಾಡಿ, ಆ ರೂಲ್ಸ್ ಪ್ರಕಾರ ಈ ಸಭೆ ನಿರ್ಣಯಿಸುತ್ತದೆ. ಇನ್ನೊಬ್ಬರು ಹೇಳುವ ವಿಚಾರ ಏನು ಎನ್ನುವುದನ್ನು ಕೂಡ ಕೇಳಬೇಕು. Rules are permanent ; rules are temporary ; rules could be amended. Through this motion we may say we amend the present rules and suspend the rules. ಯಾವ ರೀತಿ ಬೇಕಾದರೂ ನಾವು ಬದಲಾಯಿಸಿಕೊಳ್ಳಬಹುದು. ಪ್ರಶ್ನೋತ್ತರ ವೇಳೆ ಇರಬೇಕೇ ಬೇಡವೇ, ಇರಬೇಕು ಎಂದರೂ ರೂಲ್, ಬೇಡ ಎಂದರೂ ರೂಲ್. To suspend the question hour or any other rule which governs the conduct of business in this House for a certain duration. That is why article 208 is there,

MADAM SPEAKER.—I have already submitted. I did quote this article 208 and stated that the House has inherrent right, according to the Constitution, to make or amend or suspend the rules. Having made the rules the House has also the authority to suspend the rules.

SRI H. D. DEVE GOWDA.— The House has already constituted a Committee to go into the rules.

SRI D. DEVARAJ URS.—That is a permanent thing. But the motion now brought here pertains only to a specific period.

SRI H. D. DEVE GOWDA.—If the Hon. Speaker were to agree then it is alright.

ಶ್ರೀ ಕಾಗೋಡು ತಿಮ್ಮಪ್ಪ.—ರಾಜ್ಯಾಂಗದ ಪ್ರಕಾರ ಈ ಸದನಕ್ಕೆ ನಿಯಮಗಳನ್ನು ರದ್ದು ಮಾಡತಕ್ಕ ಅಧಿಕಾರ ಇದೆ. ಅದರ ಪ್ರಕಾರ ಮಾಡಿರತಕ್ಕದ್ದು. ಈಗ ಯಾವುದೇ ಮೋಷನನ್ನು ತಾವು ಮೂವ್ ಮಾಡಬೇಕಾದರೆ, It is under certain rule.

ಅಧ್ಯಕ್ಷರು.—ರೂಲ್ಸ್ ಮಾಡುವುದಕ್ಕೂ ಅಧಿಕಾರ ಇದೆ, ಸಸ್ಪೆಂಡ್ ಮಾಡುವುದಕ್ಕೂ ಅಧಿಕಾರ ಇದೆ.

SRI KAGODU THIMAPPA.—To invoke constitutional provisions we have to suspend the entire rules of procedure.

SRI S. M. KRISHNA.—This is only in respect of questions, call attention notices and other business. Let us not confuse the issues. We have had enough of that. Let us now be clear. The leader of Opposition has made submission to create an impression that these rules are going to be suspended for ever. It is not so. This is only for the current session. There is no point in debating over this issue.

ಶ್ರೀ ಹೆಚ್. ಡಿ. ದೇವೇಗೌಡ.—ಯಾವ ಕಾರಣದಿಂದ ಈ ರೂಲ್ಸ್ ತಂದಿದ್ದೀರಿ? ಮಾನ್ಯ ಕೃಷ್ಣರವರು ಹಾರಿಕೆ ಉತ್ತರ ಕೊಡುತ್ತಿದ್ದಾರೆ, ಕೃಷ್ಣರವರ ಅಧಿಕಾರ ತಳಮಳಗೊಂಡಿದೆಯೋ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಪ್ರಾಸ್ತಾವಿಕವಾಗಿ ಈ ನಿರ್ಣಯವನ್ನು ಮಂಡಿಸಿರತಕ್ಕಂಥ ಉದ್ದೇಶ ಮತ್ತು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಉಲ್ಲೇಖಿಸುವುದಕ್ಕೆ ಪ್ರಯತ್ನಪಟ್ಟೆ. ನಮಗೆಲ್ಲರಿಗೂ ವೇದ್ಯವಾಗಿರುವಂತೆ ಕಳೆದ ತಿಂಗಳು ೨೬ನೇ ತಾರೀಖಿನಿಂದ ದೇಶದಲ್ಲಿ ಆಂತರಿಕ ಭದ್ರತೆಯನ್ನು ಕಾಪಾಡಬೇಕು. ಆ ಮೂಲಕ ದೇಶದ ಸಮಗ್ರತೆಯನ್ನು ಉಳಿಸಿಕೊಂಡು ಹೋಗಬೇಕು ಎನ್ನುವ ದೃಷ್ಟಿಯಿಂದ ರಾಷ್ಟ್ರಪತಿಗಳು ತುರ್ತುಪರಿಸ್ಥಿತಿಯನ್ನು ಘೋಷಿಸಿದ್ದಾರೆ. ಆದುದರಿಂದ ನಾವು ಈಗ ತುರ್ತುಪರಿಸ್ಥಿತಿಯಲ್ಲಿದ್ದೇವೆ. ದೇಶವನ್ನು ವಿಚ್ಛಿದ್ರಕಾರಕ ಶಕ್ತಿಗಳ ವಶಕ್ಕೆ ಕೊಡುವುದರಿಂದ ದೊಡ್ಡ ಅನಾಹುತವಾಗುತ್ತಿತ್ತು ಎನ್ನತಕ್ಕಂಥಾದ್ದನ್ನು ರಾಷ್ಟ್ರಪತಿಗಳು ಮನಗಂಡು, ದೇಶದಲ್ಲಿ ತುರ್ತುಪರಿಸ್ಥಿತಿಯ ಘೋಷಣೆ ಆದ ಮೇಲೆ, ನಮ್ಮ ದೇಶದ ಸಂಸತ್ತು ದೆಹಲಿಯಲ್ಲಿ ಸೇರಿ ಕಾರ್ಯಕಲಾಪವನ್ನು ನಡೆಸಿಕೊಂಡು ಬರುತ್ತಿದೆ. ಈ ದೇಶದ ಆರ್ಥಿಕ ಪರಿಸ್ಥಿತಿ ಹೋಗುತ್ತಾ ಇರತಕ್ಕಂಥ ದಿಕ್ಕನ್ನು ನಮ್ಮ ಪ್ರಧಾನ ಮಂತ್ರಿಗಳು ಗಮನಿಸಿ, ಆ ದಿಕ್ಕಿಗೆ ಸ್ಪಷ್ಟ ಸೂಚನೆಯನ್ನು ಕೊಡುವುದಕ್ಕೋಸ್ಕರ, ಸ್ಪಷ್ಟ ಮಾರ್ಗದರ್ಶನವನ್ನು ಕೊಡುವುದಕ್ಕೋಸ್ಕರ ೨೦ ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಮೊದಲನೆಯ ಕಂತಾಗಿ ದೇಶದ ಜನಗಳ ಮುಂದೆ ಇಟ್ಟಿದ್ದಾರೆ. ಈ ಒಂದು ಕಾರ್ಯಕ್ರಮದ ಆಧಾರದ ಮೇಲೆ ಕೇಂದ್ರ ಸರ್ಕಾರದವರು ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಮತ್ತು ಎಲ್ಲಾ ರಾಜ್ಯದ ರಾಜ್ಯ ಸರ್ಕಾರಗಳವರಿಗೂ ಕೂಡ ಕೆಲವು ಸಲಹೆಗಳನ್ನು ಮತ್ತು ನಿರ್ದೇಶನಗಳನ್ನು ಕೇಂದ್ರಸರ್ಕಾರದವರು ಕೊಟ್ಟಿದ್ದಾರೆ. ಆ ಸಲಹೆ ಮತ್ತು ನಿರ್ದೇಶನಗಳ ಆಧಾರದ ಮೇಲೆ, ಪ್ರತಿಯೊಂದು ರಾಜ್ಯಸರ್ಕಾರಗಳವರೂ ತಮ್ಮದೇ ಆದಂತ ಕೆಲವು ಕಾರ್ಯಕ್ರಮಗಳನ್ನು, ಈಗಾಗಲೇ ಕೆಲವನ್ನೂ ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದಿದ್ದಾರೆ. ಅದರ ಜರೂರ ಒಪ್ಪಿಗೆಗಾಗಿ ಅಗತ್ಯಬೇಕಾಗಿದ್ದರಿಂದ ಸರ್ಕಾರ ಜರೂರಾಗಿ ವಿಧಾನ ಸಭಾ ಅಧಿವೇಶನವನ್ನು ಕರೆದಿದೆ. ಆದುದರಿಂದ ಮಾನ್ಯ ಸದಸ್ಯರುಗಳು ಗಮನಿಸ ಬೇಕಾದ ಪ್ರಾಮುಖ್ಯವಾಗಿರತಕ್ಕ ಮೂಲಭೂತವಾದ ಅಂಶವನ್ನು ಎಂದರೆ ಇದು ಜರೂರು ಪರಿಸ್ಥಿತಿಯಲ್ಲಿ ಕರೆದಿರತಕ್ಕ ಜರೂರು ಅಧಿವೇಶನವಾಗಿರುವುದರಿಂದ, ಈ ಅಧಿವೇಶನದಲ್ಲಿ ಸರ್ಕಾರದ ಕೆಲವು ಕಾರ್ಯಕ್ರಮಗಳಿಗೆ ಆದ್ಯತೆ ಕೊಡಬೇಕೆಂದು the compulsions of the situation. ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದ್ದೇನೆ. ೨೦ ಅಂಶಗಳ ಕಾರ್ಯಕ್ರಮ ಮತ್ತು ಮುಂದೆ ತರಬೇಕಾದ ಆರ್ಥಿಕ ಕಾರ್ಯಕ್ರಮಗಳಿಗೆ ಈ ಸಭೆಯ ಸರ್ವ ಸದಸ್ಯರುಗಳ ಬೆಂಬಲವನ್ನು ಕೋರಿ, ತಾವು ಸರ್ಕಾರದ ಜೊತೆಯಲ್ಲಿ ಸಹಕಾರ ಮಾಡಿ, ಈ ಅಧಿವೇಶನವನ್ನು ಸಾಂಗವಾಗಿ ನಡೆಸುವುದಕ್ಕೆ ಸಹಕರಿಸಿ ಈ ಕಾರ್ಯದಲ್ಲಿ ಉದ್ಯುಕ್ತರಾಗಬೇಕೆಂದು ಹೇಳಿ ಈ ನಿರ್ಣಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದ್ದೇನೆ.

2-00 P. M.

ಶ್ರೀ ಎಚ್. ಡಿ. ದೇವೇಗೌಡ.—ಈಗ ಮಾನ್ಯ ಸಂಸದೀಯ ಸಚಿವರು ಈ ವಿವರಣೆಯನ್ನು ಕೊಟ್ಟರು. ಅವರು ಜೂನ್ 26ನೇ ತಾರೀಖು ಆದಮೇಲೆ ಈ ತುರ್ತು ಪರಿಸ್ಥಿತಿ ಆಂತರಿಕ ಭದ್ರತೆ ಎಂದು ಹೇಳಿದ್ದಾರೆ. ನಾನು ಆಮೇಲೆ ಮಾತನಾಡುವಾಗ ಹೇಳುತ್ತೇನೆ. ಇದಕ್ಕಿಂತ ಪೂರ್ವದಲ್ಲಿ ಇವತ್ತು ಯಾವ ಯಾವ ಆರ್ಡಿನೆನ್ಸ್, ರ್‍ಯಾಟಿಫಿಕೇಷನ್ ನಮ್ಮ ಮುಂದೆ ತಂದಿದ್ದಾರೆ. ಅವು ಎಲ್ಲಾ ಆಂತರಿಕ ಭದ್ರತೆ, ತುರ್ತು ಪರಿಸ್ಥಿತಿಗೆ ಮುಂಚೆ ನಮ್ಮ ರಾಜ್ಯಸರ್ಕಾರದವರು ಹೊರಡಿಸಿದಂಥ ಹಲವಾರು ಆರ್ಡಿನೆನ್ಸ್‌ಗಳನ್ನು ಈ ಮಾನ್ಯ ಸಭೆಯ ಒಪ್ಪಿಗೆಗೋಸ್ಕರ ತಂದಿದ್ದಾರೆ. ಆಂತರಿಕ ಭದ್ರತೆಗೂ, ತುರ್ತು ಪರಿಸ್ಥಿತಿಗೂ, ಈ ಸಭೆಯ ಅಂಗೀಕಾರಕ್ಕೂ, ಇಲ್ಲಿ ತಂದಿರತಕ್ಕ ಆರ್ಡಿನೆನ್ಸ್‌ಗೂ ಏನೂ ಸಂಬಂಧ ಇಲ್ಲ. ನಾನು ಮೊದಲೇ ತಿಳಿಸಿದ್ದೇನೆ. ಈ ನಿಮ್ಮ ಆರ್ಥಿಕ ಘೋಷಣೆ, ಈ 20 ಅಂಶಗಳ ಕಾರ್ಯಕ್ರಮವನ್ನು ಚರ್ಚೆ ಇಲ್ಲದೆ ಒಪ್ಪಿಕೊಳ್ಳುತ್ತೇನೆ. ಈ ಸಭೆಗೆ ಇರತಕ್ಕ ಅಧಿಕಾರವನ್ನು ತೆಗೆಯಬೇಡಿ. 8 ದಿವಸದಲ್ಲಿ ನಡೆಯುವ ಕಾರ್ಯಕ್ರಮವನ್ನು ಒಂದೇ ದಿವಸದೊಳಗೆ ಚರ್ಚೆ ಇಲ್ಲದೆ ಒಪ್ಪಿಕೊಳ್ಳುತ್ತೇನೆ. ಒಂದು ವೇಳೆ ತುರ್ತು ಪರಿಸ್ಥಿತಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕೇಳಿ, ಆಂತರಿಕ ಭದ್ರತೆಗೆ ಏನಾದರೂ ಒಂದು ಪ್ರವೋಕೇಷನ್ ಮಾಡಬೇಕು. ಅವುಗಳನ್ನು ಕೇಳಬಹುದು ಎನ್ನುವ ಅಭಿಪ್ರಾಯ ಇದ್ದರೆ ತಮಗೆ ಅಧಿಕಾರ ಇದೆ. ಯಾವುದನ್ನು ಅಲೋ ಮಾಡಬೇಕು ಯಾವುದನ್ನು ಡಿಸ್‌ಅಲೋ ಮಾಡಬೇಕು ಎಂದು ತಮಗೆ ಅಧಿಕಾರ ಇದೆ. ಆದ್ದರಿಂದ ಇವತ್ತು ಮಾನ್ಯ ಕೃಷ್ಣರವರು ಅವರ ವಿವರಣೆಯನ್ನು ಇಲ್ಲಿ ತಿಳಿಸಬೇಕು. ಇನ್ನು ಮುಂದೆ ಸರ್ಕಾರಿ ಕಾರ್ಯಕ್ರಮಗಳು ಏನೇನು ಇದೆ ಅವೆಲ್ಲವನ್ನೂ ಮುಗಿಸಿ ಕೊಡುವುದಕ್ಕೆ ಸಿದ್ಧನಿದ್ದೇನೆ. ನನ್ನ ಕಾನ್‌ಸ್ಟಿಟ್ಯೂಯನ್ಸಿಯಲ್ಲಿ ಕೆರೆ ಕೆಲಸ ಆಗಿಲ್ಲ. ಅದರ ಬಗ್ಗೆ ಪ್ರಶ್ನೆ ಕೇಳುವ ಅಧಿಕಾರ ಇಲ್ಲ ಎಂದರೆ ಈ ಸಭೆಯಲ್ಲಿ ಕೂತು ಮಾಡುವ ಕೆಲಸವಾದರೂ ಏನು ? ಸದಸ್ಯರಿಗೆ ಇರತಕ್ಕಂಥ ಅಧಿಕಾರವನ್ನು ಮೊಟಕುಗೊಳಿಸತಕ್ಕಂಥ ಜರೂರು ಪರಿಸ್ಥಿತಿ ಏನಿದೆ ಎನ್ನುವುದನ್ನು ತಿಳಿಸಬೇಕು. ಪಾರ್ಲಿಮೆಂಟಿನಲ್ಲಿ ಆದಂತ ಅದ್ಭುತಘಟನೆ ಬೇರೆ. ಅಲ್ಲಿ ಎಮರ್ಜೆನ್ಸಿ ಪ್ರೊಕ್ಲಮೇಷನ್ ಅಂಗೀಕಾರ ಮಾಡಬೇಕಾಗುತ್ತದೆ. ಅದಕ್ಕೆ ಮಾನ್ಯತೆ ನೀಡಬೇಕಾಗುತ್ತದೆ. ಅದು ಈ ಸಭೆಯ ವ್ಯಾಪ್ತಿಗೆ ಬರತಕ್ಕಂಥದಲ್ಲ. ಇಲ್ಲಿ ಇರತಕ್ಕ ಪರಿಸ್ಥಿತಿಯಲ್ಲಿ ತಾವು ಇಟ್ಟಿರತಕ್ಕ ಕಾರ್ಯಕ್ರಮ ಪಟ್ಟಿಯಲ್ಲಿ ಯಾವ ರೀತಿಯ ಕಾರ್ಯಕಲಾಪಗಳಿಗೂ ಅಡ್ಡಿ ತರತಕ್ಕಂಥಾದ್ದು ಇಲ್ಲ ಎಂದು ಆಶ್ವಾಸನೆಯನ್ನು ಕೊಟ್ಟಿರತಕ್ಕ ಕಾಲದಲ್ಲಿ ದಯಮಾಡಿ ಈ ಮೋಷನನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಈ ಮೋಷನ್‌ಗೆ ಅಂಗೀಕಾರ ಮಾಡಬೇಕು ಎಂದು ಹೇಳಿರುವುದಕ್ಕೆ ನಾನದಕ್ಕೋಸ್ಕರ ಪ್ರಬಲವಾದ ಕಾರಣವನ್ನು ತಿಳಿಸಬೇಕು ಎಂದು ಕೇಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಅಧ್ಯಕ್ಷರೇ, ಇದಕ್ಕೆ ಪ್ರಬಲವಾದ ಕಾರಣಗಳು ಏನು ಎಂದು ನಾನು ಹೇಳತಕ್ಕಂಥ ಕಾರಣಗಳಿಂದ ಮಾನ್ಯ ವಿರೋಧ ಪಕ್ಷದ ಸದಸ್ಯರುಗಳನ್ನು ಮತಾಂತರಗೊಳಿಸುವುದಕ್ಕೆ ಸಾಧ್ಯ ಆಗದೇ ಇರಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಮತಾಂತರ ಪ್ರಶ್ನೆ ಇಲ್ಲ.

SRI S. M. KRISHNA.—I may not be able to convince you, or I may not be able to pursuade you to my line of thinking. You are also not able to pursuade me to your line of thinking. If it is so where is the end for this ? At best I can only make an attempt as to why this resolution is necessary. If you are in no mood and if you are not in a position to understand, I am trying to make you to understand.

SRI KAGODU THIMMAPPA.—Why do you imagine that ?

SRI S. M. KRISHNA.—On account of the experience of the past years. Experience is also a guide to me. I really apprceiate the gesture of the Leader of the Opposition that the Governmental programmes as agreed upon are going to be passed.

ಶ್ರೀ ಎಚ್. ಡಿ. ದೇವೇಗೌಡ.—ನನ್ನ 8 ವರ್ಷದ ಅನುಭವದಲ್ಲಿ ಈ ಸಭೆಯಲ್ಲಿ ಸರ್ಕಾರಿ ಕಾರ್ಯಕಲಾಪಗಳಿಗೆ ಎಂದು ನಾವು ತಡೆಹಿಡಿದಿದ್ದೇವೆ, ಈ ಮನೆಯಲ್ಲಿ ಸರ್ಕಾರಿ ಕಾರ್ಯಕಲಾಪಗಳು ಪೂರ್ಣಗೊಳ್ಳುವುದಕ್ಕೆ ವಿರೋಧಪಕ್ಷದವರು ಎಂದು ಅಸಹಕಾರ ಮಾಡಿದ್ದಾರೆ ಎಂಬುದಕ್ಕೆ ನಿದರ್ಶನ ತಿಳಿಸಬೇಕು.

SRI S.M. KRISHNA.—Madam Speaker, I have made passing remarks because of certain programmes of this House. I am not going to take back the House to what has happened for the last 3 years. That is not my intention The situation that has been created in the country demands that every State should be vigilant and they will have to take certain steps. With this object in view I have moved this resolution. I commend this resolution for the acceptance of this House.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಧ್ಯಕ್ಷಿಣಿಯವರೇ, ಈಗ ಈ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕಾದರೆ ಅದರ ಕ್ರಮಬದ್ಧತೆಯ ಪ್ರಕಾರ ಒಂದು ರೆಸಲ್ಯೂಷನ್ ನಮ್ಮ ಮುಂದೆ ಮಂಡಿಸಿದರೆ ಅದಕ್ಕೆ ಸೆಕೆಂಡ್ ಮಾಡಬೇಕು. ಮಾನ್ಯ ಕೃಷ್ಣ ಅವರು ನಮ್ಮ ಮುಂದೆ ರೆಸಲ್ಯೂಷನ್ ಮಂಡಿಸಿದರೆ ಅದಕ್ಕೆ ಸೆಕೆಂಡ್ ಆಗಬೇಕಾದಂಥದ್ದು ಪದ್ಧತಿ ಇದೆ. ಈಗ ನಮ್ಮ ಪಾರ್ಲಿಮೆಂಟ್ ಅಫೇರ್ಸ್ ಸಚಿವರಾದ ಮಾನ್ಯ ಕೃಷ್ಣ ಅವರು ಈ ಸಭೆಯ ಮುಂದಿಟ್ಟಿರತಕ್ಕಂಥ ಒಂದು ನಿರ್ಣಯ ಏನಿದೆ ಆ ನಿರ್ಣಯಕ್ಕೆ ಒಂದು ತಿದ್ದುಪಡಿಯನ್ನು ಕಳಿಸಿಕೊಟ್ಟಿದ್ದೇನೆ. ಈ ತಿದ್ದುಪಡಿಯ ಉದ್ದೇಶವಾದರೂ ಇಷ್ಟೆ. ಈಗ ಸಾಧಾರಣವಾಗಿ ಅವರು ಕೊಟ್ಟ ಹೇಳಿಕೆ ಪ್ರಕಾರ ಈ ರಾಜ್ಯಾಂಗ ರಚನೆ ಹಾಗೂ ಈ ರಾಜ್ಯದ ಜನತೆಗೆ ಬೇಕಾದಂಥ ಸೌಕರ್ಯ, ವಿಚಿತ್ರವಾದ ವರ್ತನೆ ಏನಿದೆಯೋ ಅದನ್ನು ಸರಿಪಡಿಸುವುದಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಈ ನಿರ್ಣಯವನ್ನು ತೆಗೆದುಕೊಂಡು ಬರುತ್ತಾ ಇದ್ದಾರೆಂದು ಹೇಳುತ್ತೇನೆ. ಅದರ ಸಾರಾಂಶವಾದರೂ ಇಷ್ಟೆ. ಡೆಮೋಕ್ರಸಿಯಲ್ಲಿ ನಮಗೆ ಪೂರ್ಣವಾದ ನಂಬಿಕೆ ಇದೆ ಮತ್ತು ಡೆಮೊಕ್ರಸಿಯನ್ನು ಉಳಿಸಿ ಬೆಳೆಸಿಕೊಂಡು ಬರತಕ್ಕಂಥ ಉದ್ದೇಶ ನಮಗಿದೆ ಮತ್ತು ಈ ಜನಸಾಮಾನ್ಯಕ್ಕೆ ಬೇಕಾದಂಥ ಯಾವ ಯಾವ ಅವಕಾಶವನ್ನು ಒದಗಿಸಬೇಕೋ ಅದಕ್ಕೆ ತಕ್ಕ ಒಂದು ಶಕ್ತಿಯನ್ನು ನಮ್ಮ ಕೈಯಲ್ಲಿ ಇಟ್ಟುಕೊಳ್ಳುವುದಕ್ಕೆ ಈ ನಿರ್ಣಯ ಅತಿ ಅಗತ್ಯವಾಗಿದೆ ಎಂದು ಈ ಸಭೆಯ ಮುಂದಿಟ್ಟಿದ್ದಾರೆ, ನಾನು ಅವರು ಹೇಳತಕ್ಕಂಥ ವಾದವನ್ನು ಸಮರ್ಥಿಸಿ ಈ ನಾಗರೀಕರ ಹಿತರಕ್ಷಣೆಯನ್ನು, ನಾಗರೀಕರಿಗೆ ಬೇಕಾದಂಥ ಸೌಲಭ್ಯವನ್ನು ಮತ್ತು ಸರ್ಕಾರದ ನಡವಳಿಕೆ ಜನರ ಹಿತದೃಷ್ಟಿಯಿಂದ ಇದೆಯೋ ಜನರಿಗೆ ತೊಂದರೆ ನೀಡತಕ್ಕಂಥಾದ್ದೇ ಎನ್ನುವುದರ ಬಗ್ಗೆ ಅನೇಕ ಸಂದರ್ಭದಲ್ಲಿ ಈ ಸಭೆಯಲ್ಲಿ ತಮ್ಮ ಮುಖಾಂತರ ಈ ಒಂದು ಅಧಿಕಾರವನ್ನು ಪಡೆದು ಈ ಸಭೆಯಲ್ಲಿ ನಾವು ಮಂಡಿಸಬೇಕಾದಂತ ಅನೇಕ ಸಂದರ್ಭಗಳು ಇವೆ. ಆದುದರಿಂದ ಜನಗಳ ಹಿತರಕ್ಷಣೆಯನ್ನು ನೋಡಬೇಕಾದ ಸಂದರ್ಭದಲ್ಲಿ ನಮ್ಮ ಪರವಾನಗಿಯನ್ನು ಪಡೆದು ಕೆಲವು ವಿಚಾರಗಳನ್ನು, ಅತಿ ಮುಖ್ಯವಾದ ವಿಚಾರಗಳನ್ನು ಈ ಸಭೆಯಲ್ಲಿ ಚರ್ಚಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವುದೇ ನನ್ನ ತಿದ್ದುಪಡಿಯ ಉದ್ದೇಶ ಅದರ ಉದ್ದೇಶ ನಾವು ಇಲ್ಲಿರತಕ್ಕ ಅನೇಕ ಸದಸ್ಯರೆಲ್ಲರೂ ಕೂಡ ೩ ಕೋಟಿ ಜನರಿಂದ ಚುನಾಯಿತರಾಗಿ ಬಂದಿದ್ದೇವೆ. ನಾನೂ ಕೂಡ ನಾಗರೀಕನಾಗಿ ನಾಗರೀಕರಿಂದ ಚುನಾಯಿಸಲ್ಪಟ್ಟು ಬಂದಿದ್ದೇನೆ. ಈ ಸಂದರ್ಭದಲ್ಲಿ ಡೆಮೋಕ್ರಸಿ ನೆವದಿಂದ ಡೆಮೋಕ್ರಸಿಯ ಕೊಲೆ ಮಾಡುವಂಥ ಪರಿಸ್ಥಿತಿಯಲ್ಲಿ ನಾವು ಕೈಕಟ್ಟಿಕೊಂಡು ಏತಕ್ಕೆ ಕೂತಿರಬೇಕು ? ಜನಗಳಿಗೆ ಬರತಕ್ಕಂಥ ತೊಂದರೆಗಳನ್ನು ಪರಿಹಾರ ಕೊಡುವುದಕ್ಕೆ ಸರ್ಕಾರದ ಗಮನವನ್ನು ಸೆಳೆದು ಅದಕ್ಕೆ ಅವಕಾಶವನ್ನು ಒದಗಿಸಿಕೊಡಬೇಕು ಎನ್ನತಕ್ಕಂಥಾದ್ದು ನಮ್ಮ ಉದ್ದೇಶ. ಈ ಮಾನ್ಯ ಸಭೆಯು ವರ್ಷದ ೩೬೫ ದಿನಗಳೂ ಕೊಡುವುದಿಲ್ಲ ನಮಗೆ ಸಮಯ ಸಂದರ್ಭ ಬಂದಾಗ ತಮ್ಮ ಮುಖಾಂತರ ಸರ್ಕಾರದ ಗಮನವನ್ನು ಸೆಳೆದ, ನಾಗರೀಕರ ಹಕ್ಕುಬಾಧ್ಯತೆಗಳನ್ನು ಸೌಲಭ್ಯಗಳನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಆದ್ದರಿಂದ ನನ್ನ ಈ ತಿದ್ದುಪಡಿಯನ್ನು ನಾನು ತೆಗೆದುಕೊಂಡು ಬಂದಿರತಕ್ಕಂಥಾದ್ದು ಜನಸಾಮಾನ್ಯರಿಗೆ ಬೇಕಾದಂಥ ಸೌಲಭ್ಯಗಳನ್ನು ಮತ್ತು ಸರ್ಕಾರದವರು ಅವರ ಪಾರ್ಟಿಯವರು ಮಾಡಿರತಕ್ಕಂಥ ಅಕ್ರಮಗಳನ್ನು ಎತ್ತಿ ತೋರಿಸಬೇಕಾದ ಸಂದರ್ಭಗಳು ಬರುತ್ತವೆ ಎಂದು ಹೇಳುತ್ತೇನೆ.

ಇದರಲ್ಲಿ ಮುಖ್ಯವಾಗಿ ತಮಗೆ ಉದಾಹರಿಸದೇ ಹೋದ ಪಕ್ಷದಲ್ಲಿ ತಪ್ಪಾಗುತ್ತದೆ. ಬೆಂಗಳೂರು ನಗರ ಅಡ್ಮಿನಿಸ್ಟ್ರೇಟರ್ ಆಡಳಿತದಲ್ಲಿ ಇದೆ. ಅದೇ ರೀತಿ ರಾಜ್ಯದಲ್ಲಿ ಎಲ್ಲ ಮುನಿಸಿಪಾಲಿಟಿಗಳು ಹಾಗೂ ವಿಲೇಜ್ ಪಂಚಾಯಿತಿಗಳ ಎಲೆಕ್ಷನ್ ಮಾಡದೆ ಎಲ್ಲ ಕಡೆಗಳಲ್ಲೂ ಕೂಡ ಅಡ್ಮಿನಿಸ್ಟ್ರೇಟರ್ ಆಡಳಿತದಲ್ಲಿ ನಡೆಸತಕ್ಕ ಕಾಲದಲ್ಲಿ ಅತಿ ಮುಖ್ಯವಾಗಿ ಸರ್ಕಾರದ ಗಮನವನ್ನು ಸೆಳೆದು ಇರತಕ್ಕ ಲೋಪದೋಷಗಳನ್ನು ತೋರಿಸುವುದು ಅಗತ್ಯವಾಗಿ ಆಗಬೇಕಾಗಿದೆ. ಅದರಲ್ಲೂ ಕೂಡ ಆಡಳಿತಪಕ್ಷಕ್ಕೆ ಸೇರಿದವರು ಮಾಡಿರತಕ್ಕ ಅಕ್ರಮ, ಅನ್ಯಾಯಗಳನ್ನು ಎತ್ತಿ ತೋರಿಸುವುದಕ್ಕೆ ಕೆಲವು ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳಲೇ ಬೇಕಾಗುತ್ತದೆ. ಈಗ ನಮ್ಮ ಸಭೆಯ ಸದಸ್ಯರು ಹಾಗೂ ಒಬ್ಬ ಮಾನ್ಯ ಮಂತ್ರಿಗಳ

ಆಗಿರತಕ್ಕವರ ಗಂಡನ ಹೆಸರಿನಲ್ಲಿ ಚಾಮರಾಜೇಂದ್ರ ರೋಡಿನಲ್ಲಿ ಚರಂಡಿ ಮೇಲೆ ಒಂದು ಪ್ರೆಸ್‌ನ್ನು ಕಟ್ಟಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಹಾಗೆ ತೆಗೆದುಕೊಂಡಿರತಕ್ಕ ತೀರ್ಮಾನದ ಪ್ರಕಾರ ಆ ಏರಿಯಾದಲ್ಲಿ ದೊಡ್ಡ ಚರಂಡಿಯ ಮೇಲೆ ಒಂದು ಅಂಗಡಿಯನ್ನು ಸಹ ಕಟ್ಟಲು ತೀರ್ಮಾನ ವನ್ನು ತೆಗೆದುಕೊಂಡಿದ್ದಾರೆ.

ಶ್ರೀ ಎಸ್. ಎಮ್. ಕೃಷ್ಣ.—ಚರಂಡಿಗೂ ನಾನು ಮಂಡಿಸಿರತಕ್ಕಂಥ ರೆಸಲ್ಯೂಷನ್‌ಗೂ ಅಪ್ರತ್ಯಕ್ಷ ವಾಗಿ ಸಂಬಂಧವನ್ನು ಕಲ್ಪಿಸುವುದಕ್ಕೆ ಸಾಧ್ಯವಿಲ್ಲ. ರೆಸಲ್ಯೂಷನ್, ಅಮೆಂಡ್‌ಮೆಂಟ್ ಇವೆ. ಅದಕ್ಕೆ ಸೀಮಿತ ಮಾಡಿದರೆ ಒಳ್ಳೆಯದು.

ಶ್ರೀ ಟಿ. ಆರ್. ಶಾಮಣ್ಣ.—ಯಾವ ರೀತಿ ಅಧಿಕಾರ ದುರುಪಯೋಗವಾಗುತ್ತಿದೆ ಎನ್ನುವುದನ್ನು ಸ್ಪಷ್ಟಪಡಿಸುವುದಕ್ಕೋಸ್ಕರವಾಗಿ ಹೇಳುತ್ತಾ ಇದ್ದೇನೆ. ಇದರ ಹಿನ್ನೆಲೆಯನ್ನು ಹೇಳಿದರೆ ಇರತಕ್ಕ ಸಾರಾಂಶವನ್ನು ತೆಗೆದುಕೊಳ್ಳಬಹುದು. ಇದನ್ನು ಕಾರ್ಪೊರೇಷನ್‌ನವರು ಅಂಗಡಿಗೆ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡು ಒಂದು ಎಸ್ಟಿಮೇಟ್ ಮಾಡಿದರು. ಕಾರ್ಪೊರೇಷನ್ ಜಾಗ ತೆಗೆದುಕೊಳ್ಳುವ ಒಂದು ರೆಸಲ್ಯೂಷನ್ ಮಾಡಿ ಯಾರಿಗೋ ಜಾಗವನ್ನು ಕೊಡಬೇಕು ಎಂದು ಶಿಫಾರಸು ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಆದರೆ ಸರ್ಕಾರದವರು ಅದನ್ನು ಶಿಫಾರಸು ಮಾಡಿದವರಿಗೆ ಕೊಡುವುದನ್ನು ಬಿಟ್ಟು ಅದಕ್ಕೆ ಬದಲಾಗಿ ಒಬ್ಬ ಮಂತ್ರಿಗಳ ಗಂಡ, ಮೇಲಿ ನವರು ಯಾರು ಇದ್ದಾರೆ ಅಂತಹವರಿಗೆ ಒಂದು ವರ್ಷಕ್ಕೆ ಮೂರು ಸಾವಿರ ರೂಪಾಯಿನಂತೆ ೩೦ ವರ್ಷ ಬಾಡಿಗೆಗೆ ಕೊಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡು ಚರಂಡಿಯ ಮೇಲೆ ಕಟ್ಟಡವನ್ನು ನಿರ್ಮಾಣ ಮಾಡುವುದಕ್ಕೆ ತುರ್ತು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಆ ಚರಂಡಿಯಲ್ಲಿ ಹೋಗತಕ್ಕ ನೀರು ಅಡ್ಡಿ ಇಲ್ಲದಹಾಗೆ ಹೋಗಲು ಬೇರೆ ಕಡೆ ಆಗೆದು ಬದಲಿಸಿದ್ದಾರೆ. ಯಾವ ರೀತಿ ದುರುಪ ಯೋಗವಾಗುತ್ತಿದೆ ಎನ್ನುವುದಕ್ಕೆ ಹೇಳುತ್ತಿದ್ದೇನೆ. ಅದೇ ಜಾಗಕ್ಕೆ ಈಗ ತಮ್ಮ ಮುಂದೆ ಹೇಳುತ್ತಿ ದ್ದೇನೆ. ವರ್ಷಕ್ಕೆ ೧೨ ಸಾವಿರ ರೂಪಾಯಿ ಕೊಡುವವರು ಇದ್ದಾರೆ. ಕಾರ್ಪೊರೇಷನ್‌ರವರು ಬೇರೆ ಯವರಿಗೆ ಅಂಗಡಿಗಳನ್ನು ಕಟ್ಟಿಸಿಕೊಡಬೇಕೆಂದು ತೀರ್ಮಾನ ತೆಗೆದುಕೊಂಡದನ್ನು ಬೇರೆಯವರಿಗೆ ಕೊಡ ಬಾರದು ಮಂತ್ರಿಗಳಿಗೆ ಸಂಬಂಧಪಟ್ಟವರಿಗೆ ಕೊಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡು ಕೆಲ ತೀವ್ರ ವಾಗಿ ಮಾಡಿದ್ದಾರೆ. ಆ ಜಾಗಕ್ಕೆ ಈವತ್ತಿನ ದಿವಸ ವರ್ಷಕ್ಕೆ ಮೂರು ಸಾವಿರ ರೂಪಾಯಿನಂತೆ ಗೊತ್ತುಮಾಡಿದ್ದಾರೆ. ಅದೇ ಜಾಗಕ್ಕೆ ಈವತ್ತಿನ ದಿವಸ ತಿಂಗಳಿಗೆ ೧೨ ಸಾವಿರ ರೂಪಾಯಿಗಳನ್ನು ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಅದನ್ನು ಇವರು ಆ ಬೆಲೆಗೆ ಕೊಡುವುದಕ್ಕೆ ಸಿದ್ಧರಾಗಿದ್ದಾರೆಯೋ ಎಂದು ನಾನು ಕೇಳಬೇಕಾಗಿದೆ. ಇಂಥವರಿಗೆ ಕೊಡಬೇಕು ಅಂಥವರಿಗೆ ಕೊಡಬೇಕು ಎನ್ನುವುದರಲ್ಲಿ ಯಾವ ಔಚಿತ್ಯವಿದೆ ? ಅದನ್ನೆಲ್ಲ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಇದನ್ನೆಲ್ಲ ಕೇಳದೆ ಕೈಕಟ್ಟಿಕುಳಿತುಕೊಳ್ಳ ಬೇಕೆ ಎಂದು ಕೇಳಬೇಕಾಗಿದೆ. ಇರತಕ್ಕ ಅಮೂಲ್ಯವಾದ ಸಂದರ್ಭವನ್ನು ಕಳೆದುಕೊಳ್ಳಬೇಕಾಗಿದೆಯಲ್ಲ ಎಂಬುದನ್ನು ಒತ್ತಿ ಹೇಳಬೇಕಾಗಿದೆ. ಎರಡನೆಯದಾಗಿ ಉದಾಹರಣೆಗೆ ಹೇಳಬೇಕಾದರೆ, ಕೆಂಪೇಗೌಡ ರೋಡಿನಿಂದ ಮುಂದೆ ಹೋದರೆ ಕೆಂಪೇಗೌಡ ಟಾಕೀಸ್ ಪಕ್ಕದಲ್ಲಿ ಬಿ. ವಿ. ಕೃಷ್ಣ ಐಯ್ಯಂಗಾರ್ ರಸ್ತೆ ಹೋಗುತ್ತದೆ. ಅಲ್ಲಿ ತಲ್ಲಮ್ ಎಂಟರ್‌ಪ್ರೈಸಸ್‌ನವರು ಮಿನಿಥಿಯೇಟರ್ ಒಂದನ್ನು ಕಟ್ಟುತ್ತಾ ಇದ್ದಾರೆ. ಮಿನಿಥಿಯೇಟರ್‌ನ ಪಕ್ಕದಲ್ಲಿಯೇ ಒಂದು ದೊಡ್ಡ ಟ್ರಾನ್ಸ್‌ಫಾರ್ಮರ್ ಇದೆ. ಅದನ್ನು ತೆಗೆಯಬೇಕೆಂದು ಮಾಲೀಕ ಬರೆದಾಗ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಲಕ್ಷ ಚಿಲ್ಲರೆ ಎಸ್ಟಿಮೇಟ್ ಕಳುಹಿಸಿ ದುಡ್ಡು ಕೊಟ್ಟರೆ ಟ್ರಾನ್ಸ್‌ಫಾರ್ಮರ್ ಲಿಫ್ಟ್ ಮಾಡುವ ತೀರ್ಮಾನವನ್ನು ತೆಗೆದುಕೊಳ್ಳಬಹುದು ಎಂದು ತಿಳಿಸಿದರು. ಎಲೆಕ್ಟ್ರಿಸಿಟಿ ಬೋರ್ಡ್‌ನವರಿಗೆ ದುಡ್ಡು ಕೊಡಲೇ ಇಲ್ಲ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಪರೀಕ್ಷೆ ಮಾಡಿದರು. ಗೌವರ್ನಮೆಂಟ್ ಆರ್ಡರ್ ಕೂಡ ಬಂತು. Transformer may be shifted at the cost of the Corporation and the Corporation has to give hospital an area measuring so much free of cost ಎಂದು ಆರ್ಡರ್ ಪಾಸ್ ಮಾಡಿ ಥಿಯೇಟರ್‌ನ್ನು ಕಟ್ಟಿ ಏನು ಲೂಟಿ ಹೊಡೆಯುತ್ತಿದ್ದಾರೆ ಅಂಥವರಿಗೆ ಉತ್ತೇಜನ ಕೊಡುವುದಕ್ಕೋಸ್ಕರ ಆ ಜಾಗದಲ್ಲಿದ್ದಂತ ಟ್ರಾನ್ಸ್‌ಫಾರಮ್‌ನ್ನು ಕಾರ್ಪೊರೇಷನ್‌ನವರು ೮೫ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಲಿಫ್ಟ್ ಮಾಡಬೇಕಾದ ಅವಶ್ಯಕತೆ ಇತ್ತೇ ? ಯಾರು ಬೇಕಾದರೂ ಹೋಗಿ ನೋಡಲಿ. ಇದನ್ನು ಕಾರ್ಪೊರೇಷನ್ ಖರ್ಚಿನಲ್ಲಿ ಮಾಡಬೇಕಾಗಿತ್ತೆ ? ಇದರ ಬಗ್ಗೆ ಮಾನ್ಯ ಮಂತ್ರಿಯವರಿಗೆ ತಿಳಿಸಿರುತ್ತೇನೆ. ಮತ್ತು ಸಿ. ಐ. ಡಿ. ಗೂ ರಿಪೋರ್ಟ್ ಕಳುಹಿಸಿದ್ದೇನೆ. ಸಿ.ಐ.ಡಿ. ರಿಪೋರ್ಟ್ ಏನು ಹೇಳಿದೆ ಆ ಅಪಾದನೆ ತಪ್ಪು ಎಂದು ಹೇಗೆ ಬೇಕಾದರೂ ತೆಗೆದುಕೊಳ್ಳಬಹುದು. ಈ ರೀತಿ ನಡೆಯುತ್ತಿ ರುವ ಅನ್ಯಾಯಗಳನ್ನು ಈ ಸಭೆಯ ಮುಂದೆ ತಮ್ಮ ಮುಂಖಾಂತರ ಇಡುವುದಕ್ಕೆ ಇರತಕ್ಕ ಸುಯೋಗ ವನ್ನು ಕಳೆದುಕೊಳ್ಳಬೇಕಾಗಿದೆಯೇ ಎಂದು ವಿಷಾದ ವ್ಯಕ್ತಪಡಿಸುತ್ತೇನೆ.

ಇನ್ನು ಕೊನೆಯದಾಗಿ ಮಾತನಾಡುತ್ತಾ ಕೊಳಚೆ ಪ್ರದೇಶಗಳ ನಿರ್ಮೂಲನೆಯಾಗಬೇಕೆಂದು ಒಂದು ಕಡೆ ಹೇಳುವುದು ಮತ್ತೊಂದು ಕಡೆ ಕೊಳಚೆ ಪ್ರದೇಶಗಳ ಉದ್ಧಾರವಾಗಬೇಕೆಂದು ಹೇಳುತ್ತಿದ್ದೀರಿ ಈಗ ಏನಾಗಿದೆ ಎಂದರೆ ಆಡಳಿತ ಪಕ್ಷದವರು ತಮಗೆ ಬೇಕಾದ ಕಾರ್ಪೊರೇಷನ್ ಜಾಗದಲ್ಲಿ ಗುಡಿಸಲು ಗಳನ್ನು ಹಾಕುತ್ತಿದ್ದಾರೆ. ಮಹಾರಾಜ ಮಿಲ್ಸ್ ಹಿಂದೆ ಚಿಕ್ಕರಾಯ ಕೆರೆ ಅಂತ ಇದೆ. ಅಲ್ಲಿ ೨೦೦ ಗುಡಿಸಲು ಗಳನ್ನು ಹಾಕಿದ್ದಾರೆ. ಕೃಷ್ಣ ಫ್ಲೋರ್ ಮಿಲ್ಸ್ ಹಿಂಭಾಗದಲ್ಲಿ ೫೦೦ ಗುಡಿಸಲುಗಳನ್ನು ಹಾಕಿದ್ದಾರೆ. ಇದಕ್ಕೆ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ ೫೦೦ ಗುಡಿಸಲುಗಳನ್ನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿರುವುದು ಸರ್ಕಾರದ ನೀತಿ ಸರಿಯೇ ಎಂದು ಕೇಳಬೇಕಾಗಿದೆ. ನಾವು ಯಾರಾದರು ಮಾಡಿ ದರೆ ತಕ್ಷಣ ಡಿಮಾಲಿಷ್ ಮಾಡಿ ಎಂದು ಹೇಳುತ್ತಾರೆ, ಸೋನಿ ಅಂಡ್ ಕಂಪೆನಿಯವರಿಗೆ ೭೦೦ ಅಡಿ ಉದ್ದ ದಷ್ಟು ಜಾಗವನ್ನು ಕೊಟ್ಟಿದ್ದಾರೆ. ಮೈಸೂರು ಮಿಲ್ಸ್ ಪಕ್ಕದಲ್ಲಿ ಕಾಂಗ್ರೆಸ್ ಗುಡಿಸಲುಗಳನ್ನು ಹಾಕುತ್ತಾ ಇದ್ದಾರೆ ಇದಕ್ಕೆಲ್ಲ ಅವಕಾಶವನ್ನು ಕೊಟ್ಟಿದ್ದೀರಿ.

ಶ್ರೀ. ಕೆ. ಶ್ರೀರಾಮುಲು.—ಶ್ರೀ ಶಾಮಣ್ಣನವರು ಸತ್ಯಕ್ಕೆ ದೂರವಾದ ಮಾತನ್ನು ಹೇಳಬಾರದು ಸೋನಿ ಅಂಡ್ ಕಂಪೆನಿಯವರಿಗೆ ಕೊಟ್ಟಿರತಕ್ಕ ಜಾಗದಲ್ಲಿ ಗುಡಿಸಲುಗಳು ಬಂದಿದೆಯೇ. ಯಾರು ಹಾಕಿಸಿದರು ತಿಳಿಸಬೇಕು.

ಶ್ರೀ ಎಸ್. ಎಂ. ಕೃಷ್ಣ. —ಶ್ರೀ ಶಾಮಣ್ಣನವರೇ ನೋಡಿಕೊಂಡು ಬರಲಿ.

ಶ್ರೀ ಟಿ. ಆರ್. ಶಾಮಣ್ಣ.—ಇಲ್ಲಿ ಹಾಕುವುದಕ್ಕೆ ಏಕೆ ಉತ್ತೇಜನ ಕೊಡುತ್ತಿದ್ದಾರೆ ಎಂದು ಕೇಳುತ್ತಿ ದ್ದೇನೆ.

ಶ್ರೀ ಕೆ. ಶ್ರೀರಾಮುಲು.—ಅದು ನನ್ನ ಕ್ಷೇತ್ರ. ಯಾರು ಹಾಕಿದ್ದಾರೆ ಎಂದು ನಾನು ಹೇಳಬಲ್ಲೆ. ಕನ್ನಡ ಪಕ್ಷದವರು ಹಾಕುತ್ತಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಯಾರು ಬೇಕಾದರೂ ಹಾಕಲು ಸರ್ಕಾರ ಕಣ್ಣು ಮುಚ್ಚಿಕೊಂಡಿ ದೆಯೇ ಎಂದು ನಾನು ಕೇಳುತ್ತೇನೆ. ಕೋಟ್ಯಾಂತರ ರೂಪಾಯಿ ಬಾಳತಕ್ಕಂಥ ಜಾಗವನ್ನು ಕೊಟ್ಟಿ ದ್ದಾರೆ ಬಡವರ ಬಗ್ಗೆ ಪ್ರೋಗ್ರಾಂಗಳನ್ನು ಹಾಕಿಕೊಂಡಿರುವ ಸರ್ಕಾರ ಇವತ್ತು ಅಲ್ಲಿ ಅಕ್ರಮವಾಗಿ ಗುಡಿಸಲುಗಳನ್ನು ಹಾಕಿಸುತ್ತಿದ್ದಾರೆ. ಸರ್ಕಾರ ಇವತ್ತು ಇದೆಯೇ ಎನ್ನುವುದರ ಬಗ್ಗೆ ಯೋಚನೆ ಮಾಡಿ. ಕಿರ್ಲೋಸ್ಕರ್ ಅಂಡ್ ಕಂಪೆನಿಗೆ ಕಾರ್ಡ್‌ರೋಡ್ ಪಕ್ಕದಲ್ಲಿ ಬೈರಪ್ಪ ಎನ್ನುವವರಿಗೆ ೭೦೦ × ೫೦ ಜಾಗವನ್ನು ಟ್ರಸ್ಟ್ ಬೋರ್ಡ್‌ನಲ್ಲಿ ಹಿಂದಿನ ಛೇರ್ಮನ್‌ರವರು ಇದ್ದಾಗ ಕೊಟ್ಟಿದ್ದಾರೆ. ಈಗಿನ ಛೇರ್ಮನ್‌ಗೆ ಇದರ ಬಗ್ಗೆ ಹೋಗಿ ಕೇಳಿದಾಗ "ಹಿಂದೆ ಮಾಡಿದ್ದಾರೆ, I have taken for investigation" ಎಂದು ಹೇಳಿದರು. ಈ ರೀತಿ ಲಕ್ಷಾಂತರ ರೂಪಾಯಿ ಬೆಲೆ ಬಾಳತಕ್ಕಂಥ ನೆಲ ವನ್ನು ಕೊಡತಕ್ಕಂಥಾದ್ದಕ್ಕೆ ಸರ್ಕಾರ ಏಕೆ ಒಪ್ಪಿಕೊಂಡಿದೆ ಎಂದು ಕೇಳಬೇಕು. ಅಸೆಂಬ್ಲಿ ಸೇರಿದಾಗ ಈ ಪ್ರಶ್ನೆಗಳನ್ನು ಕೇಳಬೇಕು ಎಂದು ಲಿಸ್ಟ್ ಮಾಡಿ ಇಟ್ಟುಕೊಂಡಿದ್ದೇನೆ. ಈಗ ನೋಡಿದರೆ ಪ್ರಶ್ನೋತ್ತರ ವೇಳೆ ಇಲ್ಲ, ಕಾಲಿಂಗ್ ಅಟೆನ್‌ಷನ್ ಇಲ್ಲ. ಪ್ರಶ್ನೆ ಕೇಳುವುದಕ್ಕೆ ಅವಕಾಶವೇ ಇಲ್ಲ. ಆದುದರಿಂದ ನನ್ನ ಅವಕಾಶವನ್ನು ಕಿತ್ತುಕೊಂಡಿರುವುದು ಸರಿಯೇ ಎಂದು ಕೇಳಬೇಕಾಗಿದೆ.

ಆಮೇಲೆ ಭಾರತ್ ಟಾಕೀಸ್ ಹಿಂದುಗಡೆ ಒಂದು ಚದರ ಗಜಕ್ಕೆ ೫೦೦ ರೂಪಾಯಿ ಇದೆ. ೩೫ ರೂಪಾಯಿನ ಪ್ರಕಾರ ಬೇಕಾದಂಥ ಮಿತ್ರರಿಗೆ ಕೊಟ್ಟಿದ್ದಾರೆ. ಇದು ಮಂತ್ರಿಗಳಿಗೆ ಗೊತ್ತಿದೆ. ಕಾರ್ಪೊರೇಷನ್‌ಗೋಸ್ಕರ ಇರತಕ್ಕಂಥ ಜಮೀನನ್ನು ೩ ಜನಕ್ಕೆ ಹಂಚಿಕೊಟ್ಟಿದ್ದಾರೆ. ಹಾಗೆಯೇ ಜಯನಗರ ೯ನೇ ಬ್ಲಾಕ್‌ನಲ್ಲಿ ಸಿವಿಕ್ ಅಮೆನಿಟೀಸ್ ಗಿಲ್ಡ್‌ಗೆ ಇಟ್ಟಂಥ ಜಾಗವನ್ನು ೫ ಜನಕ್ಕೆ ಹಂಚಿ ದ್ದಾರೆ. ಈ ರೀತಿ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯಾಗುತ್ತದೆ. ಕೆಲವನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಇದರಲ್ಲಿ ನಾನು ಏನಾದರೂ ತಪ್ಪು ಹೇಳಿದ್ದರೆ ಶಿಕ್ಷೆ ಅನುಭವಿಸುವುದಕ್ಕೆ ಸಿದ್ಧನಾಗಿದ್ದೇನೆ. ಇಲ್ಲಿ ತಂದಿರತಕ್ಕ ಅಮೆಂಡ್‌ಮೆಂಟನ್ನು ತಾವು ಒಪ್ಪಿಕೊಳ್ಳಿ. ನಾನು ಸಬೆಕ್ಟ್ ಬಗ್ಗೆ ಮಾತನಾಡಿಲ್ಲ. ಅತಿ ಮುಖ್ಯವಾದ ವಿಚಾರಗಳನ್ನು ತಮ್ಮ ಅಪ್ಪಣೆ ಪಡೆದು ಹೇಳಿದ್ದೇನೆ. ಇದರ ಬಗ್ಗೆ ಇರತಕ್ಕ ಸತ್ಯಾಂಶ ಗಳನ್ನು ಹೊರಗೆಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಕೊಡಬೇಕು. ತಲೆ ಹೋಗುತ್ತಾ ಇರತಕ್ಕಂಥ. ಲೂಟಿ ಆಗುತ್ತಾ ಇರತಕ್ಕಂಥ ವಿಚಾರಗಳ ಕಡೆ ಸರ್ಕಾರ ಗಮನಕೊಡಬೇಕು. ತಮ್ಮ ಅಪ್ಪಣೆ ಪಡೆದು ಈ ರಾಜ್ಯಕ್ಕೂ, ಈ ಊರಿಗೂ ಸಂಬಂಧ ಪಟ್ಟ ವಿಚಾರಗಳನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದಲೇ ಈ ತಿದ್ದುಪಡಿಯನ್ನು ತಂದಿದ್ದೇನೆ. ಈ ರೆಸಲ್ಯೂಷನ್ ಬಗ್ಗೆ ಮಾತನಾಡುವಾಗ ಬೇರೆ ವಿಚಾರ ಹೇಳುತ್ತೇನೆ.

ಅಧ್ಯಕ್ಷರು.—ಈಗಲೇ ಮುಕ್ಕಾಲು ಗಂಟೆಯಾಯಿತು. ರೆಸಲ್ಯೂಷನ್ ಬಗೆ ಈಗಲೇ ಹೇಳಬಿಡಿ.

ಶ್ರೀ ಟಿ. ಆರ್. ಶಾಮಣ್ಣ.—ಇವತ್ತಿನ ದಿವಸ ತುರ್ತು ಪರಿಸ್ಥಿತಿಯಲ್ಲಿ ತುರ್ತು ಸಭೆಯನ್ನು ಕರೆದಿರುವುದರಿಂದ ನಮಗೆ ಇರತಕ್ಕಂಥ ಹಕ್ಕುಬಾಧ್ಯತೆಗಳು ಮೊಟಕಾಗಿದೆ. ಇವತ್ತು ಏನು ನಿರ್ಣಯ ಬಂದಿದೆ ಆ ನಿರ್ಣಯವನ್ನು ನಾನು ಪೂರ್ಣವಾಗಿ ವಿರೋಧಿಸಬೇಕಾಗುತ್ತದೆ. ನಾನು ವಿರೋಧಿಸಬೇಕಾದರೆ ಅದಕ್ಕೆ ಕಾರಣವಾದರೂ ಇಷ್ಟೆ. ಯಾವತ್ತಿನ ದಿನವೂ ಕೂಡ ವಿರೋಧಪಕ್ಷದವರು ಜನತೆಗೆ ಒಳ್ಳೆಯದಾಗಬೇಕು ಎಂದು ತಂದಿರತಕ್ಕ ನಿರ್ಣಯಕ್ಕೆ ಪ್ರತಿಭಟನೆಯಾಗಲೀ ವಿರೋಧವಾಗಲಿ ನಡೆಸಿಲ್ಲ. ಆದರೆ ಒಂದೇ ಒಂದು ಸಂದರ್ಭದಲ್ಲಿ ಅಂದರೆ ಭೂಸುಧಾರಣೆ ವಿಚಾರದಲ್ಲಿ ಎಲ್ಲರೂ ಕೈ ಎತ್ತಿದರೂ ಒಪ್ಪಿಕೊಂಡರೂ ನಾನು ಒಪ್ಪಿಕೊಳ್ಳಲಿಲ್ಲ. ಅದಕ್ಕೆ ಕಾರಣವೇನೆಂದರೆ, ಖಂಡಿತವಾಗಿ ಉಳುವವನಿಗೆ ಹೊಲ ಕೊಡಿ, ಆದರೆ ಬಡ ಗಂಡಸತ್ತ ಮುಂಡೆಯರು, ಅಂಗವಿಕಲರು ಮತ್ತು ಸಣ್ಣಪುಟ್ಟ ಜಮೀನು ಇಟ್ಟುಕೊಂಡಿರುವವರನ್ನು ಬಿಟ್ಟುಕೊಡಿ, ಇಲ್ಲದೇ ಹೋದರೆ ಸರಿಯಾದ ಕಾಂಪನ್‌ಸೇಷನ್ ಕೊಡಿ ಎಂದು ಹೇಳಿದೆನೇ ವಿನಾ ಲ್ಯಾಂಡ್ ರಿಫಾರ್ಮ್ಸ್ ತರಬೇಡಿ ಎಂದು ಅದಕ್ಕೆ ಅಡ್ಡಿಮಾಡಲಿಲ್ಲ. ಆ ಸಂದರ್ಭ ಬಿಟ್ಟರೆ ಬೇರೆ ಯಾವ ಸಂದರ್ಭದಲ್ಲೂ ಪ್ರಗತಿಪರವಾದ, ನಾಗರೀಕರಿಗೆ ಒಳ್ಳೆಯದಾಗತಕ್ಕಂಥ ವಿಚಾರವನ್ನು ತಂದರೂ ಕೂಡ ನಾವು ಅದನ್ನು ವಿರೋಧಮಾಡಿಲ್ಲ. ಅಂಥಾದ್ದಕ್ಕೆ ಬೆಂಬಲ ಕೊಡದೇ ಇಲ್ಲ. ಇವತ್ತು ಆ ಅಧಿಕಾರವನ್ನು ಮೊಟಕು ಮಾಡುವುದು ನಿಜವಾಗಿಯೂ ತಲೆತಗ್ಗಿಸಬೇಕಾದಂಥ ವಿಚಾರ. ಏಕೆಂದರೆ ಆ ರೀತಿ ಎಮರ್ಜನ್ಸಿ ಪಿರೀಡ್ ಎಂದು ಇದ್ದರೆ ಇನ್ನೂ ಒಂದು ಗಂಟೆ ಹೆಚ್ಚಾಗಿ ತೆಗೆದುಕೊಂಡು ಕುಳಿತುಕೊಳ್ಳಬಹುದಾಗಿತ್ತು. ಇಲ್ಲದೇ ಹೋದರೆ ಇನ್ನೂ ಒಂದು ದಿನ ಮುಂದಕ್ಕೆ ಕುಳಿತುಕೊಂಡು ತೀರ್ಮಾನ ತೆಗೆದುಕೊಳ್ಳಬಹುದಾಗಿತ್ತು. ಆದರೆ ಯಾವ ಒಂದು ಉದ್ದೇಶದಿಂದ ಈ ನಿರ್ಣಯವನ್ನು ಸಭೆಯ ಮುಂದೆ ಇಟ್ಟಿದ್ದಾರೆ ಎನ್ನುವುದು ಒಂದು ಅರ್ಥವಾಗದ ಮಾತು ಎಂದು ಹೇಳಿದರೆ ತಪ್ಪಾಗಲಾರದು. ಈ ಸಭೆಯಲ್ಲಿ ಸದಸ್ಯರಿಗೆ ಇರತಕ್ಕಂಥ ಹಕ್ಕುಬಾಧ್ಯತೆಗಳನ್ನು ಕಿತ್ತುಕೊಳ್ಳತಕ್ಕಂಥಾದ್ದು, ನಾವು ಡೆಮಾಕ್ರಸಿ ಎಂದು ಏನು ಹೇಳುತ್ತೇವೆ ಅದಕ್ಕೆ ತದ್ವಿರುದ್ಧವಾದುದು ಎಂದು ಹೇಳಿದರೆ ತಪ್ಪಾಗಲಾರದು. ಸೇಲ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟಿನಲ್ಲಿ ಕೆಲವು ಹೊಸದಾಗಿ ತೆರಿಗೆಗಳನು ಹಾಕಿದ್ದಾರೆ. ವರ್ಷೇ ವರ್ಷೇ ಹೀಗೆಯೇ ತೆರಿಗೆಗಳನ್ನು ಹಾಕುತ್ತಾರೆ. ೪-೫ ವರ್ಷಗಳ ಕೆಳಗೆ ೨೫ ಕೋಟಿ ಇದ್ದದ್ದು ಇವತ್ತು ೧೦೦ ಕೋಟಿಯಷ್ಟು ಜಾಸ್ತಿ ಸೇಲ್ಸ್ ಟ್ಯಾಕ್ಸ್ ಆಗಿದೆ. ತೆರಿಗೆ ಇಳಿಸುತ್ತೇವೆ ಎಂದು ಬಾಯಲ್ಲಿ ಹೇಳುತ್ತಾರೆ. ಆದರೆ ಸೇಲ್ಸ್ ಟ್ಯಾಕ್ಸನ್ನು ವರ್ಷೇ ವರ್ಷೇ ಹೆಚ್ಚಿಸುತಾ ಇರುತ್ತಾರೆ. ಮೊನ್ನೆ ಬೆಂಗಳೂರು ನಗರ ಕಾರ್ಪೊರೇಷನ್‌ನವರು ಆಕ್ಟ್ರಾಯನ್ನು ಜನರ ಮೇಲೆ ಹೊರಿಸಿದರು. ಕೇಂದ್ರ ಸರ್ಕಾರದವರು ವರ್ಷೇ ವರ್ಷೇ ೫೦೦ ಕೋಟಿ ರೂಪಾಯಿಗೆ ಕಡಿಮೆ ಇಲ್ಲದ ಹಾಗೆ ಟ್ಯಾಕ್ಸನ್ನು ಹಾಕುತ್ತಿದ್ದಾರೆ. ರಾಜ್ಯಸರ್ಕಾರದವರು ದಿನೇ ದಿನೇ ತೆರಿಗೆಗಳನ್ನು ವಿಧಿಸುತ್ತಿದ್ದಾರೆ. ಒಂದು ಕಡೆ ಇಳಿಸುತ್ತೇವೆ ಎಂದು ಹೇಳುವುದು, ಜನಗಳಿಗೆ ಒಳ್ಳೆಯದನ್ನು ಮಾಡುತ್ತೇವೆ ಎಂದು ಹೇಳುವುದು, ಮತ್ತೊಂದು ಕಡೆ ನಾನಾ ರೂಪದಲ್ಲಿ ಜನಗಳ ಮೇಲೆ ತೆರಿಗೆಗಳನ್ನು ಹೊರಿಸುವುದು— ಇದು ಒಳ್ಳೆಯ ಕೆಲಸವೇ. ಯಾವ ನ್ಯಾಯ. ತಾವು ಹಿಂದೆ ಅನೇಕ ಘೋಷಣೆಗಳನ್ನು ಇಟ್ಟಿದ್ದಿರಿ. ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಡುತ್ತೇವೆ. ಭೂಸುಧಾರಣೆ ಮಾಡಿ ಭೂಮಿ ಇಲ್ಲದವರಿಗೆ ಭೂಮಿಯನ್ನು ಕೊಡುತ್ತೇವೆ ಎಂದು ಮುಂತಾಗಿ ಘೋಷಣೆಗಳನ್ನು ಇಟ್ಟಿದ್ದೀರಿ ರಿಫಾರ್ಮ್ಸ್ ಬಂದ ತಕ್ಷಣ ಅಕ್ಕಿ ೩ ರೂಪಾಯಿಗೆ ಒಂದು ಕೆ. ಜಿ. ಆಯಿತು. ನೀವು ಜನಗಳ ಕಲ್ಯಾಣ ಮಾಡುತ್ತೇವೆಂದು ಆಡಳಿತದಲ್ಲಿದ್ದೀರಿ. ನಾವು ನಿಮ್ಮ ಅಡಿಯಾಳಾಗಿ ಕೆಲಸ ಮಾಡುತ್ತಿದ್ದೇವೆ ತಮ್ಮಿಂದ ಇನ್ನೂ ಇಂಥ ಒಳ್ಳೆಯ ಕೆಲಸಗಳಾಗಲಿ. ಒಂದು ವಿಷಯ ಮಾತ್ರ, ನಾನು ಸ್ಪಷ್ಟವಾಗಿ ಹೇಳುತ್ತೇನೆ. ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಈ ಸುಧಾರಣೆಗಳನ್ನು ತಂದಿದ್ದರಿಂದ ಎಮರ್ಜನ್ಸಿ ತೆಗೆದುಕೊಂಡು ಬಂದು ನಮ್ಮೆಲ್ಲರನ್ನೂ ಶಿಖಂಡಿಗಳನ್ನಾಗಿ ಮಾಡಿರತಕ್ಕಂಥಾದ್ದಕ್ಕೆ ನಾನು ಪೂರ್ಣವಾಗಿ ಒಂದು ಶುಭಾಶಯವನ್ನು ಮಾನ್ಯ ಪ್ರಧಾನಿಗಳಿಗೆ ತಮ್ಮ ಮೂಲಕ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. I heartily congratulate the Prime Minister for making us shikandies by bringing such emergency measure.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ಶಾಮಣ್ಣನವರು ಯಾರನ್ನಾದರೂ ಶಿಖಂಡಿಗಳೆಂದು ಕರೆಯಲಿ, ನಮ್ಮನ್ನು ಏಕೆ ಶಿಖಂಡಿಗಳೆಂದು ಕರೆಯುತ್ತಾರೆ ?

ಶ್ರೀ ಟಿ. ಆರ್. ಶಾಮಣ್ಣ.—ಶಿಖಂಡಿಗಳು ಎಂದರೆ ಸುಮ್ಮನೆ ಬಾಯಿ ಮುಚ್ಚಿಕೊಂಡು ಕುಳಿತು ಕೊಳ್ಳಬೇಕಾಗಿದೆ, ಏನೂ ಕೇಳುವ ಹಾಗೆ ಇಲ್ಲ. ಅದಕ್ಕೆ ಶಿಖಂಡಿಗಳು ಎಂದು ಹೇಳಿದ್ದು. ಯಾರೋ ಒಬ್ಬ ಡಾಕ್ಟರ್ ೨೩ ದಿವಸ ಪ್ರಯತ್ನಪಟ್ಟು ಒಬ್ಬ ಗಂಡಸನ್ನು ಹೆಂಗಸನ್ನಾಗಿ ಮಾಡಿದರಂತೆ. ಈ ಒಂದು ಆಜ್ಞೆಯನ್ನು ಹೊರಡಿಸಿ ಎಲ್ಲ ಗಂಡಸರನ್ನು ಹೆಂಗಸರ ಜಾತಿಗೆ ಸೇರಿಸಿಬಿಟ್ಟಿರಲ್ಲ.

2-30 P.M.

ಅವರಿಗೆ ಎಷ್ಟು ಮಹಾಶಕ್ತಿ, ಕಾಳಿಕಾ ಶಕ್ತಿ ಇದೆ ಎನ್ನುವುದಕ್ಕೆ ನಾನು ತಮ್ಮನ್ನು ಅವರಿಗೆ ನನ್ನ ಶುಭಾಶಯಗಳನ್ನು ಕಳುಹಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.— ನೀವೇ ಕಳುಹಿಸಿಬಿಡಿ, ನಾನು ಇಲ್ಲಿ ಶಿಖಂಡಿಯ ಆಗಿದ್ದೇನೆಂದು.

ಶ್ರೀ ಎಸ್. ವೈ. ಪಾಟೀಲ್.— ಅದು ತ್ರೂ ಪ್ರಾಪರ್ ಚಾನಲ್ ಹೋಗಬೇಕು, ನಾವು ಏನ್ನು ಕಳುಹಿಸಿದರೂ ವೈಯಕ್ತಿಕವಾಗಿ ಕಳುಹಿಸುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಂ. ಕೃಷ್ಣ.— ವೈಯುಕ್ತಿಕ ವಿಚಾರಗಳಿಗೆ ಅಲ್ಲಿ ಪ್ರಾವಿಷನ್ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.— ವಿಚಾರಗಳನ್ನೆಲ್ಲ ಸೆನ್ಸಾರ್ ಮಾಡುತ್ತಾರೆನ್ನುವ ಭಯದಿಂದ ತ್ರೂ ಪ್ರಾಪರ್ ಚಾನಲ್ ಹೋಗಬೇಕು ಎಂದು ಹೇಳುತ್ತಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.— ತಮ್ಮ 20 ಪಾಯಿಂಟುಗಳಲ್ಲಿ, ಈ ಪುಢಾರಿಗಳು ಯಾರು ದಿಢೀರ್‌ನೇ ಸಾಹುಕಾರರಾಗಿದ್ದಾರೋ ಅಂಥವರ ಮೇಲೆ ಗದಾ ಪ್ರಹಾರ ಮಾಡಬಾರದೇ ? ತಮ್ಮ ಪಾರ್ಟಿಯವರೆಲ್ಲ ಯಾರು ಯಾರು ಹೇಗೆ ಇದ್ದರು, ಈಗ ಹೇಗೆ ಆಗಿದ್ದಾರೆ ಎನ್ನುವುದರ ಬಗ್ಗೆ ತನಿಖೆ ನಡೆಯಲಿ ? ಅದಕ್ಕೆ ಮುಂಚೆ ನಾನು ಹೇಳುತ್ತೇನೆ. ನಾನೂ ಸಹ ವೆಲ್ತ್ ಟ್ಯಾಕ್ಸ್ ರಿಟರ್ನ್ ಅನ್ನು ಕೊಟ್ಟು ಬಂದಿದೇನೆ. ನಾನು ಯಾವಾಗ ಹೇಗೆ ಆಸ್ತಿಯನ್ನು ಸಂಪಾದನೆ ಮಾಡಿಕೊಂಡಿದ್ದೇನೆ, ಎನ್ನುವುದನ್ನು ಡಿಕ್ಲೇರ್ ಮಾಡಿದ್ದೇನೆ ಇದು ಬಿಟ್ಟು ನನಗೆ ಬೇರೆ ಇಂತಹ ಆಸ್ತಿ ಏನು ಇದೆ ಅದನ್ನೆಲ್ಲವನ್ನು ಸರ್ಕಾರದವರು ತೆಗೆದುಕೊಳ್ಳಲಿ ಎನ್ನುವ ಮಾತನ್ನು ಹೇಳುತ್ತೇನೆ. ನಿಮ್ಮವರಿಗೂ ಏಕೆ ಇದನ್ನು ಅನ್ವಯಿಸಬಾರದು 1947ರಿಂದ ಇವತ್ತಿನವರೆಗೆ ರಾಜಾಧಿರಾಜರಾದಂಥ ಜನ ಹೇಗೆ ಹಣವನ್ನು ಸಂಪಾದನೆ ಮಾಡಿದರು. ಎನ್ನುವುದರ ಬಗ್ಗೆ ತಾವು ತುರ್ತು ಪರಿಸ್ಥಿತಿಯನ್ನು ಏಕೆ ತರಲಿಲ್ಲ. ? ನಾನು ವೆಲ್ತ್ ಟ್ಯಾಕ್ಸ್ ರಿಟರ್ನ್ ತೆಗೆದುಕೊಂಡು ಬಂದಿದ್ದರಲ್ಲಿ ಏನಾದರೂ ವ್ಯತ್ಯಾಸ ಇದ್ದರೆ ನನ್ನ ಪೂರಾ ಆಸ್ತಿಯನ್ನು ರಾಜ್ಯಕ್ಕೆ ಬಿಟ್ಟು ಕೊಡುತ್ತೇನೆ. ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಎಮರ್ಜೆನ್ಸಿ ಏಕೆ ಬಂತು, ಎಂದರೆ ಈ ಭೂಪತಿಗಳಿಗೆ ಸಂರಕ್ಷಣೆ ಕೊಡಬೇಕು. ಎಂದು ಬಂತು ಎಂದು ನಾನು ಖಂಡಿತವಾಗಿ, ಸ್ಪಷ್ಟವಾಗಿ ಹೇಳಬೇಕಾಗಿದೆ. ಇದೇ ಸಂದರ್ಭದಲ್ಲಿ ನಮಗೆ ಇಂತಹ ಸಣ್ಣ ಪುಟ್ಟ ಹಕ್ಕುಗಳು ಏನು ಇವೆ ಅವುಗಳನ್ನೂ ಮೊಟಕು ಮಾಡಿ ಒಂದು ಕರಾಳ ನಿರ್ಣಯವನ್ನು ತೆಗೆದುಕೊಂಡು ಬಂದಿದ್ದಾರೆ ನಮಗೆ ಇಂತಹ ಸಂಕುಚಿತ ಅಧಿಕಾರವನ್ನು ಏಕೆ ಕಿತ್ತುಕೊಳ್ಳುತ್ತೀರಿ ಎಂದು ನಾನು ಸ್ಪಷ್ಟವಾಗಿ ಕೇಳುತ್ತೇನೆ. ತುರ್ತು ಪರಿಸ್ಥಿತಿಯನ್ನು ನಮ್ಮ ಹಿತದೃಷ್ಟಿಯಿಂದ ತಂದಿಲ್ಲ. ತಮಗೆ ಯಾವ ಕಾಲದಲ್ಲಿ ಹೇಗೆಬೇಕಾದರೂ ಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಕಳೆದ ಒಂದು ವರ್ಷದಿಂದ ಸುಮಾರು 28-29 ಸುಗ್ರೀವಾಜ್ಞೆಗಳನ್ನು ಹೊರಡಿಸಿದ್ದಾರೆ. ಇದು ಸುಗ್ರೀವಾಜ್ಞೆಯ ಆಳ್ವಿಕೆಯೆಂದರೆ ತಪ್ಪಾಗಲಾರದು. ಇದರ ಮುಂದೆ ಕಾನ್‌ಸ್ಟಿಟ್ಯೂಷನ್ ಏಕೆ ಬೇಕು, ಅದನ್ನು ಕಿತ್ತು ಹಾಕಬಾರದೆ ? ಇಂಥ ಒಂದು ನಿರ್ಣಯವನ್ನು ಒಂದೇ ಸಾರಿ ಏಕೆ ತರಬಾರದು ? ಅಯೂಬ್ ಖಾನ್ ಮಾಡಿಕೊಂಡ ಹಾಗೆ ಏಕೆ ಮಾಡಿಕೊಳ್ಳಬಾರದು ? ಸ್ವತಂತ್ರ ಪಾರ್ಟಿಯವರನ್ನು ಸೇರಿಸಿಕೊಂಡಿದ್ದಾರೆ, ಜನಸಂಘದವರನ್ನು ಸೇರಿಸಿಕೊಂಡಿದ್ದಾರೆ, ಎಲ್ಲರನ್ನು ಸೇರಿಸಿಕೊಂಡಿದ್ದಾರೆ, ಎಲ್ಲಾ ಚೌಚೌ ಪಾರ್ಟಿಯವರು ಇವರಿಗೆ ಒಂದು ಪ್ರೋಗ್ರಾಂ ಇಲ್ಲ.

ಶ್ರೀ ಕೆ. ಶ್ರೀರಾಮುಲು.— ತಾವೂ ಅಲ್ಲಿಯೇ ಇದ್ದವರು.

ಶ್ರೀ ಟಿ. ಆರ್. ಶಾಮಣ್ಣ.— ನಾನು ಒಪ್ಪಿಕೊಳ್ಳುತ್ತೇನೆ. ನಾನು ಜೈಲು ವಾಸ ಮಾಡಿದಾಗ ಇವರಾರೂ ಇರಲಿಲ್ಲ ನಾವು ಒಳ್ಳೆಯ ಉದ್ದೇಶ ಇಟ್ಟುಕೊಂಡು ರಾಷ್ಟ್ರಕ್ಕೆ ಒಳ್ಳೆಯದಾಗಲೀ, ಜನಗಳು ಸ್ವಲ್ಪ ಸುಖಿಯಾಗಿರಲಿ, ಎಂದು ಸ್ವರಾಜ್ಯ ಬರುತ್ತದೆಂದು ಲೆಕ್ಕ ಮಾಡಿದ್ದೆವು. ಆದರೆ ಇಂಥ ಮಹಾತ್ಮರು ಬರುತ್ತಾರೆಂದು ನಮಗೆ ಗೊತ್ತಿರಲಿಲ್ಲ. ನಾವು ಜೈಲು ವಾಸ ಮಾಡಿದಾಗ ಅನೇಕ ಪುಡಿಯಾಳುಗಳು ಹುಟ್ಟಿಯೇ ಇರಲಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.— ಆಗ ಇಂದಿರಾಗಾಂಧಿಯವರ ವಯಸ್ಸೆಷ್ಟು ?

ಶ್ರೀ ಟಿ. ಆರ್. ಶಾಮಣ್ಣ.— ನಿಜವಾಗಿಯೂ ಕೂಡ ಈ ರೀತಿಯ ತುರ್ತು ಪರಿಸ್ಥಿತಿಯನ್ನು ತೆಗೆದುಕೊಂಡು ಬರುವುದರಿಂದ ಬಡಪಾಯಿಗಳಿಗೆ ಏನಾದರೂ ಅನುಕೂಲವಾಗುತ್ತದೆಯೇ? ಅಪೋಜಿಷನ್‌ವರ ಏನಾದರೂ ತಪ್ಪು ಮಾಡಿದರೆ ಅವರಿಗೆ ಶಿಕ್ಷೆ ವಿಧಿಸಿ, ಏನು ಶಿಕ್ಷೆ ಕೊಟ್ಟಿದ್ದರೂ ಶಿರಸಾವಹಿಸಿ ನಡೆಯುವುದಕ್ಕೆ ತಯಾರಿದ್ದೇವೆ. ರಾಜ್ಯಕ್ಕೆ ಸಂಬಂಧಪಟ್ಟ ದೇವಾಲಯ ಇದ್ದರೆ, ದೇವರು ಮಂಟಪ ಇದ್ದರೆ ಅದನ್ನು ಅರಮನೆಯ ಸ್ವತ್ತಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟ ಪಕ್ಷದಲ್ಲಿ ನಾವು

ಮನುಷ್ಯರಾಗಿ ಹುಟ್ಟಿ ಸಾರ್ಥಕವಾಗುತ್ತದೆಯೋ ಎಂದು ನೋಡಬೇಕಾಗುತ್ತದೆ. ಆದ್ದರಿಂದ ಈ ನಿರ್ಣಯವನ್ನು ಖಂಡಿತವಾಗಿಯೂ ಮುಂದುವರಿಸಬೇಡಿ. ನೀವು ಬೇಕಾದರೆ, ಎಲ್ಲದಕ್ಕೂ ಜೈ ಎಂದು ಹೇಳಿ ಎಂದರೂ ಸರಿ, ಆದರೆ ನಮ್ಮ ಹಕ್ಕು ಬಾಧ್ಯತೆಗಳಿಗೆ ಮೊಟಕು ಮಾಡಿ, ಬೇರೆ ಉದ್ದೇಶ ಇಟ್ಟು ಕೊಂಡು ಎಲ್ಲರ ಮೇಲೂ ದುರಭ್ಯಾಸವನ್ನು ಹೊರಿಸುವುದಕ್ಕೆ ಹೋಗಬೇಡಿ. ದಯವಿಟ್ಟು ಇದನ್ನು ವಾಪಸ್ ತೆಗೆದುಕೊಂಡು ಒಳ್ಳೆಯ ಕೆಲಸ ಮಾಡಬೇಕು. ಇಲ್ಲದೆ ಹೋದರೆ ನೀವು ಮಾಡತಕ್ಕ ಪಾಪದ ಕೆಲಸಗಳಲ್ಲಿ ನಮ್ಮನ್ನು ಸೇರಿಸಬೇಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).— ಅಧ್ಯಕ್ಷರೇ, ಮಾನ್ಯ ಸಂಸದೀಯ ಸಚಿವರು ಮಂಡಿಸಿ ದಂಥ ನಿರ್ಣಯವನ್ನು ನಾನು ವಿರೋಧ ಮಾಡುತ್ತಾ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡು ತ್ತೇನೆ. ಹೆಚ್ಚು ಕಡಿಮೆ, ಈ ನಿರ್ಣಯ ಸಂಸತ್ತನ್ನು ಮುಚ್ಚಿ ಹಾಕತಕ್ಕಂಥ ಒಂದು ಕೆಲಸವಾಗಿದೆ. ರಾಜ್ಯಾಂಗ ಕೊಟ್ಟಂಥ ಅಧಿಕಾರವನ್ನು ರಾಜ್ಯಾಂಗದ ಮುಂಖೇನೆ ; ರಾಜ್ಯಾಂಗವನ್ನೇ ತುಳಿಯುವುದಕ್ಕೆ ಪ್ರಯತ್ನ ಮಾಡತಕ್ಕ ಒಂದು ಕೆಲಸ ಇದಾಗಿದೆ. ಇವತ್ತಿನ ದಿವಸ ನಾವು ಭಸ್ಮಾಸುರನನ್ನು ನೆನಸಿಕೊಳ್ಳ ಬಹುದು, ಯಾರಿಂದ ವರಪ್ರಸಾದವನ್ನು ಪಡೆದರೋ ಅವರನ್ನೇ ನಾಶ ಮಾಡತಕ್ಕಂಥ ಕೆಲಸವನ್ನು ಆ ಭಸ್ಮಾಸುರ ಏನು ಮಾಡಿದನೋ ಅದೇ ಕೆಲಸವನ್ನು ಇವತ್ತು ಇವರು ಮಾಡುತ್ತಾ ಇರುವುದನ್ನು ನಾವು ನೋಡುತ್ತಿದ್ದೇವೆ. ಇದನ್ನು ನೋಡಿದ ಮೇಲೆ ನಾವು ನೀವು ಎಲ್ಲರೂ ವಿಧಾನ ಮಂಡಲಗಳಲ್ಲಿ ಸಂಸತ್ತಿ ನಲ್ಲಿ ನಮ್ಮ ಅಸ್ತಿತ್ವವನ್ನು ಹೊಂದುತ್ತೇವೆನ್ನುವ ಅಪೇಕ್ಷೆ ಯಾರಿಗಾದರೂ ಇದ್ದರೆ ಅದನ್ನು ಮರೆಯ ಬೇಕಾಗುತ್ತದೆ ಇವತ್ತಿನ ದಿವಸ ಕೆಲವರು ಒಳಗೆ ಸೇರಿರಬಹುದು. ಕೆಲವರು ಹೊರಗೆ ಬೀಳಬಹುದು, ಯಾರು ಯಾರು ಯಾವ ಯಾವ ಸಂದರ್ಭದಲ್ಲಿ ಒಳಗೆ ಹೋಗುತ್ತಾರೆ ಅಥವಾ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಾರೆ ಎನ್ನತಕ್ಕದ್ದನ್ನು ನಾವು ಊಹಿಸುವುದಕ್ಕಾಗುವುದಿಲ್ಲ.

ನಾವು ರಷ್ಯಾ ಮುಂತಾದ ದೇಶಗಳನ್ನು ನೋಡಬಹುದು ; ಹಿಟ್ಲರ್ ನಂತಹವರನ್ನೂ ನೋಡ ಬಹುದು. ಸ್ಟಾಲಿನ್ ರವರು ತನ್ನ ಅವಧಿಯಲ್ಲಿ ವಿರೋಧಿಗಳನ್ನೆಲ್ಲಾ ನಾಶ ಮಾಡಿದ. ಆದರೆ ಅವನ ನಂತರ ಬಂದಂಥವರು ಅವನ ಸ್ಮಶಾನವನ್ನೂ ಉಳಿಸಲಿಲ್ಲ. ಆದುದರಿಂದ, ಇವತ್ತು ಕೆಲವರು – ಕೆಲವರಿಗೆ ಸ್ನೇಹಿತರಾಗಿ ಕಾಣುತ್ತಾರೆ, ಮತ್ತೆ ಕೆಲವರಿಗೆ ವಿರೋಧಿಗಳಾಗಿ ಕಾಣುತ್ತಾರೆ ಹಿಂದೆ ಇದ್ದಂಥ ಸ್ನೇಹಿತ ಈಗ ವಿರೋಧಿಯಾಗುತ್ತಾನೆ. ; ವಿರೋಧಿ ಸ್ನೇಹಿತನಾಗುತ್ತಾನೆ ; ಆದುದರಿಂದ ರಾಜಕೀಯವಾಗಿ ಬದುಕಬೇಕು ಎಂದು ಅಪೇಕ್ಷೆ ಹೊಂದಿರತಕ್ಕ ಯಾರಾದರೂ ಕೂಡ ನಾವು ಇದೇ ದಿಶೆಯಲ್ಲಿ ನಿಶ್ಚಿತವಾಗಿ ಹೋಗುತ್ತೇವೆ ಎನ್ನುವಂಥ ಒಂದು ಕಲ್ಪನೆಯನ್ನು ಇಟ್ಟುಕೊಳ್ಳಬಾರದು ; ಮಾನ್ಯ ಚನ್ನಬಸಪ್ಪನವರೂ ಕೂಡ ಇಟ್ಟುಕೊಳ್ಳಬಾರದು ; ಇವತ್ತು ಅವರು ಮಂತ್ರಿಗಳಾಗಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಇದ್ದಾರೆ ; ಆದರೂ ಕೂಡ "ಪರವಾಗಿಲ್ಲ" ಎನ್ನತಕ್ಕ ಧೈರ್ಯ ಅವರಿಗಿದ್ದರೆ ಅದು ಬೇರೆ ; ಈ ಬಗ್ಗೆ ಭ್ರಮೆ ಬೇಡ ; ಆದುದರಿಂದ, ವಾಸ್ತವಿಕವಾಗಿ ಮತ್ತು ಪ್ರಾಮಾಣಿಕವಾಗಿ ಈ ದೇಶದ ವ್ಯವಸ್ಥೆಯನ್ನು ನೋಡತಕ್ಕ ಪ್ರಯತ್ನ ಇವತ್ತಿನ ದಿವಸ ನಾವು ಮಾಡಬೇಕಾಗಿದೆ. ಹಾಗೆ ಮಾಡಿದರೆ ಮಾತ್ರ, ಈ ದೇಶದ ನಿಜಸ್ಥಿತಿ ನಮಗೆ ಸ್ವಾಭಾವಿಕವಾಗಿ ಕಾಣುತ್ತದೆ. ಆದುದರಿಂದ, ನಾವು ಈ ದಿಸೆಯಲ್ಲಿ ವಿಚಾರ ಮಾಡೋಣ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ರಾಜಕೀಯ ನಿಯಮಗಳನ್ನು ರದ್ದುಗೊಳಿಸಿ, ಈ ರಾಜ್ಯಸಭೆಯ ಮುಂದೆ ಬಂದ ಕಾರ್ಯಕ್ರಮಗಳನ್ನು ಪೂರೈಸಬೇಕು ಎನ್ನುವಂಥ ನಿರ್ಣಯವನ್ನು ಸರ್ಕಾರದ ವತಿಯಿಂದ ಮಾನ್ಯ ಸಚಿವರು ಇವತ್ತಿನ ದಿವಸ ಮಂಡಿಸಿದ್ದಾರೆ, ಅವರು ಇದನ್ನು ಮಂಡಿಸಿ ಮಾತನಾಡು ವಾಗ ತೇಲಿಸಿ ಮಾತನಾಡಿದರು. ನಾನು ಎಷ್ಟು ಹೇಳಿದರೂ ನಿಮ್ಮನ್ನು ಒಪ್ಪಿಸುವುದಕ್ಕಾಗುವುದಿಲ್ಲ ; ಅಥವಾ ನೀವು ಎಷ್ಟು ಹೇಳಿದರೂ ನಮನ್ನು ಒಪ್ಪಿಸುವುದಕ್ಕಾಗುವುದಿಲ್ಲ ಎನ್ನುವ ಧಾಟಿಯಲ್ಲಿ ತೇಲಿಸಿ ಹೇಳಿದರು. ಮಾನ್ಯ ಸಚಿವರನ್ನು ನಾವು ಒಪ್ಪಿಸುವುದಕ್ಕೆ ಆಗದೇ ಇರಬಹುದು, ಆದರೆ, ಅವರು ಈ ಸದನದಲ್ಲಿ ಹೇಳುವ ಮಾತನ್ನು ಹೇಳಬೇಕಾದುದು ಅಗತ್ಯ. ಇಲ್ಲಿ ನಾವು ಅನೇಕ ವಿಚಾರಗಳನ್ನು ಚರ್ಚೆ ಮಾಡುತ್ತೇವೆ, ಕೊನೆಗೆ ಒಂದು ನಿರ್ಮಾನಕ್ಕೆ ಬರುತ್ತೇವೆ, ಅನೇಕ ವೇಳೆ ನಾವು ಅನೇಕ ವಿಚಾರಗಳನ್ನು ಒಪ್ಪಿಕೊಂಡಿದೇವೆ. ಆದುದರಿಂದ, ಮಾನ್ಯ ಮಂತ್ರಿಗಳು ಸದನದಲ್ಲಿ ಹೇಳಬೇಕಾದನ್ನೆಲ್ಲಾ ಹೇಳಬೇಕಾ ಗುತ್ತದೆ. ಹೇಳುವುದಕೋಸ್ಕರವಾಗಿಯೇ ಶಾಸನ ಸಭೆ ಇರುವುದು ; ಆದುದರಿಂದ, ಈ ನಿರ್ಣಯವನ್ನು ಮಂಡಿಸತಕ್ಕ ಕಾಲದಲ್ಲಿ ಸನ್ಮಾನ್ಯ ಸಂಸದೀಯ ಸಚಿವರು ಈ ರಾಜ್ಯಕ್ಕೆ ಸಂಬಂಧಪಟ್ಟ ಕಾರ್ಯಕಲಾಪಗಳನ್ನು ಮಾಡುತ್ತಿದ್ದೇವೆ ; ಈ ರಾಜ್ಯದಲ್ಲಿ ಏನು ಪರಿಸ್ಥಿತಿ ಇವೆ ಅದನ್ನೆಲ್ಲಾ ನಾವು ಕಾನೂನುಬದ್ಧವಾಗಿ ವಿಧಿ ವತ್ತಾಗಿ ಮತ್ತು ಯಥಾವತ್ತಾಗಿ ಕಾರ್ಯಕ್ರಮಗಳನ್ನು ನಡೆಸುವುದರಿಂದ ಏನು ಅನಾಹುತವಾಗುತ್ತದೆ, ಆದುದರಿಂದ ಅವೆಲ್ಲಾವನ್ನೂ ಕೈಬಿಟ್ಟು ಹೊಸ ವ್ಯವಸ್ಥೆಯಲ್ಲಿ ಕಾರ್ಯಕಲಾಪಗಳನ್ನು ಏತಕ್ಕೆ ನಡೆಸಬೇಕು ಎಂದು ವಿವರವಾಗಿ ಹೇಳಲಿಲ್ಲ. ನಾನು ಮಾನ್ಯ ಸಂಸದೀಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಈಗ ತಾವು ಮಂತ್ರಿಗಳಾಗಿದ್ದೀರಿ, ಈಗ ಆ ಪದವಿಯನ್ನು ಬಿಟ್ಟು ನಾವು ಸ್ನೇಹಿತರಂತೆ ಈ ವಿಚಾರಗಳ ಬಗ್ಗೆ ಮಾತನಾಡಿದರೆ, ಬಹುಶಃ ಮಾನ್ಯ ಸಚಿವರೂ ಕೂಡ ಒಪ್ಪುತ್ತಾರೆ ಎನ್ನುವಂಥ ಆತ್ಮವಿಶ್ವಾಸ ನನಗಿದೆ.

ಮಾನ್ಯ ಸಂಸದೀಯ ಸಚಿವರ ಹೃದಯ ಕಲ್ಲಾಗಿಲ್ಲ ; ಅವರ ನೇತ್ರಗಳು ಕುರುಡಾಗಿಲ್ಲ ; ಅವರ ಕರುಣೆಗಳು ಮುಚ್ಚಿಲ್ಲ ಎನ್ನುವ ಆತ್ಮವಿಶ್ವಾಸ ನನಗೆ ಇನ್ನೂ ಇದೆ. ಆದರೆ, ಯಾವುದೊ ಒಂದು ಕಾರಣಕ್ಕಾಗಿ ಯಾವುದೋ ಸಂದರ್ಭಕ್ಕಾಗಿ ಮಾನ್ಯ ಸಚಿವರ ಕಣ್ಣು ಕುರುಡಾಗಿದೆ. ಅವರ ಆತ್ಮ ಕಲ್ಲಾಗಿದೆ ; ಅವರ ಕರುಣೆಗಳು ಕಠೋರಗಳಾಗಿವೆ. ಇಷ್ಟು ಮಾತ್ರ ನಾನು ಹೇಳಬಹುದೇ ವಿನಃ ಅವರನ್ನು ವಾಸ್ತವಿಕವಾಗಿ ನಾವು ಅರ್ಥಮಾಡಿ ಕೊಂಡರೆ ನಾನು ಒಪ್ಪುವುದಿಲ್ಲ. ಇವತ್ತು ಮಾಮೂಲಿನಂತೆ, ಶಾಸನ ಸಭಾ ಸದಸ್ಯರು ತಮ್ಮ ಹಕ್ಕು ಬಾಧ್ಯತೆಗಳನ್ನು ಉಪಯೋಗಿಸಿಕೊಂಡು, ಪ್ರಶ್ನೋತ್ತರಗಳನ್ನು ಮತ್ತು ಇತರ ಪ್ರಮುಖ ವಿಷಯಗಳನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಟ್ಟು ಸರ್ಕಾರದ ಕಾರ್ಯಕಲಾಪಗಳನ್ನು ಪೂರೈಸಿದರೆ ಆಕಾಶ ಕಳಚಿ ತಮ್ಮ ತಲೆಯ ಮೇಲೆ ಬೀಳುತ್ತಾ ಇರಲಿಲ್ಲ. ಅಕಸ್ಮಾತ್ ಬಿದ್ದರೆ ನಾವು ಸಾಯುತ್ತೇವೆ, ನೀವು ಸಾಯುತ್ತೀರಿ ; ಅನಾಹುತವೇನೂ ಆಗುತ್ತಾ ಇರಲಿಲ್ಲ ; ಹಾಗಾದರೆ, ನಿಮಗೆ ಇದ್ದಂಥ ಹೆದರಿಕೆ ಯಾದರೂ ಏನೂ ? ಯಾರನ್ನಾದರೂ ಮಂತ್ರಿಗಳನ್ನು ಕೊಂಡಿದ್ದಾರೆಯೇ ? ಆದರೆ, ಅಂಥಾದ್ದೇನೂ ಈಗ ನಡೆದಿಲ್ಲ. ತುರ್ತು ಪರಿಸ್ಥಿತಿ ಇದೆ, ಜಾರಿಗೆ ತಂದಿದ್ದೀರಿ. ತುರ್ತು ಪರಿಸ್ಥಿತಿ ಘೋಷಣೆ ಮಾಡಿ, ಕಳ್ಳಸಾಗಾಣಿಕೆದಾರರನ್ನು ಅವರನ್ನು-ಇವರನ್ನು ರಾಜಕೀಯ ವಿರೋಧಿಗಳನ್ನು ಒಳಕ್ಕೆ ಹಾಕಬಹುದು. ಇದರ ಬಗ್ಗೆ ರಿಟ್ ಮಾಡುವ ಹಾಗೆ ಕೂಡ ಇಲ್ಲ. ಆದುದರಿಂದ, ನಿಮಗೆ ತುರ್ತು ಪರಿಸ್ಥಿಯಿಂದ ನಿಮ್ಮ ಜನತಾ ಕಾರ್ಯಕ್ರಮಗಳನ್ನು ಜಾರಿಗೆ ಮಾಡಿಕೊಳ್ಳುವುದರ ಬಗೆ ಬೇಕಾದಷ್ಟು ಅವಕಾಶ ಇತ್ತು. ನಾವು ಕೂಡ ಸಲಹೆಗಳನ್ನು ಕೊಡುತ್ತಿದ್ದೆವು ಅಥವಾ ಪರಿಸ್ಥಿತಿ ಏನು ಇದೆ ಎಂದು ನಾವು ವಿಶೇಷವಾಗಿ ಹೇಳುತ್ತಿದ್ದೆವು ಅದು ಬಿಟ್ಟು ಎಲ್ಲಾ ಕಾರ್ಯಕ್ರಮಗಳನ್ನೂ ರದ್ದುಪಡಿಸಿ, ಸರ್ಕಾರದ ಕಾರ್ಯಕ್ರಮಗಳನ್ನೂ ಮಾತ್ರ ಪೂರೈಸಬೇಕು ಎನ್ನುವುದರಲ್ಲಿ ಯಾವುದೇ ವಿಶೇಷ ಅರ್ಥ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಹೋರಾಟ ಮಾಡಿ ಕೊನೆಗೆ ಭಂಗಿ ಸೇದದ ಎನ್ನುವ ಗಾದೆಯ ಮಾತಂತಾಗಿದೆ ಈಗಿನ ಪರಿಸ್ಥಿತಿ. ಬಾಪೂಜಿ ಯವರ ಭಾವಚಿತ್ರವನ್ನು ಈ ಸದನದಲ್ಲಿ ಇಟ್ಟಿದ್ದಾರೆ. ಅವರ ಕಾಲದಲ್ಲಿ ಇದ್ದ ಎಲ್ಲಾ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯ ವ್ಯವಸ್ಥೆಯನ್ನು ಮುಚ್ಚಿ ಹಾಕುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ,

ಶ್ರೀ ಡಿ. ದೇವರಾಜ ಅರಸ್.— ಯಾರ ಸ್ವಾತಂತ್ರ್ಯ ?

ಶ್ರೀ ಕಾಗೋಡು ತಿಮ್ಮಪ್ಪ.— ಇವತ್ತು, ನಮಗೆ ಬರುತ್ತದೆ, ನಾಳೆ ನಿಮಗೂ ಬರುತ್ತದೆ ; ಒಂದು ದಿವಸ ಮುಂಚಿತವಾಗಿ ನಮಗೆ ಬಂದಿದೆ ; ನಿಮಗೆ ಸ್ವಲ್ಪ ತಡೆದು ಬರುತ್ತದೆ ; ಬರುವುದಿಲ್ಲ ಎಂದು ಖಂಡಿತವಾಗಿ ನಾನು ಹೇಳುವುದಿಲ್ಲ. ಈ ಒಂದು ನಿಜ ಸ್ಥಿತಿಯನ್ನು ತಿಳಿದುಕೊಂಡು ನಾವು ಮಾತನಾಡೋಣ ಏಕೆಂದರೆ ಪ್ರಜಾಪ್ರಭುತ್ವ ಎಂದ ಮೇಲೆ ಸ್ವಾತಂತ್ರ್ಯ ಇರಬೇಕು ; ಹಕ್ಕುಬಾಧ್ಯತೆಗಳಿಗೆ ಅವಕಾಶವಿರಬೇಕು, ಅದು ಇಲ್ಲದಿದ್ದರೆ, ಪಾರ್ಲಿಮೆಂಟ್ ಮತ್ತು ಲೆಜಿಸ್ಲೇಚರ್ is nothing but a crippled demcocracy. ಕೈ ಇಲ್ಲ, ಕಾಲು ಇಲ್ಲ, ಆದರೆ ಕಣ್ಣು ಇದೆ, ಅದಕ್ಕೆ ತಲೆ ಬೋಳಿಸಿದ್ದಾರೆ. ಅದು ಹೇಗಿದೆ ಎಂದರೆ, ಹೆಳವ ಮಕ್ಕಳು ಅತ್ತ ಇತ್ತ ಹೋಗುವ ಹಾಗೂ ಇಲ್ಲ ; ಇಲ್ಲ ಬಿಡುವ ಹಾಗೂ ಇಲ್ಲ ; ಆದರೆ ಅದಕ್ಕೆ ಒಂದು ಜೀವ ಎಂದು ಇರುತ್ತದೆ. ಅಂಗವಿಕಲರಾದ ಮಕ್ಕಳು ಹೇಗೆ ನೋಡುವುದಕ್ಕೆ ಮನುಷ್ಯರಂತಿದ್ದರೂ, ಈ ಜಗತ್ತಿನ ಯಾವುದೇ ಸುಖವಾಗಲಿ, ದುಃಖವಾಗಲಿ ಅನುಭೋಗಿಸಲು ಅಥವಾ ಕೆಲಸ ಮಾಡಲು ಅನರ್ಹನಾಗಿರುತ್ತಾರೋ, ಅದೇ ರೀತಿ ಈ ಶಾಸನ ಸಭೆ ಇವತ್ತಿನ ದಿವಸ ಆಗಿದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ, ಆದುದರಿಂದ, ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿಗೆ ನಾವು ಮೊರೆ ಹೋಗುತ್ತೇವೆ. ಹಿಂದೆ ರಾಮಾಯಣ ಮಹಾಭಾರತ ನಡೆದ ಕಾಲದಲ್ಲಿ ರಾಕ್ಷಸರು ದೇವತೆಗಳ ಮೇಲೆ ಆಕ್ರಮಣ ನಡೆಸುತ್ತಿದ್ದರು. ಆಗ ದೇವತೆಗಳೆಲ್ಲರೂ ಸೇರಿ ' ಕಾಪಾಡಿ ಕಾಪಾಡಿ " ಎಂದು ಕೂಗುತ್ತಾ ದೇವರ ಮೊರೆ ಹೋಗುತ್ತಿದ್ದರು ಆಗ ದೇವರು ಅವರನ್ನು ರಕ್ಷಿಸಿ, ರಾಕ್ಷಸರನ್ನು ಸಂಹಾರ ಮಾಡುತ್ತಿದ್ದನು. ಆದುದರಿಂದ, ಮಾನ್ಯ ಅಧ್ಯಕ್ಷರೇ ಈಗ ನಮಗೆ ತಾವು ರಕ್ಷಣೆ ನೀಡಬೇಕಾಗಿದೆ.

ಶ್ರೀ ವಿ. ಎನ್. ಪಾಟೀಲ್.— ಸಮಾಜವಾದದಲ್ಲಿ ನಂಬಿಕೆ ಇರುವ ತಾವೂ ಕೂಡ, ಪುರಾಣ ಮತ್ತು ದೇವತೆಗಳಲ್ಲಿ ನಂಬಿಕೆ ಇಟ್ಟಿದ್ದೀರಾ ?

ಶ್ರೀ ಕಾಗೋಡು ತಿಮ್ಮಪ್ಪ.— ನಾನು ಈಗ ಏನು ಹೇಳುತ್ತಿದ್ದೇನೆ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಿದರೆ, ನಾನು ನಂಬಿಕೆ ಇಟ್ಟಿದ್ದೇನೆಯೋ, ಇಲ್ಲವೇ ಎನ್ನುವುದು ಸ್ಪಷ್ಟವಾಗುತ್ತದೆ. ; ಸ್ವಾಮಿ, ಬಾಯಿಯಲ್ಲಿ ಕಮ್ಯೂನಿಸಂ ಹೇಳಿ, ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಸಿರುವವರನ್ನು ನಾನು ನೋಡಿದ್ದೇನೆ. ಸಮಾಜವಾದವನ್ನು ಹೇಳಿ, ಪೂಜೆ ಮಾಡಿಸಿರುವವರನ್ನು ನೋಡಿದ್ದೇನೆ ಆದರೆ, ನಾನು ಆ ರೀತಿ ಮಾಡಿಲ್ಲ ಆದುದರಿಂದ, ಈ ಸದನಕ್ಕೆ ಮತ್ತು ಈ ಸದನದ ಸದಸ್ಯರಿಗೆ ರಕ್ಷಣೆಯನ್ನು ನೀಡಲು ಮಾನ್ಯ ಅಧ್ಯಕ್ಷರನ್ನು ಬಿಟ್ಟರೆ ಮತ್ತೆ ಬೇರೆ ಯಾರೂ ಇಲ್ಲ ನಾವು ಹೊರಗೆ ಹೋದರ ನಮ್ಮನ್ನು ಅರೆಸ್ಟ್ ಮಾಡಿಸಿ ಒಳಕ್ಕೆ ಹಾಕಿಸಬಹುದು. ನಾನು ಕಳೆದ ೮-೭ ದಿವಸಗಳಿಂದ ಅಂತರ್ಗನಾಗಿದ್ದೆ ; ಆದುದರಿಂದ, ಮಾನ್ಯ ಅಧ್ಯಕ್ಷರು ನಮಗೆ ರಕ್ಷಾ ಕವಚದ ವರಪ್ರಸಾದ ನೀಡಲೇಬೇಕು. ರಕ್ಷಣೆ ನೀಡದೇಹೋದರೆ ಶಾಸನ

ಸಭೆ ಹೆಚ್ಚು ಕಡಿಮೆ ಒಂದು ಮಾಕರಿಯಾಗುತ್ತದೆ, ಇವತ್ತು ರಾಜ್ಯದಲ್ಲೇ ಮಾನ್ಯ ಸಚಿವರು ಈ ನಿರ್ಣಯ ವನ್ನು ಮಂಡಿಸುವಾಗ ಏನು ಅಂಥ ಪರಿಸ್ಥಿತಿ ಇದೆ ಎನ್ನತಕ್ಕಂಥಾದ್ದನ್ನು ಹೇಳಲಿಲ್ಲ. ನಾನು ಹೇಳುತ್ತೇನೆ ಪ್ರಶ್ನೆಗಳನ್ನು ಕೇಳುವುದಕ್ಕೆ ಏನೇನೂ ತೊಂದರೆ ಇಲ್ಲ. ಮಾನ್ಯ ಶಾಮಣ್ಣನವರು ಹೇಳಿದರು ನಮಗೆ ಪ್ರಶ್ನೆಗಳನ್ನು ಕೇಳಿದರೆ, ಇನ್ನಿತರ ಪ್ರಿವಿಲೆಜ್ ಮೋಷನ್ ಅಥವಾ ಇನ್ನು ಯಾವುದಾದರೂ ವಿಷಯಗಳನ್ನು ಕೇಳುವುದಕ್ಕೆ ಅವಕಾಶವಿದ್ದಿದ್ದರೆ, ಈ ತುರ್ತು ಪರಿಸ್ಥಿತಿಯಲ್ಲಿ ಏನೂ ತೊಂದರೆಯಾಗುತ್ತಿರಲಿಲ್ಲ. ಅದು ನ್ಯಾಯವಾಗಿರಬಹುದು, ಅನ್ಯಾಯವಾಗಿರಬಹುದು, ಒಳ್ಳೆಯದಾಗಿರಬಹುದು, ಕೆಡಕು ಆಗುವುದು ಆಗಿರಬಹುದು ಅವೆಲ್ಲವನ್ನೂ ಶಾಸನ ಸಭೆ ಮುಂದೆ ತರುವುದಕ್ಕೆ ಅವಕಾಶವಿತ್ತು. ಮಾನ್ಯ ಶಾಮಣ್ಣ ನವರು ಒಂದೆರಡು ಉದಾಹರಣೆಗಳನ್ನು ಹೇಳಿದರು. ಯಾವುದೋ ರಕ್ಷಣೆ ಪಡೆದು ಭ್ರಷ್ಟತನ ಮಾಡಿರುವ ಉದಾಹರಣೆಯನ್ನು ಹೇಳಿದರು. ಇವತ್ತು ಅವರು ಏನು ಅಂಶ ಹೇಳಿದರು ಅದು ಸರಿಯಾಗಿದೆ '೦ ಅಂಶದ ಜನತಾ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ವಿಷಯ ಇದೆ. ಇವತ್ತು ಉದಾಹರಣೆಗೆ ಹೇಳುತ್ತೇನೆ. ಭೂಸುಧಾರಣೆ ; ಎಷ್ಟು ವರ್ಷ ಆಯಿತು ಅದನ್ನು ಜಾರಿಗೆ ಕೊಟ್ಟು, ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಪಾಪ ಅವರಿಗೆ ಪುರಸೊತ್ತಿಲ್ಲ ಮೊನ್ನೆ ಪತ್ರಿಕೆಯಲ್ಲಿ ನೋಡಿದೆ. ಕಾರ್ಯಕ್ರಮ ಪೂರೈಸಲು ೬ ತಿಂಗಳು ಇದೆ ಅದನ್ನು ಮೂರು ತಿಂಗಳಲ್ಲೇ ಪೂರೈಸಬಹುದು ಎಂದು. ಒಂದು ವರ್ಷ ದೊಳಗೆ ಭೂಸುಧಾರಣೆ ಕೆಲಸವನ್ನು, ಜಮೀನು ಹಂಚತಕ್ಕ ಕೆಲಸವನ್ನು, ಸೈಟು ಹಂಚತಕ್ಕ ಕೆಲಸವನ್ನು ಮಾಡಿದರೆ ನಿಮಗೆ ಖಂಡಿತವಾಗಿ ಜನರ ಪರವಾಗಿ ಚಿನ್ನದ ಕಿರೀಟವನ್ನು ಹಾಕಿಸಿಬಿಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ತಿರುಪತಿ ತಿಮ್ಮಪ್ಪನ ಕೃಪೆ ನಮ್ಮ ಮೇಲೆ ಈಗ ಬಂದಿದೆ.

ಶ್ರೀ ಕಾಗೋಡು ತಿಮ್ಮಪ್ಪ.— ೧೯೭೪ನೇ ಇಸವಿ ಏಪ್ರಿಲ್ ಒಂದನೇ ತಾರೀಖು ಭೂಸಂಧಾರಣೆ ಕಾನೂನು ಜಾರಿಗೆ ಬಂತು. ಇವತ್ತಿನ ವರೆಗೆ ಅದಕ್ಕೆ ಬೇಕಾದಂಥ ಸಿಬ್ಬಂದಿವರ್ಗವನ್ನು ನೀವು ನೇಮಿಸಲಿಲ್ಲ ಎಂದರೆ ನೀವು ಯಾವುದನ್ನು ಜಾರಿಗೆ ಕೊಡುವುದು, ಇವತ್ತಿನವರೆಗೂ ಎಷ್ಟು ಟ್ರಿಬ್ಯುನಲ್ಸ್ ಕೆಲಸ ಮಾಡಿದ್ದಾರೆ ? ಏನು ಕೆಲಸ ನೀವು ಮಾಡಿರುವುದು ? ಇದನ್ನೆಲ್ಲಾ ನಾವು ಕೇಳಬಾರದೆ ? ನಮಗೆ ನಾಚಿಕೆಯಾಗುತ್ತದೆ. ಭೂಸುಧಾರಣೆ, ಭೂಸುಧಾರಣೆ ಎಂದು ಹೇಳಿಕೊಂಡು ಇವತ್ತಿನವರೆಗೂ ಟ್ರಿಬ್ಯುನಲ್ ಬಂದಿಲ್ಲ ಎಂದರೆ ಹೇಗೆ ? ಅಸಿಸ್ಟೆಂಟ್ ಕಮಿಷನರ್ ನೋಡುವುದಕ್ಕೆ ಹೋಗೇ ಇಲ್ಲ. ಬೇರೆಯವರನ್ನು ಹಾಕಿ ಎಂದು ಹೇಳಿದರೆ ಪುರಸೊತ್ತಿಲ್ಲವಂತೆ. ನೀವು ಭೂಸಂಧಾರಣೆಗೆ ಪರಿಣತರು ಎಂದು ವಿಶೇಷಾಧಿಕಾರಿ ಇಟ್ಟುಕೊಂಡಿದ್ದೀರಿ. ಅವರು ಕಡಿದದ್ದು ಏನು. ಇದನ್ನೆಲ್ಲಾ ಕೇಳುವುದಕ್ಕೆ ಇವತ್ತು ಅವಕಾಶ ಇಲ್ಲ. ಮಾನ್ಯ ಸಚಿವರಾಗಿದ್ದ ಶ್ರೀಮಾನ್ ಬಸವಲಿಂಗಪ್ಪನವರು ಒಂದು ಗಡಿ ಹಾಕಿ ಆಗಸ್ಟ್ ೧೯೭೩ ರೊಳಗೆ ಸೈಟ್‌ನ್ನು ಹಂಚಬಿಡಬೇಕು ಎಂದು ಹೇಳಿದರು. ಕರಾರುವಾಕ್ಕಾಗಿ ಸೈಟನ್ನು ಹಂಚಬೇಕು ಎಂದು ಮಾಡಿದರು. ಅಧಿಕಾರಿಗಳು ಎಲ್ಲಾ ಕೆಲಸ ಬಿಟ್ಟು ಓಡಾಡಿದರು. ಬೇಗ ಕೆಲಸ ಮಾಡದೇ ಇದ್ದರೆ ಸಸ್ಪೆಂಡ್ ಮಾಡುತ್ತಾರೆ ಅಂತ ಓಡಾಡಿದರು. ಕೊನೆಗೆ ಎಷ್ಟು ಹಂಚಿದ್ದೀರಿ ಲೆಕ್ಕ ಕಳಿಸಿ ಎಂದು ಹೇಳಿದರೆ ಇವತ್ತಿನವರೆಗೂ ಕಳಿಸಿಲ್ಲ. ಸಾಗುವಳಿ ಚೀಟಿ ಹಂಚಿಕೆ ಸರಿಯಾಗಿ ಆಗಿಲ್ಲ. ಅವನಿಗೆ ಕೊಡುವುದನ್ನು ಇವನಿಗೆ ಕೊಟ್ಟರು. ಇವನಿಗೆ ಕೊಡುವುದನ್ನು ಅವನಿಗೆ ಕೊಟ್ಟರು. ಇವತ್ತಿನವರೆಗೂ ಕರೆಕ್ಟಾಗಿ ಮಾಡಿ ಕೊಡಲಿಲ್ಲ. ಒಂದು ವರ್ಷದಿಂದ ತಹಸೀಲ್ದಾರ್‌ಗೆ ಮಾಡಿಕೊಡಿ ಎಂದು ಹೇಳುತ್ತಿದ್ದೇನೆ. ಅದರೂ ಮಾಡಿ ಕೊಡಲಿಲ್ಲ ತದನಂತರ ಬಂದಿರತಕ್ಕ ಮಂತ್ರಿಗಳು ಎಷ್ಟು ಸೈಟು ಹಂಚಿದಿರಿ ಹೇಳಿ ಇವನ್ನು ಕೇಳುವುದು ಬೇಡವೆ ಸ್ವಾಮಿ. ಮಾನ್ಯ ರಂಗನಾಥ್ ಅವರು ಇಲ್ಲಿ ಕುಳಿತಿದ್ದಾರೆ. ಸೊಸೈಟಿಗಳ ಜವಾಬ್ದಾರಿ ಅವರ ಕೈಯಲ್ಲಿದೆ. ಸೊಸೈಟಿಗಳಲ್ಲಿ ದುಡ್ಡು ಹೊಡೆದು ಹೊಡೆದು ಹಗ್ಗಣಗಳಾಗಿದ್ದಾರೆ ಅವರಲ್ಲಿ ಎಷ್ಟು ಜನರನ್ನು ಮೀಸಾ ಪ್ರಕಾರ ಒಳಗೆ ಹಾಕಿದ್ದೀರಿ ? ನಾನು ಕಾಗದ ಬರೆದಿದ್ದೆ. ಅದಕ್ಕೆ ನಿಮ್ಮ ಕಾಗದವನ್ನು ಪರಿಶೀಲನೆ ಮಾಡುತ್ತೇವೆ ಎಂದು ಉತ್ತರ ಕೊಟ್ಟಿದ್ದಾರೆ. ಅದು ಇಲ್ಲಿಂದ ರಿಜಿಸ್ಟ್ರಾರ್‌ಗೆ, ಅಲ್ಲಿಂದ ಡೆಪ್ಯುಟಿ ರಿಜಿಸ್ಟ್ರಾರಿಗೆ ಅಲ್ಲಿಂದ ಯಾರು ತಪ್ಪು ಮಾಡಿದ್ದಾನೆ ಅವನಿಗೆ ಹೋಗುತ್ತದೆ. ಅದರಿಂದ ಏನೂ ಪ್ರಯೋಜನವಾಗಿಲ್ಲ. ಲೆವಿ ಪ್ರೊಕ್ಯೂರ್ ಮಾಡುವುದಕ್ಕೆ ದುಡ್ಡು ಕೊಟ್ಟಿದ್ದೀರಿ. ದುಡ್ಡೂ ಇಲ್ಲ, ಭತ್ತವೂ ಇಲ್ಲ. ೧೦ ಸಾವಿರ ಇಪತ್ತು ಸಾವಿರ ಪುಕ್ಸಟೆ ಕೊಟ್ಟು ವ್ಯವಹಾರ ಮಾಡುತ್ತೀರಿ. ಅದರ ಬದಲು ಆ ದುಡ್ಡನ್ನು ಹರಿಜನ ಗಿರಿಜನರಿಗಾದರೂ ಕೊಡಿ ಉದ್ಧಾರ ಆಗಲಿ. ಅವರಾದರೂ ಉದ್ಧಾರ ಆಗಲಿ. ದುಡ್ಡು ಹೊಡೆದು ತಿಂದು ತೇಗಿ ಲೂಟಿ ಹೊಡೆಯುತ್ತಿರುವವರನ್ನು ಮೀಸಾದೊಳಗೆ ಹಾಕುವುದಕ್ಕೆ ಆಗುವುದಿಲ್ಲವೆ ? ಅದನ್ನು ಕೇಳಬಾರದೆ ? ೧೯೭೪ನೇ ಡಿಸೆಂಬರ್‌ನಲ್ಲಿ ಸರ್ಕಾರದಿಂದ ಸರ್ಕ್ಯುಲರ್ ಹೊರಡಿಸಿ ಯಾವ ರೈತನನ್ನೂ ಗೇಣಿ ಬಿಸಬೇಡಿರಿ ಎಂದು ಹೇಳಿದರು. ಯಾರಾದರೂ ಅನ್ಯಾಯ ಮಾಡಿದರೆ ಮೀಸಾದೊಳಗೆ ಅಂತಹವರನ್ನು ಹಾಕಿ ಎಂದು ಹೇಳುತ್ತೇನೆ. ಇಂತಹ ವಿಚಾರಗಳನ್ನು ಹೇಗೆ ಕೇಳುವುದು ? ಇದನ್ನೆಲ್ಲಾ ಕೇಳಿದರೆ ನಿಮಗೇನು ತೊಂದರೆ ಆಗುತ್ತದೆ. ಜನತಾ ಹೌಸಿಂಗ್ ಸ್ಕೀಂ ಏನಾಯಿತು. ಎಷ್ಟು ಮನೆ ಆಗಿದೆ, ಎಷ್ಟು ಮನೆ ಬಿದ್ದಿದೆ, ಯಾರ್ಯಾರು ಎಷ್ಟೆಷ್ಟು ದುಡ್ಡು ಹೊಡೆದಿದ್ದಾರೆ ಕೇಳ ಬೇಕೋ ಬೇಡವೊ ! ಮಾನ್ಯ ನಾಯ್ಕರ್ ಅವರ ಖಾತೆಗೆ ಸಂಬಂಧಪಟ್ಟಂತೆ ಎಷ್ಟು ಮುನಿಸಿಪಾಲಿಟಿಗಳಲ್ಲಿ

ಚುನಾವಣೆಯಾಗಿಲ್ಲ, ಎಲ್ಲಾ ಕಡೆ ಏಕೆ ಅಡ್ಮಿನಿಸ್ಟ್ರೇಟೀವ್ ಆಫೀಸರುಗಳನ್ನು ಇಟ್ಟಿದ್ದೀರಿ. ಅದನ್ನು ಕೇಳ ಬೇಕೆ ಬೇಡವೆ ? ಶ್ರೀಮಾನ್ ರಾಚಯ್ಯನವರು ಇಲ್ಲಿ ಇಲ್ಲ. ಮಾನ್ಯ ಅಧ್ಯಕ್ಷರೆ ತಮ್ಮ ಸಮ್ಮುಖದಲ್ಲೇ ಶಾಸನಸಭೆಯಲ್ಲಿ ಸಚಿವರು ಹೇಳಿದ ಮಾತಂ, ಏನೇ ಆಗಲಿ ಡಿಸೆಂಬರ್ ಒಳಗೆ ಚುನಾವಣೆ ಮಾಡ ತ್ತೇವೆ ಎಂದು ಹೇಳಿದರು. ಅದನ್ನು ಕೇಳಬೇಕೋ ಬೇಡವೊ ? ಮಾನ್ಯ ಸಿದ್ಧವೀರಪ್ಪನವರಿಗೆ ಸಂಬಂಧಪಟ್ಟಂತೆ ಆಸ್ಪತ್ರೆಗಳು ಏನಾಗಿವೆ, ಔಷದಿಗಳು ಇದೆಯೊ ಇಲ್ಲವೊ ? ಡಾಕ್ಟರು ಇಂಜಕ್ಷನ್ ಕೊಡುತ್ತಿದ್ದಾರೊ ಇಲ್ಲವೊ ? ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಕೊಡುವಾಗ ಹರಿಜನ ಗಿರಿಜನರೂ ಕೂಡ ೧೦ ಸಾವಿರ ರೂಪಾಯಿ ಕೊಡಬೇಕಂತೆ.

ಶ್ರೀ ಡಿ. ದೇವರಾಜ ಅರಸ್.—ಅವರಿಗೆ ನಾವು ಸರ್ಕಾರದವರು ಕೊಡುತ್ತೇವೆ ಎಂದು ಹೇಳಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ — ಸರಿ. ಬೇರೆಯವರಿಗೆ, ಸಿದ್ಧವೀರಪ್ಪನವರ ಬೆನ್ನು ಹಿಡಿದು ದಾವಣಗೆರೆ ಮೆಡಿಕಲ್ ಕಾಲೇಜು ಅಲ್ಲೆಲ್ಲಾ ಐದು ಸಾವಿರ ರೂಪಾಯಿ ಕೊಟ್ಟಿದ್ದರೆ ಸೀಟು ಸಿಗುತ್ತಿತ್ತು. ಈಗ ಹತ್ತು ಸಾವಿರ ರೂಪಾಯಿ ಸರ್ಕಾರದವರು ಮಾಡಿದ್ದಾರೆ. ಎಲ್ಲಿಂದ ಕೊಡುವುದು ? ಇದನ್ನು ಕೇಳ ಬೇಕೇ ಬೇಡವೆ ? ಹೆಲ್ತ್ ಯೂನಿವರ್ಸಿಟಿ ಬಗ್ಗೆ ಏನಾಯಿತು. ಹಿಂದಿನ ಅಧಿವೇಶನದಲ್ಲಿ ಅದರ ಬಗೆ ನಾವು ಸಲಹೆಗಳನ್ನೆಲ್ಲಾ ಕೊಟ್ಟೆವು. ಶನಿವಾರ ನಿರ್ಣಯ ಮಾಡಿದರು. ಸೋಮವಾರ ಪಾಸ್ ಆಗಿಬಿಡ್ತು

ಶ್ರೀ ಎಚ್. ಸಿದ್ಧವೀರಪ್ಪ.— ಅದು ಏನೂ ಆಗಿಲ್ಲ, ಗಾಬರಿ ಆಗಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ.— ತಿದ್ದುಪಡಿಯನ್ನು ಒಪ್ಪಿಕೊಂಡು ಶಾಸನ ಸಭೆಯಲ್ಲಿ ತಂದರು. ಶಾಸನ ಸಭೆಯಲ್ಲಿ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿ ಅದು ವಿಧಾನ ಪರಿಷತ್ತಿಗೆ ಹೋಗುವುದರೊಳಗೆ ನಿಂತೇಹೋಯಿತು. ಇದನ್ನು ಕೇಳೋಣ ಎಂದರೆ ಇವತ್ತು ನಮ್ಮ ಬಾಯಿ ಮುಚ್ಚಿಸಿದ್ದಾರೆ. ಯಾರು ಬಾಯಿಂದ ಹೇಳಿದರೋ ಶಾಸನವನ್ನು ಮಾಡಿದರೋ ಅಂಥ ಶ್ರೀಮಾನ್ ಸಿದ್ಧವೀರಪ್ಪನವರು ಅಲ್ಲಿ ಕೂತುಕೊಂಡು ನಮ್ಮ ಬಾಯನ್ನು ಮುಚ್ಚಿಸಿದ್ದಾರೆ

ಇನ್ನು ನಮ್ಮ ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರ ವಿಷಯ. ಮಾನ್ಯ ಅಧ್ಯಕ್ಷರೆ, ಇವತ್ತು ವಿದ್ಯಾಭ್ಯಾಸ ಖಾತೆಯನ್ನು ಮಾನ್ಯ ಮಲ್ಲಿಕಾರ್ಜುನಸ್ವಾಮಿ ಅವರು ಹೊತ್ತುಕೊಂಡಿದ್ದಾರೆ. ಅವರು ಜೂನಿಯರ್ ಕಾಲೇಜುಗಳನ್ನೆಲ್ಲಾ ಮುಚ್ಚಿಸಿದ್ದೇನೆಂದು ಹೇಳಿದರು.

ಶ್ರೀ ಡಿ. ದೇವರಾಜ ಅರಸ್.—ನಮ್ಮ ರೆಸಲ್ಯೂಷನ್‌ನ್ನು ಸಮರ್ಥನೆ ಮಾಡುವುದಕ್ಕೆ ಅರ್ಗ್ಯೂಮೆಂಟ್‌ಗಿಂತ ಬೇರೆ ಹೆಚ್ಚಿಗೆ ಏನೂ ಬೇಕೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಜೂನಿಯರ್ ಕಾಲೇಜುಗಳನ್ನೆಲ್ಲಾ ಮುಚ್ಚಿದರು. ಅವರು ಅಲ್ಲಿ ಎಲ್ಲಾ ಕೆಲಸಕಾರ್ಯಗಳನ್ನೂ ಬಿಟ್ಟು ಹೊರಗೆ ಬಂದು ಡೆಲಿಗೇಷನ್ ಕೂಡ ಬಂದರು. ಎಲ್ಲಾ ಜೂನಿಯರ್ ಕಾಲೇಜುಗಳನ್ನೂ ಮುಚ್ಚಬೇಕೆಂದು ತೀರ್ಮಾನಮಾಡಿ ಮತ್ತೆ ಅವುಗಳನ್ನೆಲ್ಲಾ ತೆರೆಯ ಬೇಕೆಂದು ಏತಕ್ಕೆ ತೀರ್ಮಾನ ಮಾಡಿದರು. ಇದನ್ನು ಕೇಳೋಣ ಎಂದರೆ ಅವರು ಬಾಯನ್ನೇ ಬಿಡು ವುದಿಲ್ಲ, ಮೂಕರಾಗಿ ಕುಳಿತಿದ್ದಾರೆ. ಕೆಲವು ಪ್ರದೇಶಗಳಿಗೆ ಇವತ್ತಿನವರೆಗೂ ಕೂಡಾ ಉಪಾಧ್ಯಾಯರೇ ಹೋಗಿಲ್ಲ. ಇವತ್ತಿನವರೆಗೂ ಕೂಡ ಪ್ರೈಮರಿ ಶಾಲೆಗಳಲ್ಲಿ ಮಕ್ಕಳ ಅಡ್ಮಿಷನ್‌ಕೂಡ ಮಾಡಿಲ್ಲ. ಅನೇಕ ಕಡೆಗಳಲ್ಲಿ ಪ್ರಾಥಮಿಕ ಶಾಲೆಗಳೇ ಇಲ್ಲ. ಇದೆಲ್ಲಾ ತಮಗೂ ಕೂಡ ಗೊತ್ತಿರಬಹುದು. ತಮ್ಮ ೨೦ ಅಂಶದ ಕಾರ್ಯಕ್ರಮದ ಉದ್ದೇಶವಾದರೂ ಏನು. ಮಕ್ಕಳಿಗೆ ರುಜುಹಾಕುವ ಅಕ್ಷರವನ್ನಾದರೂ ಕಲಿಸುತ್ತಿದ್ದಾರೆಯೇ ಕೇಳೋಣ ಎಂದರೆ ಅದೂ ಇಲ್ಲ. ಈ ಶಾಸನ ಸಭೆಗೆ ಆಲೋಚನೆ ಎಂಬುದೇ ಇಲ್ಲ. ಮಾನ್ಯ ಸಂಸದೀಯ ಸಚಿವರು ಪರದೇಶಕ್ಕೆ ಹೋಗಿ ಬಂದರು. ಆದರೆ ಅವರನ್ನು ಸರ್ಕಾರದವರೇ ಕಳು ಹಿಸಿದ್ದರೋ ಅಥವಾ ಅವರೇ ಸ್ವಂತವಾಗಿ ಹೋಗಿದ್ದರೋ ಎಂಬುದು ಗೊತ್ತಿಲ್ಲ. ಆದರೆ ಅವರು ಏತಕ್ಕೆ ಪರದೇಶಕ್ಕೆ ಹೋಗಿದ್ದರೋ ಎಂಬುದನು ಕೇಳೋಣ ಎಂದರೆ ಅದಕ್ಕೆ ಅವಕಾಶ ಇಲ್ಲ. ಈ ತುರ್ತು ಪರಿಸ್ಥಿತಿ ಬರುವುದಕ್ಕೆ ಮೊದಲು ಕಬ್ಬಿಣದ ಬೆಲೆ ಬಹಳ ಕಡಿಮೆ ಇತ್ತು. ಆದರೆ ಇವತ್ತು ಒಂದು ಟನ್ನಿಗೆ ೮೦ ರೂಪಾಯಿಯನ್ನು ಜಾಸ್ತಿ ಮಾಡಿದರು. ಇದು ಒಂದಾಯಿತು. ಇನ್ನು ಈ ತುರ್ತು ಪರಿಸ್ಥಿತಿಯಲ್ಲಿ ಬೆಲೆಗಳು ಇಳಿಯುತ್ತಿವೆ ಎಂದು ರೇಡಿಯೋನಲ್ಲಿ ಮಾತ್ರ ಹೇಳುತ್ತಿದ್ದಾರೆ. ಆದರೆ ಬೆಲೆಗಳು ಮಾತ್ರ ಜಾಸ್ತಿಯಾಗುತ್ತಲೇ ಇವೆ. ಇದು ಏತಕ್ಕೆ ಜಾಸ್ತಿಯಾಗುತ್ತಿದೆ ಎಂದು ಕೇಳೋಣವೆಂದರೆ ನಾವು ಪ್ರಶ್ನೆ ಯನ್ನೇ ಕೇಳುವಂತಿಲ್ಲ. ಕಾಲಿಂಗ್ ಅಟೆನ್‌ಷನ್ ಕೇಳುವಂತಿಲ್ಲ.

ಇನ್ನು ಕೈಗಾರಿಕಾ ಕ್ಷೇತ್ರದಲ್ಲಿ ಸಣ್ಣ ಕೈಗಾರಿಕೆಗಳನ್ನು ಜಾಸ್ತಿಮಾಡುತ್ತಿದ್ದೇವೆ, ಇದಕ್ಕಾಗಿ ಕೆಲವು ಜಿಲ್ಲೆಗಳನ್ನು ತೆಗೆದುಕೊಂಡಿದ್ದೇವೆಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಚಾರ ನಡೆದದ್ದೂ ನಡೆದಿದ್ದೆ. ಎಷ್ಟು ಜಿಲ್ಲೆಗಳಲ್ಲಿ ಹೊಸದಾಗಿ ಈ ಕೈಗಾರಿಕೆಗಳನ್ನು ಪ್ರಾರಂಭ ಮಾಡಿದ್ದಾರೆ. ಅದಕ್ಕಾಗಿ ಎಷ್ಟು ಹಣವನ್ನು ಖರ್ಚುಮಾಡಿದ್ದಾರೆಂದು ಕೇಳೋಣ ಎಂದರೆ ಈ ಒಂದು ಹೊಸ ನಿರ್ಣಯವನ್ನು ಮಂಡಿಸಿ ಸಂಬಿವಾಗಿ

ಕುಳಿತುಕೊಂಡರು. ಇವತ್ತು ಏನಾಗಿದೆ ಎಂದರೆ ಇವರು ನಮ್ಮ ಬಾಯನ್ನು ಮುಚ್ಚಿಸಿರುವುದಷ್ಟೇ ಅಲ್ಲ ಪತ್ರಿಕಾಕರ್ತರ ಬಾಯನ್ನೂ ಕೂಡ ಮುಚ್ಚಿದ್ದಾರೆ. ಇಲ್ಲಿ ಪತ್ರಿಕೆಯವರೂ ಬಂದು ಕುಳಿತಿದ್ದಾರೆ, ಅವರು ಇಲ್ಲಿಯ ಕಾರ್ಯಕಲಾಪಗಳನ್ನು ಬರೆದುಕೊಳ್ಳುತ್ತಾರೆ. ಆದರೆ ಪಾಪ ಅವರು ಅದನ್ನು ಅಚ್ಚು ಹಾಕುವುದಕ್ಕೆ ಸಾಧ್ಯವಿಲ್ಲವಾದಂತಾಗಿದೆ, ಇಂಥ ಒಂದು ನಿರರ್ಥಕವಾದ ವ್ಯವಸ್ಥೆ ಇದಾಗಿದೆ. ಆದುದರಿಂದ, ಇವತ್ತು ಹೆಚ್ಚಿನ ವಿಚಾರ ಇದೆ. ಒಂದನೆಯದು ಪತ್ರಿಕೆಯವರು ಇದನ್ನು ಅಚ್ಚು ಹಾಕಬಾರದು. ಎರಡನೆಯದು ರೇಡಿಯೋದಲ್ಲಿ ಏನೂ ಹೇಳಬಾರದು. ಮೂರನೆಯದು ಇಂಥ ಕಾರ್ಯಕಲಾಪಗಳನ್ನು ಮಾಡುವುದನ್ನೂ ಕೂಡ ನಿಲ್ಲಿಸುವುದು. ಈ ಸಂಸತ್ತಿನ ವ್ಯವಹಾರಗಳನ್ನು ಮೊಟಕು ಮಾಡುವಂತಹ ಕ್ರಮಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇವತ್ತಿನ ದಿವಸ ಮಾಡುತ್ತಿವೆಯೆಂದು ಹೇಳಬೇಕಾಗಿದೆ. ಇವತ್ತು ಯಾವುದೋ ರಾಜಕೀಯಕ್ಕೋಸ್ಕರ ಎಲ್ಲರನ್ನೂ ತಪ್ಪುದಾರಿಗೆಳೆಯುವಂತಹ ಪ್ರಯತ್ನ ನಡೆಯುತ್ತಿದೆ. ಇದಕ್ಕೆ ತಾವು ದಯಮಾಡಿ ಅವಕಾಶವನ್ನು ಮಾಡಿಕೊಡಬೇಡಿ. ನೀವು ೨೦ ಅಂಶದ ಕಾರ್ಯಕ್ರಮವಲ್ಲ ಅದರ ಮೇಲೆ ಇನ್ನೂ ೨೦ ಅಂದರೆ ೪೦ ಅಂಶದ ಕಾರ್ಯಕ್ರಮವನ್ನೂ ಹಾಕಿಕೊಂಡು ಜಾರಿಗೆ ತನ್ನಿ. ಆಗ ನಾನು ಅಡ್ಡಬಂದರೆ ನನ್ನನ್ನು ಜೈಲಿಗೆ ಹಾಕಿ. ಇದು ಶೀಘ್ರಗತಿಯಿಂದಾಗಬೇಕಾದ ಟೈಂಬೌಂಡ್ ಪ್ರೋಗ್ರಾಂ ಆಗಬೇಕು. ಹಿಂದೆ ಡಾಕ್ಟರ್ ಲೋಹಿಯಾರವರು ಹೇಳುತ್ತಿದ್ದರು. ಏನೆಂದರೆ ಯಾವಾಗಲೂ ಒಂದು ಟೈಂಬೌಂಡ್ ಪ್ರೋಗ್ರಾಂ ಇರಬೇಕೆಂದು. ನಿವೇಶನ ಹಂಚುವ ಕಾರ್ಯಕ್ರಮವನ್ನು ೩ ತಿಂಗಳಲ್ಲಿ ಮಾಡಬೇಕು. ಜಮೀನನ್ನು ಹಂಚುವ ಕಾರ್ಯಕ್ರಮ ೬ ತಿಂಗಳಲ್ಲಿ ಮಾಡಬೇಕು, ಭೂಮಿ ಹಂಚಿಕೆ ಕಾರ್ಯಕ್ರಮ ೧ ವರ್ಷದಲ್ಲಿ ಮಾಡಬೇಕು ಎಂದು ಕಾರ್ಯಕ್ರಮ ಇಟ್ಟುಕೊಂಡಿದ್ದರೆ ಅದನ್ನಾದರೂ ಒಪ್ಪಿಕೊಳ್ಳುತ್ತಿದ್ದೆ. ಇಲ್ಲಿ ಅದನ್ನು ಚರ್ಚೆಮಾಡುತ್ತಾ ಕುಳಿತರೆ ಅಲ್ಲಿ ಜನರಿಗೆ ಭೂಮಿಯನ್ನು ಹಂಚಬೇಕು, ನೌಕರಿ ಕೊಡಿಸಬೇಕು, ಸೈಟು ಹಂಚಬೇಕು. ನಾವು ಇಲ್ಲಿ ಅಸೆಂಬ್ಲಿಯಲ್ಲಿ ಕೂತರೆ ಕೆಲಸ ಕೆಟ್ಟುಹೋಗುತ್ತದೆ ಎನ್ನುವ ಅಭಿಪ್ರಾಯ ಇದ್ದರೆ ನೀವು ಹೇಳುವುದು ಸರಿಯಲ್ಲ. ಇವತ್ತಿನ ದಿವಸ ಮಂತ್ರಿಗಳ ಕೆಲಸ ಏನೆಂದರೆ ಅವರವರ ಖಾತೆಗೆ ಸಂಬಂಧಪಟ್ಟಂತೆ ಗುದ್ದಲಿ ಪೂಜೆಮಾಡುವುದು, ಗಣಪತಿ ಉತ್ಸವಕ್ಕೆ ಹೋಗುವುದು ಇಂಥಾದ್ದನ್ನು ಬಿಟ್ಟರೆ ಇತರೆ ಅಂದರೆ ತಮ್ಮ ಖಾತೆಗೆ ಸಂಬಂಧಪಟ್ಟ ಕಛೇರಿಗೆ ಹೋಗಿ ನೋಡುವುದಾಗಲಿ, ಮತ್ತೊಂದಾಗಲಿ ಇಲ್ಲ. ಉದಾಹರಣೆಗೆ ಹೇಳುವುದಾದರೆ ಮಾನ್ಯ ನಾಯ್ಕರ್‌ರವರು ಎಷ್ಟು ಮುನಿಸಿಪಾಲಿಟಿಗಳಿಗೆ ಹೋಗಿ ನೋಡಿದ್ದಾರೋ ಗೊತ್ತಿಲ್ಲ. ಮಾನ್ಯ ಸಿದ್ದವೀರಪ್ಪನವರು ಎಷ್ಟು ಆಸ್ಪತ್ರೆಗಳನ್ನು ಹೋಗಿ ನೋಡಿದ್ದಾರೋ ಗೊತ್ತಿಲ್ಲ. ಅದೇರೀತಿ ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ಎಷ್ಟು ಕಾಲೇಜುಗಳಿಗೆ ಹೋಗಿ ನೋಡಿದ್ದಾರೋ ಗೊತ್ತಿಲ್ಲ. ಮಾನ್ಯ ಫೋರ್ಪಡೆಯವರೂ ಕೂಡ ಎಲ್ಲೆಲ್ಲಿ ಎಷ್ಟೆಷ್ಟು ಹಣ ದುರುಪಯೋಗವಾಗಿದೆ ಎಂಬುದನ್ನು ನೋಡಿದ್ದಾರೋ ನನಗಂತೂ ಗೊತ್ತಿಲ್ಲ. ಅವರ ಪಕ್ಷದವರೇ ಆಪಾದನೆಗಳ ಪಟ್ಟಿಯನ್ನು ಮಾನ್ಯ ರಾಜ್ಯಪಾಲರವರಿಗೆ ಸಲ್ಲಿಸಿ ಇದರ ಬಗ್ಗೆ ತನಿಖೆ ಮಾಡಬೇಕೆಂದು ಹೇಳಿ ಬಂದರು ಎಂದು ಪತ್ರಿಕೆಯಲ್ಲಿ ಓದಿದ್ದೇನೆ. ನಾವಂತೂ ವಿರೋಧ ಪಕ್ಷದವರು, ಬಾಯಿ ಹೊಡೆದುಕೊಂಡು ನಮಗೆ ಅಭ್ಯಾಸವಾಗಿ ಹೋಗಿದೆ. ಅವರು ಮಂತ್ರಿಯಾಗಿದ್ದವರು ಮಂತ್ರಿ ಪದವಿಯನ್ನು ಕಳೆದುಕೊಂಡರು, ಹೋಗಲಿ ಕಾಂಗ್ರೆಸ್ ಪಕ್ಷದಲ್ಲಾದರೂ ಸೇರಿಕೊಂಡರೆ ಯಾವುದಾದರೂ ಪದವಿಯಲ್ಲಾದರೂ ಇರಬಹುದೆಂದು...

ಶ್ರೀ ಬಿ. ಪುಟ್ಟಸ್ವಾಮಯ್ಯ.—ಹಳ್ಳಿಯಲ್ಲಿ ಏನಾದರೂ ಆದರೆ ಆಯಿತು ಆದರೆ ಯಂತ್ರ, ಮಂತ್ರ ಮಾಡಿ ಸಿದ್ಧಿ ಮಾಡಿ ಮೂರು ದಾರಿ ಸೇರುವ ಕಡೆಯಲ್ಲಿ ಹಾಕಿದರೆ ಅದು ಶಾಂತಿಯಾಗುತ್ತದೆಂಬ ನಂಬಿಕೆ ಇದೆ, ನೀವೂ ಈ ಮೂರನ್ನೂ ಮೂರು ದಾರಿಯಲ್ಲಿ ಬಿಟ್ಟಿದ್ದೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಅವರ ಸಿದ್ಧಿಯಾಗಿದೆ. ತುರ್ತು ಪರಿಸ್ಥಿತಿ ಬರುವುದಕ್ಕೆ ಮುಂಚೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಭಾಷಣ ೪-೪ ಪುಟಗಳಲ್ಲಿ ಬರುತ್ತಿತ್ತು. ಅದು ಎಲ್ಲರಿಗೆ ಬಹಳ ಸ್ವಾರಸ್ಯವಾಗಿರುತ್ತಿತ್ತು. ಇವತ್ತು ನಿಮ್ಮ ಎಲ್ಲರ ಪುಂಗಿಯೂ ಬಂದ್ ಆಗಿದೆ. ಇವತ್ತಿನ ದಿವಸ ಹೆಚ್ಚುಕಡಿಮೆ ಎಲ್ಲರ ಪುಂಗಿಯೂ ಬಂದಾಗಿ ಹೋಗಿದೆ. ಅದು ನಮಗೆ ಎಂದು ತಿಳಿದುಕೊಳ್ಳಬೇಡಿ, ನಿಮಗೂ ಆಗಿದೆ. ಶ್ರೀಮಾನ್ ಶ್ರೀರಾಮುಲುರವರು ಸುಮ್ಮನೆ ಕೂತಿರುತ್ತಾರೆ. ಯಾರೋ ಕನ್ನಡ ಸಂಘದವರು ಚರಂಡಿ ಮೇಲೆ ಮನೆ ಕಟ್ಟುವುದಕ್ಕೆ ಹೊರಟಿದ್ದಾರೆ ಎಂದು ಹೇಳಬೇಕಾಗಿತ್ತು. ಆದ್ದರಿಂದ ಸ್ವಲ್ಪ ದೃಷ್ಟಿಕೋನವನ್ನು ಬದಲಾಯಿಸಿಕೊಂಡು ವಿಚಾರಮಾಡಬೇಕು. ನಮಗೆ ಇರತಕ್ಕಂತಹ ಮಾಮೂಲು ಕರ್ತವ್ಯಗಳನ್ನು ಮಾಡುವುದರಿಂದ ಅಂತಹ ಅನಾಹುತ ಏನೂ ಆಗುವುದಿಲ್ಲ. ಇವತ್ತು ಒಂದು ಪ್ರಶ್ನೆ ಕೇಳಿದರೆ ಏನು ಅನಾಹುತ ಆಗುತ್ತಾ ಇರುತ್ತಿರಲಿಲ್ಲ. ಆದುದರಿಂದ ತಾವು ತಮ್ಮ ಆತ್ಮವನ್ನು ಪುನರ್‌ಪರಿಶೀಲನೆಮಾಡಿ, ಆತ್ಮ ಶೋಧನೆ ಮಾಡಿಕೊಳ್ಳಿ. ವಿರೋಧ ಪಕ್ಷದವರ ಆರೋಗ್ಯ ಮತ್ತು ಆತ್ಮ ಎಂದು ತಿಳಿದುಕೊಳ್ಳಬೇಡಿ, ನಿಮ್ಮಗಳ ಆರೋಗ್ಯ ಮತ್ತು ಆತ್ಮವನ್ನು ಪರಿಶೋಧನೆಮಾಡಿ ನಾವು ಮಾಡತಕ್ಕ ಕೆಲಸ ಸಾಧುವೇ ಎಂಬುದನ್ನು ವಿಚಾರ ಮಾಡಿದರೆ ಖಂಡಿತವಾಗಿಯೂ ನಮ್ಮ ಅಧ್ಯಕ್ಷರು ಎಲ್ಲರಿಗೂ ರಕ್ಷಣೆ ನೀಡುತ್ತಾರೆಂದು ನಾನು ಭಾವಿಸುತ್ತೇನೆ. ಆದರೆ ನಮಗೆ ಬಹುಮಾತ ಇದೆ,

ಬಹುಮತದಿಂದ ಸ್ವೀಕಾರ ಮಾಡುತ್ತೇವೆ ಎನ್ನುವ ಧೈರ್ಯ ಇದೆ. ವಿರೋಧವಾಗಿ ಮಾತನಾಡಿದವರ ಮೀಸಾ ಪ್ರಕಾರ ಒಳಗೆ ಹಾಕುತ್ತಾರೆ. ಅಲ್ಲಿ ಚಂದ್ರಶೇಖರ್‌ರವರಿಗೆ ಆ ರೀತಿಯಾಯಿತು. ಮಾನ್ಯ ಕೃಷ್ಣರವರು ಅವರು ಒಟ್ಟಿಗೆ ಕೂತುಕೊಂಡು ಎಷ್ಟು ದಿವಸ ಚರ್ಚೆಮಾಡಿದರೋ, ಅವರನ್ನು ನೋಡು ವುದಕ್ಕೆ ಇವತ್ತು ಇವರು ಹೋದರೆ, ಇವರನ್ನು ಒಳಗೆ ಹಾಕುತ್ತಾರೆ. ಹಳೇ ಸ್ನೇಹಿತರನ್ನು ಒಳಗೆ ಕಳುಹಿಸಿ ನೀವು ಸಂತೋಷ ಪಡುತ್ತೀರಾ ? ನನಗೆ ಗೊತ್ತಾಗುತ್ತಾ ಇಲ್ಲ. ನಿಮಗೆ ಹೃದಯ ಇದ್ದರೆ, ಸ್ನೇಹಿತ ಮತ್ತು ಸಂಬಂಧ ಎಂದು ಇದ್ದರೆ ನೀವು ಇನ್ನೊಂದು ಸಾರಿ ಪುನರ್ ವಿಚಾರಮಾಡಿ. ನಿಮ್ಮ ಯಜಮಾನರಿಗೆ ನೀವು ಏನು ಎನ್ನುವುದು ಗೊತ್ತಿದೆ. ನೀವು ಹುಷಾರಾಗಿ ಇರಬೇಕು, ಅವರು ಏನೋ ಹೇಳುವುದಕ್ಕೆ ಹೋಗಿ ಅನಾವಶ್ಯಕವಾಗಿ ಜೈಲಿನಲ್ಲಿ ಇರಬೇಕಾದ ಪರಿಸ್ಥಿತಿ ಬಂತು. ಒಂದು ಕಾಲದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು, ಪ್ರಧಾನಮಂತ್ರಿಯವರು ಸಮಾಜವಾದ ಸಂಕೇತ ಎನ್ನುವ ಡಣ ಡಂಗೂರ ಭಾರಿಸಿ, ಈ ದೇಶದಲ್ಲಿ ಅವರನ್ನು ಮೇರು ಪರ್ವತಕ್ಕೆ ಏರಿಸಿದರು ಅವರಿಗೆ ಇವತ್ತು are kept behind the bars. ದಿವಂಗತ ಲೋಹಿಯಾರವರು ಪ್ರಧಾನ ಮಂತ್ರಿಯವರನ್ನು ಕುರಿತು ಒಂದು ಮಾತು ಹೇಳಿದರು. "ಅಕಾಲ ಚಂಡಿಕಾ ಚಿನ್ನಮಸ್ತಕ ರಕ್ತ ಪಿಪಾಸಿಣಿ" ಎಂದು, ಈ ಪದ ಶಾಶ್ವತವಾಗಿ ಇರುತ್ತದೆ. ಆದ್ದರಿಂದ ಮೇರು ಪರ್ವತಕ್ಕೆ ಹೋಗಿದೆ. ಆದ್ದರಿಂದ ಇವನ್ನೆಲ್ಲಾ ಸ್ವಲ್ಪ ನೋಡಿಕೊಂಡು ಹುಷಾರಾಗಿ ಇಂಥ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂದಾಗಬೇಕು, ಇಲ್ಲವೇ ಹೋದರೆ ಮುಂಬರುವ ಅಪಾಯವನ್ನು ನಾವೆಲ್ಲರೂ ಸೇರಿ ನಮ್ಮ ತಲೆಮೇಲೆ ಕೆಡವಿಕೊಂಡಂತೆ ಆಗುತ್ತದೆ. ಆದ್ದರಿಂದ ರಕ್ಷಣೆ ಕೇಳುವವರ ಜೊತೆಗೆ, ಸಂಸದೀಯ ಸಚಿವರನ್ನು ಮತ್ತು ಕಾಂಗ್ರೆಸ್ ಸ್ನೇಹಿತರನ್ನು ಕೇಳುತ್ತೇನೆ ದಯವಿಟ್ಟು ಇಂಥ ನಿರ್ಣಯಗಳನ್ನು ತಂದು ಪವಿತ್ರವಾದ ಈ ಸದನದ ಹಕ್ಕುಬಾಧ್ಯತೆ ಗಳನ್ನು ಮೊಟಕು ಮಾಡುವುದಕ್ಕೆ ದಯವಿಟ್ಟು ಪ್ರಯತ್ನ ಪಡಬೇಡಿ. ಒಂದುವೇಳೆ ನಮಗೆ ಬಹುಮತ ಇದೆ, ನಾವು ಯಶಸ್ವಿಯಾಗುತ್ತೇವೆಂದು ಮಾಡಿದರೆ, ಅದರಿಂದ ಆಗತಕ್ಕ ದುಷ್ಪರಿಣಾಮವನ್ನು ಎದುರಿಸ ಬೇಕಾಗುತ್ತದೆ. ತಮಗೆ ವಿವೇಕ ಇದೆ ಎಂದು ತಿಳಿದುಕೊಂಡಿದ್ದೇನೆ, ನಪುಂಸಕತ್ವವೇ ಇದೆ ಎಂದರೆ ನಾವು ಅದಕ್ಕೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನೀವೆಲ್ಲಾ ಪ್ರಜ್ಞರೂ ವಿಚಾರ ಮಾಡುವುದಕ್ಕೆ ಸಮರ್ಥರೂ ಮತ್ತು ಪ್ರಜಾ ತಂತ್ರವನ್ನು ಎತ್ತಿ ಹಿಡಿಯುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಾರೆ ಎನ್ನತಕ್ಕ ಭಾವನೆಯನ್ನು ಇಟ್ಟುಕೊಂಡಿದ್ದೇನೆ. ಒಂದುವೇಳೆ ನೀವು ಆತ್ಮಕ್ಕೆ ವಿರೋಧ ವಾಗಿ, ನಿರ್ಣಯದ ಪರವಾಗಿ ಮತವನ್ನು ನೀಡಿದರೆ, ನಿಮ್ಮ ಕೈಯಿಂದ ಪ್ರಜಾಪ್ರಭುತ್ವದ ಹತ್ಯೆ ನಡೆಯುತ್ತಿದೆ ಎಂದು ನಾವು ತೀರ್ಮಾನ ಮಾಡುತ್ತೇವೆ ಈ ರೀತಿ ತೀರ್ಮಾನ ಮಾಡುವುದರ ಮುಖೇನ ನಮ್ಮ ರಕ್ಷಣೆಯನ್ನು ಕೇಳಿ, ಈ ನಿರ್ಣಯವನ್ನು ವಿರೋಧಿಸಿ, ಇಷ್ಟು ಮಾತನ್ನು ಹೇಳು ವುದಕ್ಕೆ ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನು ಮುಗಿಸುತ್ತೇನೆ.

† ಶ್ರೀ ಹೆಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ಸಚಿವರು ತಂದಿರತಕ್ಕ ನಿರ್ಣಯವನ್ನು ತೀವ್ರವಾಗಿ ವಿರೋಧಿಸಿ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಅಥವಾ ಅದಕ್ಕೆ ಪೂರ್ವದಲ್ಲಿ ರಾಷ್ಟ್ರದಲ್ಲಿ ಕಾಣ ತಕ್ಕ ಮತ್ತು ರಾಜ್ಯದಲ್ಲಿ ಕಾಣತಕ್ಕ ಒಂದು ಪರಿಸ್ಥಿತಿ ಎಂದೂ ಸಂಭವಿಸಿ ಇರಲಿಲ್ಲ. ಯಾರೂ ಸಹ ಆ ವಿಚಾರದಲ್ಲಿ ಬೇರೆ ಅಭಿಪ್ರಾಯವನ್ನು ತಾಳುವುದಕ್ಕೆ ಸಾಧ್ಯವಿಲ್ಲ ಎಂದು ಅಂದುಕೊಂಡಿದ್ದೇವೆ. ಸಾಮಾನ್ಯ ವಾಗಿ ನಮಗೆಲ್ಲರಿಗೂ ಗೊತ್ತಿರುವ ವಿಚಾರ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಕೂಡ, ಮೈಸೂರು ರಾಜ್ಯದಲ್ಲಿ ಪ್ರಜಾ ಪ್ರತಿನಿಧಿಗಳ ಸಭೆ ಎನ್ನತಕ್ಕ ಸಭೆ ಇತ್ತು, ಆಗಲೂ ಕೂಡ ಸರ್ಕಾರದ ಕಾರ್ಯಕಲಾಪಗಳಲ್ಲಿ ಸಾರ್ವಜನಿಕ ವ್ಯವಹಾರಗಳಿಗೆ ಸಂಬಂಧಪಟ್ಟಹಾಗೆ ಪ್ರಶ್ನಾವಳಿಗಳನ್ನು ಕೇಳಿ, ಸರ್ಕಾರದಿಂದ ವಿವರಗಳನ್ನು ಪಡೆಯತಕ್ಕಂಥ ಮತ್ತು ರಚನಾತ್ಮಕ ಸಲಹೆಗಳನ್ನು ಕೊಡತಕ್ಕಂಥಾದ್ದು ನಡೆದಿತ್ತು. ಆಗಿನ ಪರಿಸ್ಥಿತಿಗೆ ಹೋಲಿಸಿಕೊಂಡರೆ, ಬಹುಶಃ ನಾವೆಲ್ಲರೂ ವಿಚಾರವಂತರೂ ಅನ್ನಿಸಿ ಕೊಂಡಿರತಕ್ಕ ಜನ, ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಇಟ್ಟುಕೊಂಡಿರತಕ್ಕಂಥ ಜನ, ತಲೆತಗ್ಗಿಸಬೇಕಾದ ಪರಿಸ್ಥಿತಿ ರಾಷ್ಟ್ರದಲ್ಲಿ ಇವತ್ತು ಇದೆ. ಅಥವಾ ಬೇರೆ ರಾಜ್ಯದ ಅಧೀನದಲ್ಲಿ ಅವರನ್ನು ಒಂದು ಅಂಕಿತದಲ್ಲಿ ಇಟ್ಟುಕೊಂಡು ಕೇವಲ ಗುಲಾಮರಂತೆ ಇವತ್ತು ಇರಬೇಕಾದರೆ, ನಮಗೆ ನಾವೇ ಪ್ರಶ್ನೆ ಹಾಕಿಕೊಳ್ಳ ಬೇಕಾದ ಪರಿಸ್ಥಿತಿ ಬಂದಿದೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಿದರೆ, ತಾವು ಯಾರೂ ಅನ್ಯಾತಾ ಭಾವಿಸಬಾರದು. ಕೌರವರ ಆಸ್ಥಾನದಲ್ಲಿ ದ್ರೌಪದಿಯು ಮಾನಭಂಗವಾದಂತೆ, ಪ್ರಜಾಪ್ರಭುತ್ವದಲ್ಲಿ ಅತ್ಯಾಚಾರ ನಡೆಯುತ್ತದೆ ಇದು ಉತ್ಪ್ರೇಕ್ಷೆ ಮಾತು ಎಂದು ಯಾರು ತಿಳಿದುಕೊಳ್ಳಬಾರದು. ಜನಗಳ ಪ್ರತಿನಿಧಿಗಳಾಗಿ ಬಂದಿರತಕ್ಕ ನಾವುಗಳ ಜನತೆಯ ಪರವಾಗಿ ಪ್ರಾಮಾಣಿಕವಾದ ರೀತಿಯಲ್ಲಿ ಕೆಲಸಮಾಡಬೇಕು. ಇಲ್ಲದೆ ಹೋದರೆ, ಪ್ರಜಾಪ್ರಭುತ್ವದ ಮೇಲೆ ವಿಚಾರವಂತರು ಮಾಡುವ ಅತ್ಯಾ ಚಾರ ಎಂದು ಜನ ತಿಳಿದುಕೊಳ್ಳುತ್ತಾರೆ. ನಮ್ಮ ಹಕ್ಕುಗಳನ್ನು ಮೊಟಕು ಮಾಡುವಂತ ಪ್ರಯತ್ನ ಮಾಡಬೇಡಿ. ಮಾನ್ಯ ದೇವೇಗೌಡರು ಒಂದು ಮಾತನ್ನು ಹೇಳಿದರು, ಸರ್ಕಾರದವರು ಜನತೆಯ,

ಪರವಾಗಿ ಯಾವುದೇ ವಿಧವಾದ ಒಳ್ಳೆಯ ಕಾರ್ಯಕ್ರಮಗಳನ್ನು ಈ ಸಭೆಯ ಮುಂದೆ ಇಟ್ಟರೂ ಸಹ ನಾವು ಚಾಚೂ ತಪ್ಪದೇ ಒಪ್ಪಿಕೊಳ್ಳುತ್ತೇವೆ. ಅದೇ ಕಾಲದಲ್ಲಿ ಸರ್ಕಾರದ ಕಾರ್ಯಕಲಾಪಗಳು ಈ ತುರ್ತು ಪರಿಸ್ಥಿತಿಯಲ್ಲಿ ಯಾವ ವಿಧವಾದಂತ ಹೊಂದಾಣಿಕೆಯನ್ನು ಇಟ್ಟುಕೊಳ್ಳದೇ ಇರತಕ್ಕಂಥ ಕಾರ್ಯಕ್ರಮಗಳು ನಮ್ಮ ಪಟ್ಟಿಯಲ್ಲಿ ಇದೆ. ಈ ತುರ್ತು ಪರಿಸ್ಥಿತಿಗೆ ಸಂಬಂಧಪಟ್ಟಂಥ ಕಾರ್ಯಕ್ರಮಗಳು ಅಂದರೆ ಪ್ರಧಾನ ಮಂತ್ರಿಯವರು ೨೦ ಅಂಶಗಳ ಕಾರ್ಯಕ್ರಮಗಳನ್ನು ಏನು ಹೇಳಿದ್ದಾರೆ. ಆ ಕಾರ್ಯಕ್ರಮಗಳನ್ನು ಜಾರಿಗೆ ಕೊಡುವ ವಿಚಾರದಲ್ಲಿ ನಮ್ಮ ವಿರೋಧ ಏನೂ ಇಲ್ಲ. ಅದಕ್ಕೆ ಬದಲಾಗಿ ನಾವು ಪೂರ್ಣ ಮನಸ್ಸಿನಿಂದ ಅದನು ಸ್ವಾಗತಿಸುತ್ತೇವೆ. ನಿಮ್ಮ ಜೊತೆಯಲ್ಲಿ ಸಹಕರಿಸುತ್ತೇವೆ ಎಂಬತಕ್ಕಂಥ ಮಾತನ್ನು ಹೇಳಿದರು. ನಾನು ಅದನ್ನೇ ಪುನರುಚ್ಚಾರ ಮಾಡುತ್ತೇನೆ. ನಮ್ಮ ದೇಶದಲ್ಲಿ ಬಡತನವನ್ನು ತೊಲಗಿಸುವುದಾದರೆ, ಭ್ರಷ್ಟಾಚಾರವನ್ನು ತೊಲಗಿಸುವುದ ದರೆ ಕಳ್ಳಸಾಗಾಣಿಕದಾರರು ಮತ್ತು ಕಪ್ಪು ಹಣವನ್ನು ಸಂಗ್ರಹಿಸಿರತಕ್ಕಂಥವರು ಸಮಾಜ ದ್ರೋಹಿಗಳೆಂದು ನೀವು ಯಾರನ್ನು ಪರಿಗಣಿಸಿ ಅವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುವುದಾದರೆ ನಾವು ಖಂಡಿತವಾಗಿ ವಿರೋಧ ಮಾಡುವುದಿಲ್ಲ. ನಿಮ್ಮ ಪಕ್ಷದ ಬೆಂಬಲವನ್ನು ಪಡೆದಿರಲಿ, ನಮ್ಮ ಪಕ್ಷದ ಬೆಂಬಲವನ್ನು ಪಡೆದಿರಲಿ ಯಾವ ಉಗ್ರವಾದ ಕಾರ್ಯಕ್ರಮಕ್ರಮವನ್ನೂ ಅವರಮೇಲೆ ತೆಗೆದುಕೊಂಡರೂ ಸಹ ನಾವು ಅದಕ್ಕೆ ಅಡ್ಡಿ ಬರುವುದಿಲ್ಲ. ಈ ಕಾರ್ಯಕ್ರಮಗಳನ್ನು ಜಾರಿಗೆ ಕೊಡುವಂಥ ಕಾಲದಲ್ಲಿ ಬಾದಿರುವ ಅಡ್ಡಿ ಆತಂಕಗಳು ಏನು ಎಂಬುದನ್ನು ಹೇಳಬೇಕು. ನಾನು ಧೈರ್ಯವಾಗಿ ಹೇಳುತ್ತೇನೆ ಯಾವ ವಿರೋಧ ಪಕ್ಷದ ನಾಯಕರೇ ಆಗಲಿ ಯಾರೇ ಆಗಲಿ ಅಂತಹ ಕೆಲಸಗಳನ್ನು ಮಾಡುವುದಕ್ಕೆ ಹೋಗಲಿಲ್ಲ ಅಂತಹ ಕೆಲಸ ಕಾರ್ಯಗಳನ್ನ ಮಾಡುವುದಕ್ಕೆ, ಸರ್ಕಾರದ ಪ್ರಗತಿಪರ ನೀತಿಯನ್ನು ವಿರೋಧಿಸುತ್ತೇವೆ ಎನ್ನತಕ್ಕ ಮಾತು ರಾಜ್ಯದ ಯಾವ ಮೂಲೆಯಲ್ಲೂ ಬಂದಿಲ್ಲ. ಈವತ್ತಿನ ದಿವಸ ಮೀಸಾ ಆದಾರದಮೇಲೆ ಅನೇಕ ರಾಷ್ಟ್ರ ನಾಯಕರನ್ನು ಜೈಲಿನಲ್ಲಿ ಇಟ್ಟಿದ್ದಾರೆ. ಅವರು ಮಾಡಿರತಕ್ಕ ಕಾರ್ಯಕ್ಕೂ ತುರ್ತುಪರಿಸ್ಥಿತಿಗೂ ಏನು ಸಂಬಂಧ ಇದೆ. ಇದಕ್ಕೆ ಕಾರಣವಾದರೂ ಏನು ? ಅವರು ಈ ರಾಷ್ಟ್ರವನ್ನು ಪ್ರಗತಿ ಪಥದಲ್ಲಿ ತೆಗೆದುಕೊಂಡು ಹೋಗಬೇಕು, ಈ ರಾಷ್ಟ್ರವನ್ನು ಬೆಳೆಸಬೇಕು, ಎಲ್ಲರೂ ಸ್ವತಂತ್ರವಾಗಿ ಸಂತೋಷದಿಂದ ಬಾಳಬೇಕು ಎಂಬುದಕ್ಕೆ ಶ್ರಮಿಸಿರತಕ್ಕ ಜನ ಅಲ್ಲವೇ ಎಂಬುದನ್ನು ನಿಮ್ಮ ಮನಸ್ಸಿಗೆ ಪ್ರಶ್ನೆಹಾಕಿಕೊಂಡು ಉತ್ತರವನ್ನು ಪಡೆಯಬೇಕು. ಮಾನ್ಯ ಅಧ್ಯಕ್ಷರೇ, ಈ ಒಂದು ತುರ್ತು ಪರಿಸ್ಥಿತಿ ಏತಕ್ಕೆ ಬಂತು ? ಈ ತುರ್ತು ಪರಿಸ್ಥಿತಿ ಆದಾರದ ಮೇಲೆ ನಮ್ಮ ಬಾಯನ್ನು ಮುಚ್ಚುವಂತೆ ಏತಕ್ಕೆ ಈ ಪ್ರಯತ್ನವನ್ನು ಮಾಡುತ್ತಿದ್ದೀರಿ ಎನ್ನುವುದನ್ನು ನಾವು ೧ ೧/೨ ತಿಂಗಳ ಇತಿಹಾಸದ ಪುಟವನ್ನು ತಿರುವಿ ಹಾಕಿದರೆ ಸ್ಪಷ್ಟವಾಗಿ ಕಾಣುತ್ತದೆ. ಯಾವ ಕಾರಣಕ್ಕಾಗಿ ಇಂತಹ ಒಂದು ಕರಾಳವಾದ ನಿರ್ಣಯವನ್ನು ನಮ್ಮ ಮೇಲೆ ಹೇರುತ್ತಿದ್ದೀರೆಂದು ನಿಮ್ಮ ಮನಸ್ಸಿಗೆ ಪ್ರಶ್ನೆಯನ್ನು ಹಾಕಿಕೊಳ್ಳಿ. ಇವೆಲ್ಲ ಅಲಹಾಬಾದ್ ಹೈಕೋರ್ಟ್ ತೀರ್ಪಿನ ವಿಚಾರಕ್ಕೆ ನಡೆದಂತ ಘಟನೆಗಳು. ಅದಕ್ಕೆ ಮೊದಲು ಏನು ಆಗಿತ್ತು ? ಒಂದು ವೇಳೆ ಬೇಷರತ್ ಸ್ಟೇ ಆರ್ಡರ್‌ನ್ನು ಸುಪ್ರೀಂ ಕೋರ್ಟ್‌ನವರು ಕೊಟ್ಟಿದ್ದಂತ ಪಕ್ಷದಲ್ಲಿ ಆಗ ಪರಿಸ್ಥಿತಿ ಏನಾಗುತ್ತಿತ್ತು. ಯಾರೂ ತಕರಾರು ಮಾಡುತ್ತಿರಲಿಲ್ಲ. ಏತಕ್ಕೆ ಹೀಗಾಯಿತು ಎಂದರೆ ನಿಮ್ಮ ಕಾಂಗ್ರೆಸ್ ವರಿಷ್ಠರು ಅಲಹಾಬಾದ್ ಹೈಕೋರ್ಟ್‌ನ ಚುನಾವಣಾ ತೀರ್ಪಿನ ಮೇಲೆ......

ಅಧ್ಯಕ್ಷರು.—ಮಾನ್ಯ ಸದಸ್ಯರು ಸುಮ್ಮನೆ ಕಲ್ಪನೆಮಾಡಿ ಹೇಳುತ್ತಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ವಿಚಾರವಂತರು ಇದನ್ನು ಅರ್ಥಮಾಡಿಕೊಳ್ಳುತ್ತಾರೆ. ಆಂತರಿಕ ಪ್ರವೃತ್ತಿ ನಮ್ಮ ದೇಶಕ್ಕೆ ಯಾವ ಅಪಾಯವು ಏನೂ ಸಂಭವಿಸಿರಲಿಲ್ಲ. ನಾನು ಹೇಳುತ್ತೇನೆ ಚೀನ ದೇಶದೊಡನೆ ನಮ್ಮ ರಾಷ್ಟ್ರ ಯುದ್ಧಮಾಡಬೇಕಾಯಿತು, ಪಾಕಿಸ್ಥಾನದೊಡನೆ ೨ ಸಾರಿ ಯುದ್ಧ ಹೂಡಬೇಕಾಯಿತು. ಆ ಸಂದರ್ಭದಲ್ಲಿ ಅನೇಕ ರಾಷ್ಟ್ರದ್ರೋಹಿಗಳು ಬೇರೆ ಸರ್ಕಾರದ, ಅಂದರೆ ಶತ್ರು ಸರ್ಕಾರದ ಸಂಪರ್ಕವನ್ನು ಇಟ್ಟುಕೊಂಡಿದ್ದರು, ವೈರ್‌ಲೆಸ್ ಸಂಪರ್ಕ ಇಟ್ಟುಕೊಂಡಿದ್ದರು, ರೇಡಿಯೋ ಸಂಪರ್ಕ ಇಟ್ಟುಕೊಂಡಿದ್ದರು. ಆಗ ತುರ್ತು ಪರಿಸ್ಥಿತಿ ಬರಲಿಲ್ಲ: ಆಗ ಮೀಸಾ ಬರಲಿಲ್ಲ ಇದು ಬುದ್ಧಿವಂತ ಜನಕ್ಕೆ ಮಾಡಿರತಕ್ಕ ದೊಡ್ಡ ಅವಮಾನ. ಈ ಸಂದರ್ಭದಲ್ಲಿ ಸುಮ್ಮನೆ ಕಂಠಶೋಷಣೆ ಮಾಡುವುದರಿಂದ ಏನು ಪ್ರಯೋಜನ ಇಲ್ಲ. ನಾನು ಇಷ್ಟು ಮಾತ್ರ ಹೇಳುತ್ತೇನೆ ಪ್ರಜಾಪ್ರಭುತ್ವದಲ್ಲಿ ಪ್ರಮಾಣಿಕವಾದ ವಿಶ್ವಾಸ ನಿಮ್ಮಲ್ಲಿ ಇದ್ದರೆ, ಪ್ರಜಾಪ್ರಭುತ್ವವನ್ನು ದೇಶದಲ್ಲಿ ಉಳಿಸಬೇಕು ಎನ್ನುವ ಕಳಕಳಿಯ ಆಸಕ್ತಿ ಇದ್ದರೆ ಯಾವ ಪಕ್ಷದ ಜನ ಆಗಿರಲಿ, ಪ್ರಜೆಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟಿರತಕ್ಕ ರಾಜ್ಯಾಂಗದತ್ತವಾದ ಹಕ್ಕುಬಾಧ್ಯತೆಗಳನ್ನು ಮುರಿಯುವಂಥ ಪ್ರಯತ್ನವನ್ನು ಮಾಡಬೇಡಿ ಪ್ರಜಾಪ್ರಭುತ್ವವನ್ನು ನಮ್ಮ ದೇಶದಲ್ಲಿ ಉಳಿಸುವ ದೃಷ್ಟಿಯಿಂದ ದಯವಿಟ್ಟು ಈ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳುವಂತೆ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್ ಪಾಟೀಲ್ (ಹುಮ್ನಾಬಾದ್).—ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಸಚಿವರು ತಂದಿರತಕ್ಕ ಗೊತ್ತುವಳಿಗೆ ಇವತ್ತಿನ ಸನ್ನಿವೇಶವನ್ನು ನೋಡಿಕೊಂಡು ಬೆಂಬಲ ಕೊಡಬೇಕಾಗುತ್ತದೆ. ಯಾರಾದರೂ ಬೆಂಬಲ ಕೊಡುವುದಿಲ್ಲ ಎಂದರೆ ನಾಚಿಕೆ ಇಲ್ಲ ಎಂದು ನಮ್ಮ ಪಕ್ಷದ ಸಲುವಾಗಿ ಹೇಳಬೇಕಾಗುತ್ತದೆ ಎಮರ್‌ಜೆನ್ಸಿ ಭಾರತಕ್ಕೆ ಬಂದಿರಬಹುದು. ಅದು ಕರ್ನಾಟಕಕ್ಕೆ ಸಂಬಂಧ ಇಲ್ಲ ಜಾತಿಯ ಹೆಸರಿನಲ್ಲಿ ಒಬ್ಬರ ಕತ್ತನ್ನು ಇನ್ನೊಬ್ಬರು ಕುಯ್ಯುವ ಶಕ್ತಿ ಇದೆ. ಸೋಷಿಯಲಿಸಂ ನಮ್ಮ ದೇಶದಲ್ಲಿ ಬರಬಾರದು, ಸೋಷಿಯಲಿಸಂ ಕೂಗು ಜನರಿಗೆ ಮಾತ್ರ ಇರಬೇಕು ಎನ್ನುವ ಪಟ್ಟಭದ್ರ ಶಕ್ತಿಗಳು ಏನು ಇವೆ ಅವು ಕುತಂತ್ರವನ್ನು ನಡೆಸಿವೆ. ಈ ಕುತಂತ್ರದ ಪರಿಣಾಮವಾಗಿ ೩-೪ ವರ್ಷದಿಂದ ನಮ್ಮ ಜನತೆಯಲ್ಲಿ ಒಂದು ಹೊಸ ರೆವೆಲ್ಯೂಷನ್ನನ್ನು ತಂದು ತೋರಿಸಿದೆ. ೧೯೪೭ರಲ್ಲಿ ಈ ರೆವೆಲ್ಯೂಷನ್ ಆದದ್ದು. ಜಾತಿಯ ಆಧಾರದ ಮೇಲೆ, ದುಡ್ಡಿನ ಆಧಾರದ ಮೇಲೆ ಆಗತಕ್ಕ ಎಲೆಕ್ಷನ್‌ನಲ್ಲಿ ಒಂದು ಮನಾಪಲಿ ಇಟ್ಟುಕೊಂಡು, ರಿಯಾಕ್ಷನರಿ ಫೋರ್ಸ್‌ನ್ನು ಪಾರ್ಲಿಮೆಂಟ್‌ನಲ್ಲಿ ತಂದರೂ ಕೂಡ ಪಾರ್ಲಿಮೆಂಟ್ ಮಾಡತಕ್ಕ ಕಾಯಿದೆ ಕಾನೂನುಗಳಿಂದ ಅದು ಜನರನ್ನು ಅಪ್ರೋಚ್ ಮಾಡುವಂತದ್ದು ಏನಿತ್ತು ? ರಿಯಾಕ್ಷನರಿ ಫೋರ್ಸ್, ಮಾನಾಪಲಿ, ಕ್ಯಾಪಿಟಲ್ ಇವೆಲ್ಲವೂ ಕೂಡ ಒಳಸಂಚು ನಡೆಸಿ ಕಾಯಿದೆಮಾಡಿ ಕೃತಿಯಲ್ಲಿ ನಾವು ಅದನ್ನು ತರದಿದ್ದರೆ ಅವರು ಏನು ಮಾಡುತ್ತಾರೆ ? ಇದೆಲ್ಲ ಒಳಸಂಚು ಮಾಡಿ ನಡೆಸಿದ್ದಾರೆ. ಒಳಸಂಚುಗಾರರು ಏನಿದ್ದಾರೆ ಅವರ ಬೇರನ್ನು ಕತ್ತರಿಸುವ ಸಲುವಾಗಿ ಇದನ್ನು ತರಬೇಕಿತ್ತು. ಮೊದಲೇ ಇದನ್ನು ಏತಕ್ಕೆ ತರಲಿಲ್ಲ ? ೨ ವರ್ಷದಿಂದ ಇದು ಏತಕ್ಕೆ ಬರಲಿಲ್ಲ ? ಕಮ್ಯೂನಿಸ್ಟ್ ಇದನ್ನು ನಂಬುವುದಿಲ್ಲ. ಆದರೂ ಕೂಡ ರೆವೆಲ್ಯೂಷನ್‌ನ್ನು ದೇಶದಲ್ಲಿ ತರುತ್ತಾರೆ ಎನ್ನುವ ಸಮಯದಲ್ಲಿ ಮಿಲಿಟರಿ ಟ್ರೀಸನ್ ಮಾಡುತ್ತಾರೆ, ಈ ಟ್ರೀಸನ್ ಮಾಡುವ ಅವಕಾಶ ಇಲ್ಲೂ ಇದೆ. ಈ ಟ್ರೀಸನ್ ಹಿಂದೆ ೬ ತಿಂಗಳಿನಿಂದ ನಡೆಯುತ್ತಿತ್ತು. ಜಾತೀಯ ಹೆಸರಿನಲ್ಲಿ ಡೆಮಾಕ್ರಸಿ ಹೆಸರಿನಲ್ಲಿ ಇದು ನಡೆಯುತ್ತಿದೆ. ಡೆಮಾಕ್ರಸಿ ಎಂದು ಕೂಗುವವರು ೧೫ ವರ್ಷದಿಂದ ಎಲ್ಲಿ ಹೋಗಿದ್ದರು ? ಪಾರ್ಲಿಮೆಂಟ್ ಮಂತ್ರಿಗಳು ರಾಜೀನಾಮೆಯನ್ನು ಕೊಡುವುದಕ್ಕೆ ತಯಾರು ಇಲ್ಲ. ಅವರನ್ನು ಕಿತ್ತೊಗೆಯಲಿ. ನಮಗೆ ಅಸೆಂಬ್ಲಿ ಬೇಡ, ನಮಗೆ ಪಾರ್ಟಿ ಬೇಡ. ನಮಗೆ ಬೇಕಾಗಿರುವುದು ಮಾನ್ಯ ಜಯಪ್ರಕಾಶ್ ನಾರಾಯಣರು ಮತ್ತು ಪವಿತ್ರನಾದ ಹಿಟ್ಲರ್ ಬೇಕು.

3-30 P.M.

ಹಿಟ್ಲರ್ ಬ್ರಹ್ಮಚಾರಿಯಾಗಿದ್ದ. ಆತನು ಹೆಂಡ ಕುಡಿಯುತ್ತಿರಲಿಲ್ಲ. ಚಹಾವನ್ನೂ ಸಹ ಕುಡಿಯುತ್ತ ಇರಲಿಲ್ಲ. ಹಿಟ್ಲರ್‌ಗೆ ಜಯವಾಗಲಿ ಎಂದು ಘೋಷಣೆಯನ್ನು ಕೂಗುತ್ತಾ ಇದ್ದವರು ನಮ್ಮ ದೇಶದಲ್ಲಿ ಇದ್ದರು. ಸೋಷಿಯಲಿಸಮು ಕತ್ತನ್ನು ಹಿಸುಕಿ ನಾಲ್ಕು ಕೋಟಿ ಜನರಿಗೆ ಸಾವು ನೋವನ್ನು ತಂದಿದ್ದರು. ಅಂಥ ಫ್ಯಾಸಿಸಮು ಇತ್ತು. ಕರ್ನಾಟಕದಲ್ಲಿ ಪಿತೂರಿ ಇರಲಿಲ್ಲ. ಅತ್ತ ಕಡೆ ಕುಳಿತಿರುವ ಕಾಂಗ್ರೆಸ್‌ನವರು ಏನು ಮಾಡುತ್ತಾರೆ ಎಂಬುದರ ಬಗ್ಗೆ ಪ್ರತಿಯೊಂದು ವಿಚಾರ ಮಾಡುತ್ತಾರೆಂದು ಹೇಳುವುದಕ್ಕೆ ತಯಾರು ಇಲ್ಲ. ೨೫ ಪ್ರೋಗ್ರಾಮ್ ಹಾಕಿಕೊಂಡು ಅದನ್ನು ತಂದುಬಿಟ್ಟರೆ ದೇಶ ಉಳಿದುಕೊಳ್ಳುತ್ತದೆ ಎಂದು ಹೇಳುತ್ತಾರೆ ಸೋಷಿಯಲಿಸಮ್ ಉಳಿದುಕೊಳ್ಳಬೇಕು. ಫ್ಯಾಸಿಸಮ್ ಇಂಡೋನೇಶಿಯದಲ್ಲಿ ಏನಾಗಿದೆ ? ಬೇರೆ ಬೇರೆ ಕಡೆ ಏನಾಗುತ್ತಾ ಇದೆ ಬೇರೆ ಬೇರೆ ಫ್ಯಾಸಿಸ್ಟ್ ಫೋರ್ಸಸ್‌ನಿಂದ ಎಲ್ಲ ಶಕ್ತಿಯನ್ನು ಹಾಳುಮಾಡುತ್ತಿದ್ದಾರೆ. ಖಾದಿಬಟ್ಟೆಯನ್ನು ಹಾಕಿಕೊಂಡು ಭಗವಾನ್ ಭಕ್ತರು ದೇಶಭಕ್ತರು ಎಂದು ಹೇಳಿಕೊಂಡು ಟೋಟಲ್ ರೆವಲ್ಯೂಷನ್ ಮಾಡಲಿಕ್ಕೆ ಹೊರಟ್ಟಿದ್ದಾರೆ ಇದಕ್ಕೆ ಕಾರಣರಾದವರು ಯಾರು ? ಬಿಹಾರದಲ್ಲಿ ನಡೆದಂತ ಅನ್ಯಾಯಗಳನ್ನು ತಮ್ಮ ಮಕ್ಕಳಿ ಒಪ್ಪಲಿಲ್ಲ. ಕತ್ತುಗಳನ್ನು ಕೊಯ್ದು ತಲೆ ಬುರುಡೆಗಳನ್ನು ಇಟ್ಟಿದ್ದಾರೆ. ತಲೆ ಬುರುಡೆಯಿಂದ ಮಂತ್ರಶಕ್ತಿಯನ್ನು ಉಪಯೋಗಿಸಿಕೊಂಡು ಸರ್ಕಾರ ಮಾಡಲಿಕ್ಕೆ ಹೊರಟ್ಟಿದ್ದಾರೆ. ಬಿಹಾರ್ ಸರ್ಕಾರ ಆನಂದ ಮಾರ್ಗವನ್ನು ತರಬೇಕೆಂದು ಹೇಳಿದರೆ ಎಡೆ ಕೊಡಲಿಲ್ಲ. ಅಸೆಂಬ್ಲಿ ಮಿತ್ರರಿಗೆ ರೈಟ್ ರಿಯಾಕ್ಷನರಿ ಫೋರ್ಸಸ್ ಇಂಟರ್‌ನ್ಯಾಷನಲ್ ಫೋರ್ಸಸ್ ಫ್ಯಾಸಿಸ್ಟ್ ಫೋರ್ಸಸ್ ನಮ್ಮ ದೇಶದಲ್ಲಿ ಏನು ಇವೆ ಆ ಒಂದು ಸಂಪ್ರದಾಯ ಬಂದಿದೆ.

(ಉಪ ಸಭಾಪತಿಗಳು ಪೀಠವನ್ನು ಅಲಂಕರಿಸಿದ್ದರು)

ಶ್ರೀ ಕೋಣಂದೂರು ಲಿಂಗಪ್ಪ.—ಅಲ್ಲೆ ಕುಳಿತುಕೊಳ್ಳಿ, ಇಲ್ಲಿ ಏತಕ್ಕೆ ಕುಳಿತಿದ್ದೀರಿ ?

ಶ್ರೀ ವಿ. ಎನ್. ಪಾಟೀಲ್.—ನಮಗೆ ಇಲ್ಲಿ ಕೂಡುವ ಅಧಿಕಾರವಿದೆ.

MR. DEPUTY SPEAKER.—Hon Member Mr. Lingappa, must also, have the strength of mind to listen to him. If it is Lingappas desire to work out democratic process, why do as he get so much impulasive ? My dificulty is he is so close.

ಶ್ರೀ ವಿ. ಎನ್. ಪಾಟೀಲ್.—ಫ್ಯಾಸಿಸಮ್ ತರುತ್ತೇವೆಂದು ಡಿಕ್ಟೇಟರ್‌ಷಿಪ್ ತರುತ್ತಿದ್ದೀರಿ. ಸ್ಟಾಲಿನ್ ಸಮಾಧಿಯ ಹೊರಗಡೆಯಲ್ಲಿ ಕಣ್ಣೀರು ಸುರಿಸುತ್ತಿರುವುದನ್ನು ನೋಡಿದರೆ ನನಗೆ ನಗುಬರುತ್ತಿದೆ. ಈವೊತ್ತಿನ ದಿವಸ ಡೆಮಾಕ್ರಸಿ ಬಗ್ಗೆ ಅಷ್ಟು ನಂಬಿಕೆ ಇದೆ. ವ್ಯಕ್ತಿಪೂಜೆಯ ದುರುಪಯೋಗ ಮಾಡಿಕೊಂಡಿದ್ದೀರಿ. ದುರುಪಯೋಗ ಬೇಡ, ಸರಿಯಾದ ಪಥದ ಕಡೆ ಹೋಗುತ್ತಾ ಇದ್ದರೆ ನಿಮಗೆ ದುಃಖ ಏತಕ್ಕೆ ಆಗುತ್ತದೆ ? ನಮ್ಮ ಮಿತ್ರರಾದ ಶ್ರೀ ತಿಮ್ಮಪ್ಪನವರು ಏನು ಹೇಳಿದರು ಅದನ್ನು ಒಪ್ಪಲೇ ಬೇಕು. ನಮಗೆ ಉಳಿಗಾಲ ಬಂದಂತೆ ಕಾಣುವುದಿಲ್ಲ. ಕೊನೆಗಾಲ ಬರುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದರ ಹಿನ್ನಲೆ ಏನು ಇದೆ ಅದನ್ನು ಒಪ್ಪಿಕೊಳ್ಳಲೇಬೇಕು. ದೇಶವನ್ನು ಉಳಿಸಬೇಕೆನ್ನುವ ಪ್ರಯತ್ನವಿದ್ದರೆ ಉಳಿಗಾಲವಿದೆ. ನಮ್ಮ ಜನರಲ್ಲಿ ಸಹನಾಶಕ್ತಿ ಮೀರಿದೆ ಪ್ರಾಮಾಣಿಕ ಜನರಲ್ಲೂ ನಮ್ಮ ಪ್ರಾಮಾಣಿಕತೆಯ ಬಗ್ಗೆ ಸಂಶಯ ಬರದಂತೆ ನೋಡಿಕೊಳ್ಳಬೇಕಾಗಿದೆ, ಇಪ್ಪತ್ತು ವರ್ಷಗಳಿಂದಲೂ ಆ ಒಂದು ರೀತಿಯಾದ ಭಯವು ಉಂಟಾಗಿದೆ. ಆ ಭಯ ನಿರ್ಮೂಲ ಮಾಡಬೇಕಾದರೆ ಕೃತಿಯಲ್ಲಿ ತರಬೇಕಾಗಿದೆ. ಮೀಸವನ್ನು ಉಪಯೋಗಿಸಿ ನಮ್ಮ ಜಿಲ್ಲೆಯಲ್ಲಿ ೫೦೦ ಮೂಟೆ ಜೋಳವನ್ನ ಹಿಡಿದಿದ್ದಾರೆ. ಅದನ್ನು ಎಲ್ಲಿಟ್ಟಿದ್ದಾರೋ ? ಕೇಳಿದರೆ ಉತ್ತರವಿಲ್ಲ. ೫ ಜನರಿರುವ ಒಂದೊಂದು ಮನೆಯಲ್ಲಿ ನಾಲ್ಕು ಮೂಟೆ ಮೂರು ಮೂಟೆ ಜೋಳವನ್ನು ಬಿಟ್ಟು ಉಳಿದದ್ದನ್ನೆಲ್ಲ ಕಾನ್‌ಫಿಸ್ಕೇಟ್ ಮಾಡಿಕೊಳ್ಳುತ್ತಾರೆ. ಯಾರ ಮೇಲೂ ಲೀಗಲ್ ಆಕ್ಷನ್ ತೆಗೆದುಕೊಂಡ ಉದಾಹರಣೆ ಇಲ್ಲ. ೨೦ ಪಾಯಿಂಟ್ ಅಂಶದಿಂದ ಜನರಿಗೆ ಸೌಕರ್ಯವಿದೆ ಎಂದು ಏನು ತಂದಿದ್ದಾರೆ ಅದನ್ನು ೪ ವರ್ಷಗಳ ಹಿಂದೆ ಇದೇ ಜನತಾ ಸರ್ಕಾರವಿದ್ದಾಗ ಏತಕ್ಕೆ ತರಲಿಲ್ಲ ? ಆಗ ರೀಯಾಕ್ಷನರಿ ಫೋರ್ಸಸ್ ಬೇಕಾಗಿರಲಿಲ್ಲ. ಫ್ಯಾಸಿಸಮ್ ಫೋರ್ಸ್‌ಸ್ಡ್ ಬೇಡವಾಗಿತ್ತು, ವೆಸ್ಟ್ ಇಂಟರೆಸ್ಟ್ ಬೇಡವಾಗಿತ್ತು ಎಮರ್ಜನ್ಸಿ ಬಂದಿದೆ ಎಂದು ಆ ಪ್ರಕಾರ ಪ್ರೋಗ್ರಾಮ್ ತರುವಸಲುವಾಗಿ ಪ್ರಯತ್ನ ಪಟ್ಟು ಸಿನ್‌ಸಿಯಾರಿಟಿ ಆಪ್ರೋಚ್ ಇಟ್ಟುಕೊಂಡು ದೇಶದ್ರೋಹಿ ಶಕ್ತಿಗಳನ್ನು ಪಟ್ಟಭದ್ರ ಹಿತಾಶಕ್ತಿಗಳನ್ನು ನಿರ್ದಾಕ್ಷಿಣ್ಯವಾಗಿ ಜೈಲಿನ ಒಳಗೆ ಹಾಕಿ, ದೇಶದ ಹಿತಾಸಕ್ತಿಗೆ ದುಡಿಯತಕ್ಕ ಜನರು ಯಾರು ಇದ್ದಾರೆ ಅಂತವರಿಗೆ ಬೆಂಬಲ ನೀಡಿದರೆ ೪ ವರ್ಷದಲ್ಲಿ ಆಗುವ ಕೆಲಸವನ್ನು ೪ ತಿಂಗಳಲ್ಲಿಯೇ ಸಾಧಿಸಬಹುದು. ರೆಸಲ್ಯೂಷನ್ ಲಿಸ್ಟ್ ಏನು ಇಟ್ಟಿದ್ದೀರಿ ಇದರಿಂದ ನನ್ನವರೆಟ್ಟಿಗೆ ಅನ್ನಿಸುತ್ತದೆ. ಈ ಮನೆಯಲ್ಲಿ ಒಂದು ಕಡೆ ನಮ್ಮ ಪ್ರಶ್ನೋತ್ತರ ಕಾಲದ ವ್ಯಾಲ್ಯುಬಲ್ ರೈಟ್ ಏನು ಇದೆ ಅದನ್ನು ಕಸಿದುಕೊಂಡಿದ್ದೀರಿ, ಇನ್ನೊಂದು ಕಡೆ ಹಕ್ಕಿನ ದುರುಪಯೋಗ ಬಹಳವಾಗಿ ಆಗುತ್ತಿದೆ. ಹಿಂದೆ ಸ್ವಲ್ಪ ಟೈಮ್‌ನಲ್ಲಿಯೇ ನಮ್ಮ ಜನರಿಗೆ ಲಾಭಕೊಡತಕ್ಕ ಎಷ್ಟೋ ಕಾಯಿದೆಗಳನ್ನು ತಂದಿದ್ದೀರಿ. ಕೊಶ್ಚನ್ ಅವರ್ ಒಂದು ಗಂಟೆ, ಕಾಲಿಂಗ್ ಅಟೆನ್‌ಷನ್ ಅರ್ಧ ಗಂಟೆ ಮತ್ತು ಜೀರೋ ಅವರ್‌ನಲ್ಲಿ ಮಾನ್ಯ ಮಿತ್ರರಿಗೆ ಎಮೋಷನ್ಸ್ ಬರುತ್ತದೆ. ಈ ೨–೩ ಅವರ್ ಎಮೋಷನ್ಸ್‌ನಲ್ಲಿ ಕಳೆಯುವುದಕ್ಕಿಂತ ಒಂದು ವಾರ ಬಿಸಿನೆಸ್ ಟ್ರಾನ್‌ಸ್ಯಾಕ್ಟ್‌ಮಾಡಿ ಇನ್ನೂ ಪ್ರೊಗ್ರೆಸೀವ್ ಲೆಜಿಸ್ಲೇಷನ್ ತರೋಣ ಎಂದು ತಂದಿದ್ದರೆ ಡೆಫನೆಟಲೀ ಅಂಡ್ ಹೋಲ್ ಹಾರ್ಟೆಡಲೀ ಅದಕ್ಕೆ ಸಪೋರ್ಟ್ ಮಾಡುತ್ತೇನೆ. ಈ ರೀತಿ ಸುಮ್ಮನೆ ಎನೆಸ್ಟ್ ಎಂದು ತೋರಿಸಿಕೊಳ್ಳುವುದಷ್ಟೆ ಒಂದು ವೇಳೆ ಆ ರೀತಿ ಒಂದು ವಾರ ಬಿಸಿನೆಸ್ ಟ್ರಾನ್‌ಸ್ಯಾಕ್ಟ್‌ಮಾಡಿ ಪ್ರೊಗ್ರೆಸೀವ್ ಲೆಜಿಸ್ಲೇಟೀವ್ ತಾರದೇ ಇದ್ದರೆ ಛೀಮಾರಿ ಹಾಕುವ ಅಧಿಕಾರ ನಮಗೆ ಇದೆ, ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ನಮಗೆ ಎಕ್ಸ್‌ಪ್ಲನೇಷನ್ ಕೊಡಬೇಕು. ಅನ್ ಸ್ಟಾರ್ಡ್ ಕೊಶ್ಚನ್ಸ್‌ನ್ನು ಮೆಂಬರ್ಸ್ ಕಳಿಸಿದರೆ ಅದಕ್ಕೆ ಆಫೀಸರ್ಸ್ ೮ ದಿವಸದಲ್ಲಿ ಉತ್ತರ ಕೊಡದೇ ಹೋದರೇ ಅವರನ್ನು ಸಸ್ಪೆಂಡ್ ಮಾಡುತ್ತೇವೆ ಎಂದು ಹೇಳುತ್ತೀರಾ, ಹಾಗೆ ಹೇಳುವ ಎದೆಗಾರಿಕೆ ನಿಮಗೆ ಇಲ್ಲವೇ ಎಂದು ಕೇಳುತ್ತೇನೆ. ನೀವು ಈ ರೀತಿ ರೆಸಲ್ಯೂಷನ್ ತಂದು ಕೊಶ್ಚನ್ ಅವರ್ ಇಲ್ಲ ಎಂದು ಹೇಳಿದರೆ, ಆಫಿಷಿಯಲ್ಸ್ ನಮಗೆ ಯಾವರೀತಿ ಭಯ ಇಲ್ಲ, ನಮಗೆ ಬೆಂಬಲ ಇದೆ, ನಮಗೆ ಲಂಗುಲಗಾಮು ಇಲ್ಲ. ಎಲ್.ಎ. ಕೊಶ್ಚನ್ ಇಲ್ಲ ನಮಗೇನು ಭಯ ಎಂದು ಇರುತ್ತಾರೆ. ಕೊಶ್ಚನ್ಸ್ ಇದ್ದರೆ ಉತ್ತರ ಏಕೆ ಬರಲಿಲ್ಲ ಎಂದು ಎಂ.ಎಲ್.ಎ ಕೇಳುತ್ತಾರೆ. ಆಗ ಆಫಿಷಿಯಲ್ಸ್‌ಗೆ ಭಯ ಇರುತ್ತದೆ. ಒಂದು ವಾರ ಬಿಸಿನೆಸ್ ಟ್ರಾನ್‌ಸ್ಯಾಕ್ಟ್‌ಮಾಡಿ ಪ್ರೊಗ್ರೆಸೀವ್ ಲೆಜಿಸ್ಲೇಷನ್ ತರೋಣ, ಜನರಿಗೆ ಬೇಗ ಬೇಗ ರಿಲೀಫ್ ಕೊಡೋಣ ಎಂದು ಇದ್ದರೆ ಅದಕ್ಕೆ ಹೋಲ್ ಹಾರ್ಟೆಡ್ ಸಪೋರ್ಟ್ ಇದೆ. ಈ ರೀತಿ ಸಪೋರ್ಟ್ ಮಾಡಬೇಕಾದರೆ ಆ ಕಡೆ ಏಕೆ ಕುಳಿತಿದ್ದೀರಿ ಎಂದು ಕೆಲವರು ಕೇಳಬಹುದು, ಕಲ್ಲಿನೇಟಿಗೆ ಹೆದರಬೇಕಾದಕೆ ಗಾಜಿನ ಮನೆಯಲ್ಲಿ ಇರುವುದು ಒಳ್ಳೆಯದಲ್ಲ ಎಂದು ಉಕ್ಕಿನ ಮನೆಯಲ್ಲಿ ಇದ್ದೇನೆ. ನಾನು ಕೊನೆಯದಾಗಿ ವಾರ್ನಿಂಗ್ ಕೊಡುವುದಕ್ಕೆ ಬಯಸುತ್ತೇನೆ. ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರನ್ನು ಅಶ್ಯೂರೆನ್ಸ್ ಕೊಡುತ್ತೀರಾ ಎಂದು ಕೇಳುತ್ತೇನೆ ಅನ್ ಸ್ಟಾರ್ಡ್ ಕೊಶ್ಚನ್ ಮೆಂಬರಿಂದ ಬಂದಿದ್ದರೆ ಅದಕ್ಕೆ ವಿತ್ ಇನ್ ಒನ್ ವೀಕ್‌ನಲ್ಲಿ ಉತ್ತರ ತರಿಸಿಕೊಡುತ್ತೀರಾ ಮಾನ್ಯ ಡೆಪ್ಯುಟಿ ಸ್ಪೀಕರ್ ಅವರು ರೆಸಲ್ಯೂಷನ್‌ನ್ನು ಇನ್ನೂ ಓಟಿಗೆ ಹಾಕಿಲ್ಲ. ಓಟಿಗೆ ಹಾಕುವ ಮೊದಲು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಅಶ್ಯೂರೆನ್ಸ್ ಕೊಡಬೇಕು ಕೊಡದೇ ಹೋದರೆ ಶೇಮ್‌ಫುಲ್ ಆಕ್ಟ್ಸ್ ಎಂದು ಕೂಗುವುದಕ್ಕೆ ನಮಗೆ ಬರುತ್ತದೆ. ಇವತ್ತಿನದಿವಸ ಎಮರ್ಜನ್ಸಿ ತಂದಿದ್ದೀರಿ. ಆದರೆ ರೈಟ್ ರಿಯಾಕ್ಷನರಿ ಫೋರ್ಸಸ್

ಎಮರ್ಜನ್ಸಿಯನ್ನು ದುರುಪಯೋಗ ಮಾಡಿಕೊಳ್ಳುತ್ತಿವೆ. ಅವರಿಗೆ ನೇಣು ಹಾಕಿಕೊಳ್ಳುವುದಕ್ಕೆ ಹಗ್ಗ ಸಿಕ್ಕುವುದಿಲ್ಲ, ವಿಷ ತೆಗೆದುಕೊಳ್ಳಬೇಕಾದರೆ ಪ್ಯೂರ್ ವಿಷ ಸಿಕ್ಕುವುದಿಲ್ಲ ಎಮರ್ಜನ್ಸಿಯನ್ನು ಸದುಪಯೋಗ ಮಾಡಿಕೊಂಡು, ಯಾವ ಜನರಿಗೆ ರಿಲೀಫ್ ಕೊಡಬೇಕೆಂದು ಇದ್ದೀರೋ ಅವರಿಗೆ ರಿಲೀಫ್ ಕೊಟ್ಟರೆ ಅದಕ್ಕೆ ನಮ್ಮ ಬೆಂಬಲ ಇದೆ. ಆದರೆ ಇವತ್ತು ಎಮರ್ಜನ್ಸಿ ದುರುಪಯೋಗವಾಗುತ್ತಿದೆ. ರೈಟ್ ರಿಯಾಕ್ಷನರಿ ಫೋರ್ಸಸ್‌ಗೆ ಎಲ್ಲೂ ಕರ್ಬ್ ಆಗಿಲ್ಲ. ಆರ್ ಎಸ್.ಎಸ್. ಜನಸಂಘದವರು ಏನು ಇದ್ದಾರೆ ಅವರು ಅಂಡರ್‌ಗ್ರೌಂಡ್‌ಗೆ ಹೋಗುತ್ತಾ ಇದ್ದಾರೆ. ಅವರು ಟಾಪ್‌ನಲ್ಲಿ ನಿಂತು ಕೂಗುತ್ತಿದ್ದಾರೆ. ಅವರ ಸ್ಯಾಬೋಟೇಜ್ ವಾಲ್ಯು ಇನ್ನೂ ಹೆಚ್ಚಾಗುತ್ತಿದೆ. ಅವರು ಅಂಡರ್‌ಗ್ರೌಂಡ್‌ಗೆ ಹೋಗುತ್ತಿದ್ದಾರೆಯೇ ವಿನಾ ಎಬೌವ್‌ಗ್ರೌಂಡ್‌ಗೆ ಬರಲಿಲ್ಲ. ಈ ಎಮರ್ಜನ್ಸಿ ಡಿಕ್ಲೇರ್ ಆದಮೇಲೆ ಮದ್ರಾಸಿನಲ್ಲ ಎಲ್.ಐ.ಸಿ ಆಫೀಸನ್ನು ಸುಟ್ಟಿದ್ದಾರೆ ಅದಕ್ಕೆ ಕಾರಣ ಆಂಟಿ ನ್ಯಾಷನಲ್ ಫೋರ್ಸಸ್ ಎಂದು ಕೆಲವರು ಪ್ರಗತಿಶೀಲ ಮಿತ್ರರು ಉದಾಹರಣೆ ಕೊಟ್ಟರೆ, What about Congress ? Every thing is happening according to our predictions ಎಂದು ಹೇಳಿದರು. ಇಂಟರ್‌ನಲ್ ಡಿಸ್ಟರ್ಬೆನ್ಸ್‌ಸ್ ಎಮರ್ಜನ್ಸಿ ತರುತ್ತಾರೆ. ಆಮೇಲೆ ಎಲ್ಲರನ್ನೂ ಹಿಡಿದು ಹಾಕುತ್ತಾರೆ, ಇದೆಲ್ಲಾ ಕರೆಕ್ಟ್. ನಾನ್ ಅಲೈನ್ಡ್ ಕಂಟ್ರೀಸ್ ಇದಕ್ಕೆ ಸಪೋರ್ಟ್ ಮಾಡುತ್ತಾರೆಂದು ನಮ್ಮ ದೇಶದಲ್ಲಿ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು ಎಂದು ಕೆಲವರು ಹೇಳುತ್ತಿದ್ದಾರೆ ನಾನ್ ಅಲೈನ್ಡ್ ಕಂಟ್ರೀಸ್ ಸ್ತ್ರೀಯರೂ ಅಲ್ಲ, ಪುರುಷರೂ ಅಲ್ಲ ನಪುಂಸಕರು. ಅವರು ಸೋಷಲಿಸಂ ಎಂದರೆ 'ಎಸ್' ಎಂದು ಹೇಳುತ್ತಾರೆ. ಅಮೇರಿಕ ಇಂಪೀರಿಯಾಲಿಸಂ ವಿರುದ್ಧ ೧೩ ವರ್ಷ ಹೋರಾಟ ಮಾಡಿದ್ದರಿಂದ ಪ್ರತಿಯೊಂದು ಕೂಸು ತನ್ನ ತಂದೆ ತಾಯಿಯನ್ನು ಕಳೆದುಕೊಂಡಿದೆ. ಅಮೇರಿಕ ಇಂಪೀರಿಯಾಲಿಸಂ ವಿರುದ್ಧ ಭಾರತದೇಶ ಕ್ರಮ ತೆಗೆದುಕೊಂಡಿದೆ. ಅದರ ಬಗ್ಗೆ ನಮ್ಮ ಪಾರ್ಟಿಯಲ್ಲಿ ಡಿಸ್‌ಕಸ್ ಮಾಡುವಾಗ ಕನ್‌ಫ್ಯೂಷನ್ ಕ್ರಿಯೇಟ್ ಆಯಿತು. ಕಾಂಗ್ರೆಸ್‌ನಲ್ಲೂ ಪ್ರಗತಿಶೀಲ ಶಕ್ತಿಗಳಿವೆ. ಅವು ನಮ್ಮ ದೇಶದಲ್ಲಿ ಪ್ರಗತಿಪಥದಲ್ಲಿ ಕೊಂಡೊಯ್ಯಬೇಕು. ಈಗ ಎಮರ್ಜನ್ಸಿ ತಂದಿದ್ದೀರಿ, ಇದನ್ನು ಉಪಯೋಗಮಾಡಿ ೨-೩ ತಿಂಗಳಲ್ಲಿ ಜನರಿಗೆ ರಿಲೀಫ್ ಕೊಡಬೇಕು, ರಿಲೀಫ್ ಕೊಡದೇ ಹೋದರೆ ದೇಶಕ್ಕೆ ಮುಂದೆ ಗಂಡಾಂತರ ಬರುತ್ತದೆ ಈ ರೆಸಲ್ಯೂಷನ್‌ಗೆ ಹೋಲ್ ಹಾರ್ಟೆಡ್‌ಲೀ ಸಪೋರ್ಟ್ ಮಾಡಿ, ಈ ರೆಸಲ್ಯೂಷನ್‌ನ್ನು ದುರುಪಯೋಗ ಮಾಡಿಕೊಂಡರೆ ಉಳಿಗಾಲವಿಲ್ಲವೆಂದು ಹೇಳಿ, ಮಾನ್ಯ ಡೆಪ್ಯುಟಿ ಸ್ಪೀಕರ್‌ರವರು ನನಗೆ ಇಷ್ಟು ಮಾತನಾಡಲು ಅವಕಾಶಕೊಟ್ಟಿದ್ದಕ್ಕಾಗಿ, ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಮಾನ್ಯ ಸಂಸದೀಯ ಮಂತ್ರಿಗಳು ಒಂದು ವಿಶೇಷ ನಿರ್ಣಯವನ್ನು ವಿಶೇಷ ಪರಿಸ್ಥಿತಿಯ ಬಗ್ಗೆ ತಂದಿದ್ದಾರೆ. ಈಗಾಗಲೇ ಇತರೇ ಮಾನ್ಯ ಮಿತ್ರರುಗಳು ಈ ಒಂದು ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಮತ್ತು ತಮ್ಮ ಅಭಿಪ್ರಾಯಗಳನ್ನು ಕೂಡ ತಿಳಿಸಿದ್ದಾರೆ ನನಗಿಂತ ಮೊದಲು ಮಾತನಾಡಿದಂಥಾ ಮಾನ್ಯ ಸದಸ್ಯರಾದ ವಿ.ಎನ್. ಪಾಟೀಲರು ಸಮಾಜದಲ್ಲಿರತಕ್ಕ ಕೆಲವು ಘಾತುಕ ಶಕ್ತಿಗಳು ಈಗಿರತಕ್ಕಂಥ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ತಮ್ಮ ಸ್ವಂತ ಲಾಭವನ್ನು ಯಾವರೀತಿ ಪಡೆಯುತ್ತಿದ್ದಾರೆ ಎಂಬುದನ್ನು ಉದಾಹರಣೆ ಮೂಲಕ ಹೇಳಿದರು. ಭ್ರಷ್ಟಾಚಾರದಲ್ಲಿ ತೊಡಗಿರತಕ್ಕಂಥ ಅಧಿಕಾರಿಗಳ ಬಗ್ಗೆಯಾಗಲಿ, ಅಥವಾ ರಾಜಕಾರಣಿಗಳ ಬಗ್ಗೆ ಆಗಲಿ, ಒಂದು ಮಾತನ್ನಾದರೂ ಸರ್ಕಾರದ ಗಮನಕ್ಕೆ ತಂದು ಜನಸಾಮಾನ್ಯರಿಗೆ ಉಪಯೋಗವಾಗುವ ರೀತಿಯಲ್ಲಿ ಪ್ರಯೋಜನವಾಗುವ ರೀತಿಯಲ್ಲಿ ಈ ಸದನದಲ್ಲಿ ಭಾಗವಹಿಸಬೇಕು. ಈರೀತಿ ಸರ್ಕಾರದ ಗಮನಕ್ಕೆ ತರುವ ಸದಸ್ಯರ ಹಕ್ಕನ್ನು ಮೊಟಕು ಮಾಡುವುದು ಸರಿಯಾದುದಲ್ಲ. ಈ ಸದನ ೩-೪ ದಿವಸ ಅಥವಾ ಒಂದು ವಾರ ನಡೆಯಬಹುದು. ಅಷ್ಟುಮಟ್ಟಿಗಾದರೂ ಶ್ರೀಮತಿ ಇಂದಿರಾಗಾಂಧಿಯವರು ಸಮಾಜ ಘಾತುಕರು ಯಾರಿದ್ದಾರೆ ಅವರಿಗೆ ಶಿಕ್ಷೆ ಲಭಿಸುತ್ತದೆ ಎಂದು ಹೇಳತಕ್ಕ ಉದ್ದೇಶವನ್ನಿಟ್ಟುಕೊಂಡು ನಮ್ಮ ಹಕ್ಕನ್ನು ಮೊಟಕು ಮಾಡಿದ್ದಾರೆಯೇ ? ಇಲ್ಲ. ಈ ಎರಡು ಕಾರಣಗಳಿಂದ ನಾನು ಇದನ್ನು ವಿರೋಧ ಮಾಡುತ್ತಿದ್ದೇನೆ. ಎಮರ್ಜನ್ಸಿ ಸೆಷನ್ ಎಂದು ಹೆಸರು ಇಟ್ಟುಕೊಂಡಿದ್ದಾರೆ. ಎಮರ್ಜನ್ಸಿ ಏಕೆ ಎಂದರೆ ನನಗೆ ಗೊತ್ತಿರುವ ಮಟ್ಟಿಗೆ ದೇಶದಲ್ಲಿ ಪ್ರತಿಯೊಬ್ಬರೂ ಏನೇನು ಮಾತನಾಡುತ್ತಿದ್ದಾರೆ ಅದನ್ನೆಲ್ಲಾ ನೋಡಿದರೆ ಆ ರೀತಿಯಾದಂಥ ಘಟನೆ ಎಲ್ಲಿಯೂ ನಡೆದಿಲ್ಲ. ಅಂಥ ಘಟನೆ ಏನಾದರೂ ನಡೆದಿದ್ದರೆ, ನಮ್ಮ ಎದುರಿಗೆ ಕೂತಿರತಕ್ಕಂಥವರು ೧೯೪೭ನೇ ಇಸವಿಯಿಂದಲೂ ಅಧಿಕಾರವನ್ನು ನಡೆಸಿಕೊಂಡು ಬಂದಿದ್ದಾರೆ ಅದು ಅವರಿಂದ ಮಾತ್ರ ನಡೆದಿದೆ ನಾನು ಕೆಲವು ಪ್ರಗತಿಪರ ನೀತಿಗಳನ್ನು ಧೋರಣೆಗಳನ್ನು ಅನುಸರಿಸತಕ್ಕವನು. ಅವರಿಂದಲೇ ದೇಶದಲ್ಲಿ ಇಂಥ ಪರಿಸ್ಥಿತಿ ಉದ್ಭವವಾಗಿದೆ ಎಂದು ಹೇಳಿದರೆ ಇದು ಸತ್ಯಕ್ಕೆ ದೂರವಾದ ಮಾತು. ಜೂನ್ ೧೨ನೇ ತಾರೀಖು ಅಲಹಾಬಾದ್ ಶ್ರೇಷ್ಠ ನ್ಯಾಯಾಲಯದ ತೀರ್ಪು ಬಂತು. ಅದೇ ದಿನ ಗುಜರಾತಿನ ಚುನಾವಣೆಯ ಫಲಿತಾಂಶವೂ ಬಂತು, ಗುಜರಾತಿನ ಜನ ತಮ್ಮ ಇಚ್ಛೆ ಏನು ಇದೆ, ತಮ್ಮ ಅಭಿಮತ ಏನು ಇದೆ

ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಅಲಹಬಾದ್‌ನ ಶ್ರೇಷ್ಠ ನ್ಯಾಯಾಲಯವೂ ಕೂಡ ಕಾನೂನು ಏನು ಇದೆ ಎನ್ನುವುದನ್ನು ತೋರಿಸಿಕೊಟ್ಟಿದೆ. ಇದನ್ನು ವಿರೋಧಪಕ್ಷಗಳವರು ಹೋಗಿ ಮಾಡಿದರು, ನ್ಯಾಯಾಧೀಶರುಗಳಿಗೆ ಏನೇನು ಮಾಡಿ ಈ ಕೆಲಸ ಮಾಡಿದ್ದಾರೆಯೋ ಎಂದು ನಾವು ಈ ಸಂದರ್ಭದಲ್ಲಿ ಕೇಳಬೇಕಾಗುತ್ತದೆ. ನ್ಯಾಯಾಂಗ ತನ್ನ ಕರ್ತವ್ಯವನ್ನು ಮಾಡಿದೆ. ದೇಶದಲ್ಲಿರತಕ್ಕ ಕಾನೂನು ಏನು ಎನ್ನುವುದನ್ನು ಸಿದ್ಧಮಾಡಿದೆ. ಅತಿ ಕೆಳಮಟ್ಟದವರಾಗಲೀ, ಅತಿ ಮೇಲ್ಮಟ್ಟದವರಾಗಲೀ ನ್ಯಾಯಾಲಯದ ತೀರ್ಪಿಗೆ ಮನ್ನಣೆ ಕೊಡಬೇಕು ಎನ್ನುವುದು ಮುಖ್ಯ. ಯಾರು ಪ್ರಜಾಪ್ರಭುತ್ವದಲ್ಲಿ ಅತಿ ಮೇಲ್ಮಟ್ಟದ ಅಭಿಪ್ರಾಯವನ್ನು ಹೊಂದಿದ್ದಾರೋ ಅವರೇ ಇವತ್ತಿನ ಪರಿಸ್ಥಿತಿಯನ್ನು ಒಪ್ಪತಕ್ಕ ಸ್ಥಿತಿಯಲ್ಲಿಲ್ಲ. ಇದರಿಂದ ನ್ಯಾಯಾಂಗದ ತೀರ್ಮಾನಕ್ಕೆ ಮನ್ನಣೆ ಬರಲಿಲ್ಲ. ಅದಕ್ಕೆ ಬದಲಾಗಿ ಇವತ್ತಿನ ದಿವಸ ಈ ಒಂದು ಎಮರ್ಜನ್ಸಿ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದೆ. ೧೯೪೭ ರಿಂದ ಇಲ್ಲಿಯವರೆಗೂ ಜನಕ್ಕೆ ಇವರು ಏನೂ ಮಾಡಿಲ್ಲ. ೧೯೪೭ನೇ ಇಸವಿಯಿಂದ ಅನೇಕ ಚುನಾವಣೆಗಳು ನಡೆದವು ಆದಾದಮೇಲೆ ಕಾಂಗ್ರೆಸ್ ಇಬ್ಭಾಗವಾಯಿತು. ಆವಾಗಿನಿಂದ ಆಡಳಿತ ನಡೆಸತಕ್ಕಂಥವರಿಗೆ ಸಾಮಾನ್ಯ ಜನರ ಆಶೋತ್ತರಗಳನ್ನು ಈಡೇರಿಸುವುದಕ್ಕೆ ತಮ್ಮ ಕೈಯಿಂದ ಆಗಿಲ್ಲ ಜನತೆಯು ಇವರು ತಮ್ಮ ಆಶೋತ್ತರಗಳನ್ನು ಈಡೇರಿಸಿಲ್ಲ ಎಂದು ಮನಗಂಡು ಬೇರೆಯವರನ್ನು ಚುನಾಯಿಸಿದ್ದಾರೆ ನಿಜವಾಗಿಯೂ ಕೂಡ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದರೆ ದೇಶದಲ್ಲಿ ಗರೀಬಿ ಹಟಾವ್ ಬಡತನವನ್ನು ಹೋಗಲಾಡಿಸುವುದಕ್ಕೆ ದೇಶದ ಪ್ರಧಾನಮಂತ್ರಿಗಳು ಪ್ರಯತ್ನ ಮಾಡಿದ್ದರೆ ಮತ್ತು ಅಲ್ಲಿ ಕಲಿತಂಥ ಪಾಠವನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡು ಜನರ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಕಾರ್ಯಕ್ರಮಗಳನ್ನು ತೆಗೆದುಕೊಂಡು ರಾಜ್ಯಾಂಗದ ಪ್ರಕಾರ ತಂತ್ರ್ಯಪರಿಸ್ಥಿತಿಯನ್ನು ತರುವುದಕ್ಕೆ ಹೋರಾಟ ಮಾಡಿದ್ದರೆ ಅದಕ್ಕೆ ಯಾರ ಅಡ್ಡಿಯೂ ಇರಲಿಲ್ಲ. ಇವತ್ತು ಸಂಸತ್ತಿನಲ್ಲಿ ಇವರಿಗೆ ಅತಿ ಹೆಚ್ಚಿನ ಮೆಜಾರಿಟಿ ಬಹುಮತ ಇರತಕ್ಕ ಪರಿಸ್ಥಿತಿ ಇದೆ. ರಾಜ್ಯಾಂಗವಾಗಲೀ ಯಾವ ಕಾನೂನು ಆಗಲಿ ಅದಕ್ಕೆ ತಿದ್ದುಪಡಿಯನ್ನು ತಂದರೆ ಯಾವ ಅಡ್ಡಿ ಆತಂಕ ಇಲ್ಲದೆ ಅದು ಪಾಸ್ ಆಗುವಂಥ ಪರಿಸ್ಥಿತಿ ಇವತ್ತು ಇದೆ. ಇಂಥ ಒಂದು ಪರಿಸ್ಥಿತಿಯಲ್ಲಿ ದೇಶದ ಪ್ರಧಾನ ಮಂತ್ರಿಗಳು ತುರ್ತು ಪರಿಸ್ಥಿತಿಯನ್ನು ತಂದಿದ್ದಾರೆ. ತಮ್ಮ ಒಂದು ಇಕಟ್ಟನ್ನು ಬಗೆಹರಿಸಿಕೊಳ್ಳುವುದಕ್ಕೆ ಮತ್ತು ತಾವು ಅಧಿಕಾರದಲ್ಲಿ ಶಾಶ್ವತವಾಗಿ ಉಳಿಯುವುದಕ್ಕೆ ಇವತ್ತಿನ ದಿವಸ ದೇಶದಲ್ಲಿ ಎಮರ್ಜನ್ಸಿಯನ್ನು ತಂದಿದ್ದಾರೆ. ಸಾಮಾನ್ಯ ಜನರ ಪರಿಸ್ಥಿತಿಯನ್ನು ತರುವುದಕ್ಕಾಗಲೀ ಅಥವಾ ದೇಶದ ಸಂಪತ್ತನ್ನು ಉತ್ಪತ್ತಿ ಮಾಡತಕ್ಕ ಕಾರ್ಮಿಕವರ್ಗದವರಿಗಾಗಲೀ, ರೈತ ವರ್ಗಕ್ಕಾಗಲೀ ಅವರ ಜೀವನ ಮಟ್ಟವನ್ನು ಏರಿಸುವುದಕ್ಕೆ ಆಗಲೀ ಇದು ಯಾವುದಕ್ಕೂ ದೇಶದಲ್ಲಿ ಇಂಥ ಪರಿಸ್ಥಿತಿಯನ್ನು ಇವರು ತರಲಿಲ್ಲ.

ಇವರು ತಂದಿರತಕ್ಕ ೨೦-೨೧ ಅಂಶಗಳನ್ನು ನಾವು ಗಮನಿಸುವುದಾದರೆ, ಇವತ್ತು ಯಾರೂ ಸ್ಟ್ರೈಕ್ ಮಾಡಬಾರದು ಎಂದು ಇದೆ. ಬಂಡವಾಳಶಾಹಿಗಳ ಅಭಿಪ್ರಾಯದಲ್ಲಿ ಕಾರ್ಮಿಕವರ್ಗಗಳ ಶೋಷಣೆಯನ್ನು ಮಾಡುವುದರಲ್ಲಿ, ಕಾರ್ಮಿಕರುಗಳು ತಮ್ಮ ನ್ಯಾಯವಾದಂಥ ಹೋರಾಟವನ್ನು ನ್ಯಾಯವಾದಂಥ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಕಾರ್ಮಿಕ ವರ್ಗಕ್ಕೆ ಇರತಕ್ಕ ಅಸ್ತ್ರ ಒಂದೇ ಅಂದರೆ ಸ್ಟ್ರೈಕ್ ಮಾಡುವುದು. ಇದು ಚೈನಾದೇಶವಲ್ಲ.

ಶ್ರೀ ಡಿ. ದೇವರಾಜ ಅರಸ್.—ಚೈನಾ ದೇಶವಾಗಿದ್ದರೆ ಹೀಗೆ ಮಾತನಾಡುವುದಕ್ಕೆ ಬಿಡುತ್ತಿದ್ದರೆ ?

ಶ್ರೀ ಸಿ. ಬೈರೇಗೌಡ.—ಅಂಥ ಒಂದು ಪರಿಸ್ಥಿತಿ ಇಲ್ಲಿಲ್ಲ. ಕಾರ್ಮಿಕವರ್ಗದವರ ಹಾಗೂ ರೈತ ವರ್ಗದವರ ಜೀವನ ಮಟ್ಟವನ್ನು ಏರಿಸುವುದಕ್ಕೆ ಅವರ ಬೇಡಿಕೆಗಳನ್ನು ಈಡೇರಿಸುವುದಕ್ಕೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ? ಇವರ ೨೦ ಅಂಶಗಳ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಎ. ಎನ್. ಪಾಟೀಲರು ಸಿಟ್ಟಿನಿಂದ ನಮ್ಮ ದೇಶದಲ್ಲಿ ಮೀನ್ಸ್ ಆಫ್ ಪ್ರೊಡಕ್ಷನ್ ಅನ್ನು ಹೆಚ್ಚಿಸುವ ಶಕ್ತಿ ಯಾರ ಕೈಯಲ್ಲಿದೆ ಎಂದು ಕೇಳಿದರು. ಭೂಮಿಯಲ್ಲಿ ಉತ್ಪಾದನೆಯನ್ನು ಹೆಚ್ಚಿಸುವುದು ರೈತರ ಕೈಯಲ್ಲಿದೆ, ಕಾರ್ಖಾನೆಯ ಉತ್ಪಾದನೆಯನ್ನು ಹೆಚ್ಚಿಸುವುದು ಕಾರ್ಮಿಕರ ಕೈಯಲ್ಲಿದೆ. ಆದರೆ ೧೯೪೭ನೇ ಇಸವಿಯಲ್ಲಿ ಸುಮಾರು ೨೭ ಕೋಟಿ ರೂಪಾಯಿಗಳ ಬಂಡವಾಳವನ್ನು ಹೊಂದಿದ್ದ ಟಾಟಾ ಅವರು ಇವತ್ತಿನ ದಿವಸ ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಆಸ್ತಿಯನ್ನು ಬೆಳೆಸಿಕೊಂಡಿದ್ದಾರೆ. ಅವರನ್ನು ಮುಟ್ಟತಕ್ಕ ಧೈರ್ಯ ಯಾರಿಗಾದರೂ ಇದೆಯೋ ? ಈ ದೇಶದ ಪ್ರಧಾನ ಮಂತ್ರಿಗಳಿಗಾಗಲೀ ಇದೆಯೋ ? ಈ ೨೧ ಕಾರ್ಯಕ್ರಮಗಳಲ್ಲಿ ಉತ್ಪನ್ನ ಸಾಧನಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆಯೋ ? ಇದು ಇವರಿಂದ ಸಾಧ್ಯವಾಗುತ್ತದೆಯೋ ? ದೇಶದ ಪ್ರತಿಯೊಬ್ಬ ಪ್ರಜೆಯ ಹಕ್ಕು ಇದರಲ್ಲಿದೆ, ಪ್ರತಿಯೊಬ್ಬನ ಜೀವನ ಮಟ್ಟವನ್ನು ಮೇಲೆ ಮಾಡತಕ್ಕ ಕಾರ್ಯಕ್ರಮ ಇದರಲ್ಲಿದ್ದರೆ ನಾನಾದರೂ ಇದನ್ನು ಒಪ್ಪಿಕೊಳ್ಳುತ್ತಿದ್ದೆ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಲಿಂಗಪ್ಪನವರು ಜಯಪ್ರಕಾಶ್‌ನಾರಾಯಣ್ ಅವರ ಶಿಷ್ಯರು ಎನ್ನುವುದು ಎಲ್ಲರಿಗೂ ಗೊತ್ತು. ಅವರು ಎಲ್ಲಾ ಕಾರ್ಖಾನೆಗಳನ್ನು ನ್ಯಾಷನಲೈಸ್ ಮಾಡಿ ಎಂದು ಹೇಳಿದ್ದೀರಾ ?

ಶ್ರೀ ಸಿ. ಬೈರೇಗೌಡ.—ಅಂಥ ಕಾರ್ಯಕ್ರಮಗಳು ಏನಾದರೂ ಇದ್ದಿದ್ದರೆ ನಾನಾದರೂ ಒಪ್ಪುತ್ತೇನೆ. ಆದರೆ ಅಂಥ ಕಾರ್ಯಕ್ರಮಗಳು ಯಾವುವೂ ಇಲ್ಲ. ಇವತ್ತಿನದಿವಸ ವ್ಯವಸಾಯರಂಗದಲ್ಲಿ ಆಗಲೀ, ಅಥವಾ ದೇಶದ ಸಂಪತ್ತನ್ನು ಹೆಚ್ಚು ಮಾಡತಕ್ಕ ಕೈಗಾರಿಕಾ ಕ್ಷೇತ್ರದಲ್ಲಿಯೇ ಆಗಲೀ ಇರತಕ್ಕ ಪದಾರ್ಥಗಳ ಬೆಲೆಗಳು ಇಳಿಯುತ್ತಿವೆಯೇ ? ಅದೇ ರೀತಿಯಲ್ಲಿ ದೇಶದಲ್ಲಿ ಕೋಟ್ಯಾಂತರ ರೂಪಾಯಿಗಳ ಬಂಡವಾಳವನ್ನು ಇಟ್ಟುಕೊಂಡಿರತಕ್ಕವರು ತಯಾರು ಮಾಡತಕ್ಕ ಪದಾರ್ಥಗಳ ಬೆಲೆಗಳು ಏನಾದರೂ ಇಳಿದಿವೆಯೇ ? ಇಲ್ಲ, ಅದಕ್ಕೆ ಬದಲಾಗಿ ಬೆಲೆಗಳು ಏರುತ್ತಿವೆ. ದೇಶದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಉಕ್ಕನ್ನು ತಯಾರು ಮಾಡತಕ್ಕವರು ಯಾರು ? ಎಂದರೆ ಟಾಟಾ ಅವರು. ಅವರು ಉತ್ಪನ್ನ ಮಾಡತಕ್ಕ ಉಕ್ಕು ಒಂದು ಟನ್‌ಗೆ ಸುಮಾರು ೮೦ ರೂಪಾಯಿಗಳಷ್ಟು ಏರಿದೆ. ಇದಕ್ಕೋಸ್ಕರ ಎಮರ್ಜನ್ಸಿಯನ್ನು ದೇಶದಲ್ಲಿ ಏನಾದರೂ ತಂದ್ದಿದ್ದೀರಾ ? ಅಥವಾ ಜನಸಾಮಾನ್ಯರು ಉಪಯೋಗಿಸುವ ಸೀಮೇಎಣ್ಣೆಯ ಬೆಲೆ ಜಾಸ್ತಿಯಾಗಿವೆ ಎಂದು ಅದಕ್ಕೋಸ್ಕರ ಎಮರ್ಜನಿ ಯನ್ನು ತಂದಿದ್ದೀರಾ ?

4-00 P. M.

ಇವತ್ತಿನ ದಿವಸ ಸೀಮೆ ಎಣ್ಣೆಯ ಬೆಲೆ ಜಾಸ್ತಿಯಾಗಿದೆ. ಸಾಮಾನ್ಯವಾಗಿ ಇದನ್ನು ಸಾಮಾನ್ಯ ಜನರು ಮಾತ್ರ ಬಳಸುತ್ತಾರೆ. ನಾವು ಸಾಮಾನ್ಯ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ೨೦ ಅಂಶಗಳ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎಂದು ಹೇಳುವುದಾದರೆ, ಸೀಮೆ ಎಣ್ಣೆ ಬೆಲೆಯನ್ನು ಹೆಚ್ಚು ಮಾಡುವುದಕ್ಕಾಗಿಯೇ ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡಿದ್ದೀರಾ? ಅಲ್ಲದೆ, ಈಗ ಉಕ್ಕಿನ ಬೆಲೆಯೂ ಕೂಡ ಹೆಚ್ಚಿದೆ. ಆದುದರಿಂದ, ಇವುಗಳು ಯಾವುವು ಕೂಡ ಸಾಮಾನ್ಯ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ತೆಗೆದುಕೊಂಡ ಕಾರ್ಯಕ್ರಮಗಳಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಪ್ರಧಾನ ಮಂತ್ರಿಗಳು ತಂದಿರುವ ಈ ೨೦ ಅಂಶಗಳ ಕಾರ್ಯಕ್ರಮಗಳು ಮೊದಲನೆಯ ಕಂತು ಎಂದು ಹೇಳಲಾಗಿದೆ. ಆದರೆ, ಇನ್ನೂ ಇಂತಹ ಎಷ್ಟು ಕಂತುಗಳು ಇವೆಯೋ ಗೊತ್ತಿಲ್ಲ! ಮಾನ್ಯ ಸಚಿವರು ವಿವರವಾಗಿ ತಿಳಿಸಿದ್ದರೆ, ನಾವು ಮಾತನಾಡುವ ಕೆಲಸ ತಪ್ಪುತ್ತಿತ್ತು.

MR. DEPUTY SPEAKER.—Is the hon. Member sure that industries have been nationalised even in China? For his information there is one report by Sri. R.K. Nehru on Chinese Agriculture. He was sent by late Pandit Jawaharalal Nehru in 1953. There is another report on Co-operation and Agriculture by Prof. Mahanalobis. The hon. member may please go through these reports. Industries were not touched at all for so many years.

ಶ್ರೀ ಸಿ. ಬೈರೇಗೌಡ.—ನನಗೆ ಅದು ಅರ್ಥವಾಗುವುದಿಲ್ಲ. ಮಾನ್ಯ ವಿ. ಎಸ್. ಪಾಟೀಲರು ಇವೆಲ್ಲವೂ ರಷ್ಯಾ ದೇಶದ ಪಾಲಿಸಿ ಎಂದು ಹೇಳಿದರು ಆದರೆ, ನಾವು ಇರುವುದು ಭಾರತ ದೇಶದಲ್ಲಿ. ನಾನು ಅಪಟ್ಟ ಭಾರತೀಯ. ಭಾರತ ದೇಶದಲ್ಲಿ ಎಂಥಾ ಪರಿಸ್ಥಿತಿ ಇದೆ ಎಂದು ಹೇಳುವುದಕ್ಕೆ ಮಾತ್ರನಾನು ನಿಂತಿದ್ದೇನೆ. ಪ್ರಧಾನ ಮಂತ್ರಿಯವರು ಹಾಕಿಕೊಂಡಿರುವ ೨೦ ಅಂಶಗಳ ಕಾರ್ಯಕ್ರಮವನ್ನು ಈಗಾಗಲೇ ಜಾರಿಗೆ ತರಲಾಗಿದೆ, ಆದರೆ ಇದನ್ನು ಹೊಸದಾಗಿ ಜಾರಿಗೆ ತರಬೇಕಾದ ಅವಶ್ಯಕತೆ ಏನೂ ಇರಲಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗುತ್ತದೆ. ಈಗ ಕೆಲವು ಕಾಯಿದೆಗಳನ್ನು ತಂದಿದ್ದಾರೆ ; ಸಂತೋಷ. ಆದರೆ, ಇದೇ ಕಾಯಿದೆಯನ್ನು ೩-೪ ವರ್ಷಗಳ ಹಿಂದೆಯೇ ಏತಕ್ಕೆ ತರಲಾಗಲಿಲ್ಲ ಎಂದು ನಾನು ಕೇಳುತ್ತೇನೆ. ಸಣ್ಣ ಇಮಿಷಗಳನ್ನು ತೋರಿಸಿ, ಜನಸಾಮಾನ್ಯರನ್ನು ಮೋಸ ಮಾಡಲು ಏತಕ್ಕೆ ಹೋಗುತ್ತಿದ್ದೀರಿ ಎಂದು ನಾನು ಇವತ್ತಿನ ದಿವಸ ಕೇಳಬೇಕಾಗುತ್ತದೆ. ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ, ಚುನಾಯಿತ ಸರಕಾರಗಳನ್ನು ಬಲಾತ್ಕಾರದ ಮೂಲಕ ಮತ್ತು ಶಾಸಕರನ್ನು ರಾಜೀನಾಮೆ ಕೊಡಿಸುವುದಕ್ಕೆ ಕೆಲವರು ಹೊರಟಿದ್ದರು, ಮತ್ತು ವಿಧಾನ ಸಭೆಗಳನ್ನು ಅಸ್ತಿತ್ವದಲ್ಲಿ ಇಲ್ಲದ ಹಾಗೆ ಮಾಡಲು ಹೊರಟಿದ್ದರು ಎಂದು ಹೇಳಿದ್ದಾರೆ. ಹೌದು. ಕೆಲವು ಸಂದರ್ಭಗಳಲ್ಲಿ ಅವರು ಬಲಾತ್ಕಾರವಾಗಿ ರಾಜೀನಾಮೆ ಕೊಟ್ಟರೋ ಅಥವಾ ಸ್ವತಃ ರಾಜೀನಾಮೆ ಕೊಟ್ಟರೋ ಎಂಬುದನ್ನು ನಾವು ತಿಳಿದುಕೊಳ್ಳತಕ್ಕ ವಿಚಾರವಾಗಿದೆ. ಆದರೆ, ಈ ದೇಶದ ಚರಿತ್ರೆಯಲ್ಲಿ ಬರದಿರತಕ್ಕ ಒಂದು ವಿಚಾರ ಏನು ಇದೆ ಎಂದರೆ, ಇವತ್ತಿನ ದಿವಸ ಪ್ರಜಾಪ್ರಭುತ್ವದಲ್ಲಿ

ಬಲಾತ್ಕಾರವಾಗಿ ಸರಕಾರಗಳಿಗೆ ರಾಜೀನಾಮೆ ಕೊಡಿಸುವಂಥ ಕೆಲಸದಲ್ಲಿ ತೊಡಗಿದ್ದಾರೆ ಎಂದು ಕೆಲವರ ಮೇಲೆ, ಪ್ರಧಾನ ಮಂತ್ರಿಗಳು ಹೇಳುತ್ತಿದ್ದಾರೆ, ಅವರೇ 1959ನೇ ಇಸವಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಆಗ ಕೇರಳದಲ್ಲಿ ಕಮ್ಯೂನಿಸ್ಟ್ ಸರಕಾರ ಅಸ್ತಿತ್ವದಲ್ಲಿ ಇತ್ತು. ಆಗ ಅಲ್ಲಿ ಇದ್ದಂಥ ಕಮ್ಯೂನಿಸ್ಟ್ ಸರಕಾರವನ್ನು ಯಾರು ಉರುಳಿಸಿದ್ದು ? ಈ ದೇಶದಲ್ಲಿರುವ ಆರ್. ಎಸ್. ಎಸ್. ಆಗಲೀ, ಜನಸಂಘವಾಗಲೀ ಅಥವಾ ಇತರ ಪಕ್ಷಗಳಾಗಲೀ ನಂಬೂದ್ರಿ ಪಾಡ್ ನಾಯಕತ್ವದ ಕಮ್ಯೂನಿಸ್ ಸರಕಾರವನ್ನು ಉರುಳಿಸಲಿಲ್ಲ. ಪ್ರಜಾಪ್ರಭುತ್ವ ಎಂದು ಕೂಗು ಕೂಗಿ, ಘೋಷಣೆ ಮಾಡಿದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರೇ ಅಲ್ಲಿ ವಿಮೋಚನಾ ಸಮರವನ್ನು ನಡೆಸಿ...

ಶ್ರೀ ಡಿ. ದೇವರಾಜ ಅರಸ್.—ನಂಬೂದ್ರಿ ಪಾಡ್ ಸರಕಾರವನ್ನು ಉರುಳಿಸಿದ್ದು ನಾಯರ್ ಸೊಸೈಟಿಯವರು.

ಶ್ರೀ ಸಿ. ಬೈರೇಗೌಡ.—ನಾಯರ್ ಸೊಸೈಟಿ ಹಿಂದೆ ಯಾರು ಇದ್ದರು ಎನ್ನುವುದೆಲ್ಲಾ ಚೆನ್ನಾಗಿ ಗೊತ್ತಿದೆ. ಇಂಥಾ ಒಂದು ಘೋರ ಕೃತ್ಯವನ್ನು ಮಾಡಿದ ಪ್ರಧಾನ ಮಂತ್ರಿಯವರು ವಿಧಾನ ಸಭೆಗಳನ್ನು ಡಿಸಾಲ್ವ್ ಮಾಡಿಸಲಿಕ್ಕೆ ಕೆಲವು ಜನರು ಪ್ರೇರೇಪಣೆ ಮಾಡುತ್ತಿದ್ದಾರೆ ಎಂದು ಹೇಳುವುದರಲ್ಲಿ ಯಾವ ಅರ್ಥ ಇದೆ ಎಂಬುದು ನನಗೆ ಅರ್ಥವಾಗುತ್ತಾ ಇಲ್ಲ. ಕೇರಳದಲ್ಲಿ ಆಗಿದ್ದ ಸರಕಾರ ಬಂಡವಾಳ ಶಾಹಿಗಳಿಗೆ ರಕ್ಷಣೆ ಕೊಡಬೇಕೆಂದು ಏನು ಹೇಳಲಿಲ್ಲ ; ಅಲ್ಲಿ ಜಾತಿ—ಕೋಮುವಾರುಗಳ ಗಲಭೆ ಪ್ರೇರಣೆಯಿಂದ ಯಾವುದೂ ನಡೆಯಲಿಲ್ಲ. ಅವರು ಪ್ರಗತಿಪರವಾದ ಕಾನೂನುಗಳನ್ನು ತಂದರು ; ಭೂಸುಧಾರಣೆಯನ್ನು ಜಾರಿಗೆ ತಂದವರು ಅವರು. ವಿದ್ಯಾ ಸಂಸ್ಥೆಗಳಲ್ಲಿ ಹತೋಟಿ ಇರಬೇಕೆಂದು ಹೇಳಿದಾಗ, ಇಲ್ಲದಸಲ್ಲದ ಹಕೋಟಿತಂದು, ಆ ಸರಕಾರವನ್ನು ಕಿತ್ತು ಹಾಕಿದ ಜನ ಇವತ್ತಿನ ದಿವಸ ಪ್ರಜಾಪ್ರಭುತ್ವವನ್ನು ರಕ್ಷಿಸುತ್ತೇವೆ ಎನ್ನುವಂಥ ಸೋಗಿನ ಮೇಲೆ ತುರ್ತುಪರಿಸ್ಥಿತಿ ತಂದು, ಜನಗಳು ತಮ್ಮ ಕಷ್ಟ ಕಾರ್ಪಣ್ಯಗಳನ್ನು ಹೇಳುವುದಕ್ಕೂ ಕೂಡ ಅವಕಾಶ ಮಾಡಿಕೊಡದೆ ಇರುವಂಥ ಒಂದು ಪರಿಸ್ಥಿತಿಯನ್ನು ಈವತ್ತಿನ ದಿವಸ ಈ ದೇಶದಲ್ಲಿ ತಂದಿದ್ದಾರೆ,

ಇನ್ನು ರೀಆಕ್ಷನರಿ ಅಫಿಸಿಯಲ್ಸ್ ಇದ್ದಾರೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಆ ಅಫಿಸಿಯಲ್ಸ್ ಯಾರ ಕೈಕೆಳಗೆ ಇರುತ್ತಾರೆ ? ಆಡಳಿತದಲ್ಲಿರುವ ಸರಕಾರಗಳ ಕೈಕೆಳಗೇ ಇರುತ್ತಾರೆ, ಆಗ ಅವರನ್ನು ಬಲಿಹಾಕಲಿ, ಯಾರು ಕೈಯ್ಯಲ್ಲಿ ಕೆಲಸ ಮಾಡಲಿಕ್ಕೆ ಆಗದೆ ಇರುತ್ತಾರೆ, ಅಯೋಗ್ಯವಾಗಿ ಕೆಲಸ ಮಾಡುತ್ತಾರೆ, ಯಾರು ನೀತಿಯಲ್ಲಿ ಅನೀತಿಯುತವಾಗಿ ವರ್ತಿಸುತ್ತಾರೆ ಅಂಥವರನ್ನು ತಕ್ಷಣ ಶಿಕ್ಷೆಗೆ ಗುರಿಪಡಿಸುವ ಅಧಿಕಾರ ಆಡಳಿತ ಸರಕಾರಕ್ಕೆ ಇದೆ. ಮಾಡಬೇಕಾದ್ದು ಸರಕಾರ ಬಿ ಆದರೆ, ಅದನ್ನು ಮಾಡದೆ ಗರೀಬಿ ಹಠಾವೋ ಎಂದು ಘೋಷಣೆ ಹಾಕುತ್ತಾ, ತಮ್ಮ ತಮ್ಮಗಳ ಗರೀಬಿ ಹಠಾವ್ ಮಾಡಿಕೊಳ್ಳುವ ಕೆಲಸದಲ್ಲಿ ತೊಡಗಿ. ಬೇರೆಯವರ ಅಪರಾಧ ಅಪಚಾರವನ್ನು ಕಂಡುಹಿಡಿಯಲಿಕ್ಕೆ ಹೋಗುತ್ತಿದ್ದಾರೆ ಎಂದರೆ ನನಗೆ ಅರ್ಥವಾಗುವುದಿಲ್ಲ ಮಾನ್ಯ ಸಂಸದೀಯ ಸಚಿವರು ಈ ದೇಶದ ಆರ್ಥಿಕ ಪರಿಸ್ಥಿತಿಯ ದಿಕ್ಕನ್ನು ಬದಲಾವಣೆ ಮಾಡುವುದಕ್ಕಾಗಿ ಈ ಒಂದು ತುರ್ತುಪರಿಸ್ಥಿತಿ ಸಹಾಯವಾಗುತ್ತದೆ ಎನ್ನುವ ಮಾತನ್ನು ಹೇಳಿದರು. ಆ ರೀತಿ ಕಾರ್ಯಕ್ರಮಗಳನ್ನು ನಮ್ಮ ದೇಶದಲ್ಲಿ ತೆಗೆದುಕೊಳ್ಳುತ್ತಿದ್ದಾದರೆ, ಖಂಡಿತವಾಗಿ ನನ್ನ ಸಂಪೂರ್ಣವಾದ ಸಹಕಾರ ಉಂಟು. ಆದರೆ ನಮ್ಮ ಪ್ರಧಾನ ಮಂತ್ರಿಗಳು ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡುವುದಿಲ್ಲ ಎಂಬುದಾಗಿ ಸ್ಪಷ್ಟಪಡಿಸಿದ್ದಾರೆ. ಹಾಗಾದರೆ,ಯಾರನ್ನು ಬೆಳೆಸುವುದಕ್ಕೆ ತುರ್ತು ಪರಿಸ್ಥಿತಿ ತಂದಿರುವುದು ? ವೆಸ್ಟೆಡ್ ಇಂಟರೆಸ್ಟ್ ಮತ್ತು ಜನಸಾಮಾನ್ಯರ ಶೋಷಣೆ ಈ ಎರಡನ್ನೇ ಮೂಲವಾಗಿ ಇಟ್ಟುಕೊಂಡಿರುವವರು ಯಾರು ಇದ್ದಾರೆ, ಅವರನ್ನು ಇನ್ನೂ ಹೆಚ್ಚು ಮೇಲ್ಮಟ್ಟಕ್ಕೆ ಬೆಳೆಸುವುದಕ್ಕೆ ಈ ಒಂದು ತುರ್ತುಪರಿಸ್ಥಿತಿಯನ್ನು ತಂದಿದ್ದಾರೆ. ಆದುದರಿಂದ, ಇದನ್ನು ವಿರೋಧಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಭಾರತದ ಇತಿಹಾಸದಲ್ಲಿ ಕರಾಳಕಾಂಡ ಆರಂಭವಾಗಿದೆ ! ಪ್ರಜಾಪ್ರಭುತ್ವವಾದಿಗಳ ಹೃದಯದಲ್ಲಿ ಮೊದಲು ಪ್ರಜಾಪ್ರಭುತ್ವ ಸತ್ತು, ನಂತರ ಸರ್ವಾಧಿಕಾರಿಗಳ ಕೈಯ್ಯಲ್ಲಿ ಕೊಲೆಗೀಡಾಗಿದೆ ಎನ್ನುವ ಒಂದು ಮಾತಿದೆ ! ಈ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವವಾದಿಗಳು ಎಂದು ಹೇಳತಕ್ಕ ಜನ, ಯಾರು ಅಧಿಕಾರದ ಗದ್ದುಗೆಯಲ್ಲಿ ಕುಳಿತಿದ್ದಾರೆ ಅವರ ಹೃದಯದಲ್ಲಿ ಪ್ರಜಾಪ್ರಭುತ್ವ ಸತ್ತಿದೆ ? ಕೊಲ್ಲುವ ಸನ್ನಾಹದಲ್ಲಿ ಮುನ್ನಡೆದಿದೆ ; ಸರ್ವಾಧಿಕಾರಿ ತನ್ನ ಕರಾಳ ಕೈಗಳನ್ನು ಎತ್ತಿ ಹಿಡಿದು ನಿಂತಿದ್ದಾನೆ ಆ ಕೊಲೆಪಾತಕನ ಕೈ ಯಾರ ಯಾರ ಕೊರಳಿಗೆ ಬರುತ್ತದೆ ಎನ್ನುವ ಕಲ್ಪನೆಯನ್ನು ಮಾಡಲು ಅಸಾಧ್ಯ ಎಂದು ಮಾನ್ಯ ಡಾ|| ಲೋಹಿಯಾ ಅವರು ಹೇಳಿದ್ದರು.

ಹಾಗೆ ಇವೊತ್ತು ಬೆಳೆದು ಬಂದರೂ ಹೆಸರನ್ನು ಕೊಟ್ಟು, ರೀಆಕ್ಷನರಿ ಹೆಸರನ್ನು ಕೊಟ್ಟು, ನಾನಾ ಹೆಸರುಗಳನ್ನು ಕೊಟ್ಟು ವಿರೋಧ ಪಕ್ಷದ ಪ್ರಜಾಪ್ರಭುತ್ವ ವಾದಿಗಳನ್ನು ನಾವು ಜಪ್ಪಿಸಲು ಸಿದ್ಧರಾಗಿದ್ದೇವೆ. ಎಂಥೆಂಥವರನ್ನು ಸೆರೆಮನೆಗೆ ಕಳುಹಿಸಿದ್ದೀರಿ. ಯಾರು ಮಹಾತ್ಮಾಗಾಂಧೀಜಿಯವರ ಜೊತೆಯಲ್ಲಿ ನಿಂತು ರಾಷ್ಟ್ರದ ಸ್ವಾತಂತ್ರ್ಯಕ್ಕೋಸ್ಕರ ತಮ್ಮ ತನು ಮನ ಧನಗಳನ್ನು ಅರ್ಪಿಸಿ ಪ್ರಾಣಾರ್ಪಣೆ ಮಾಡಿದಂತ ಅಭಿನವ ಗಾಂಧಿ, ಅಭಿನವ ಬುದ್ಧ ಜಯಪ್ರಕಾಶ್ ನಾರಾಯಣ್ ಅವರನ್ನು ಸೆರೆಮನೆಗೆ ಕಳುಹಿಸಿದ್ದೀರಿ, ರಾಷ್ಟ್ರದ ಉಪಪ್ರಧಾನ ಮಂತ್ರಿಗಳಾಗಿದ್ದಂತ ಶ್ರೀ ಮೊರಾರ್ಜಿ ದೇಸಾಯಿಯವರನ್ನು ಕಳುಹಿಸಿದ್ದೀರಿ. ನೀವೇ ಅವರನ್ನು ಉಪಪ್ರಧಾನಮಂತ್ರಿಗಳನ್ನಾಗಿ ಮಾಡಿದ್ದವರು ಯಾರು ಯಾರು ಜೈಲಿನಲ್ಲಿದಾರೆಂಬುದನ್ನು We do not know, w o is injail. ಗೊತ್ತು ಮಾಡದೇ ಇರತಕ್ಕ ಪರಿಸ್ಥಿತಿಯನ್ನು ಉಂಟುಮಾಡಿದ್ದೀರಿ. ನಾನಾ ಪಕ್ಷದ ರಾಷ್ಟ್ರನಾಯಕರಾಗಿದ್ದಂತ ಮಧು ಲಿಮೆ ದಂಡವತಿ, ಸಮರ್ಗುಹ ಮುಂತಾದವರನ್ನು ಜೈಲಿನಲ್ಲಿ ಹಾಕಿದ್ದೀರಿ. ಕರ್ನಾಟಕ ರಾಜ್ಯದ ನಮ್ಮ ಸೋಷಿಯಲಿಸ್ಟ ಪಕ್ಷದ ಶ್ರೀ ಜಿ. ಹೆಚ್. ಪಾಟೀಲರನ್ನು ಶಿವಮೊಗ್ಗದಲ್ಲಿ ಜೈಲಿಗೆ ಹಾಕಿದ್ದೀರಿ, ನಮ್ಮ ನಾಯಕರಲ್ಲಿ ಒಬ್ಬರಾದ ಕಾಶೀನಾಥರಾವ್ ಅವರನ್ನು ಜೈಲಿನಲ್ಲಿ ಹಾಕಿದ್ದೀರಿ. ರಾಷ್ಟ್ರದಲ್ಲಿರತಕ್ಕ ಪ್ರಜಾಪ್ರಭುತ್ವವಾದಿಗಳು ಯಾರು ಇದ್ದಾರೆ, ಸಮಾಜವಾದಿಗಳು ಯಾರು ಇದ್ದಾರೆ ಅವರೆಲ್ಲರನ್ನೂ ಜೈಲಿನಲ್ಲಿ ಸೇರಿಸಿ ಅವರು ಕೊಳೆಯುವಂತೆ ಮಾಡಿ ಅವರ ಆಗುಹೋಗುಗಳನ್ನು ಯಾರಿಗೂ ತಿಳಿಯದಂತೆ ಮಾಡಿ ಕಾರಾಗೃಹ ಶಿಕ್ಷೆ ಕೊಟ್ಟದ್ದೀರಿ ಚರ್ಚಿಲ್, ಹಿಟ್ಲರ್, ಮುಸಲೋನಿ ಮುಂತಾದ ಸರ್ವಾಧಿಕಾರಿಗಳಿಗಿಂತ ತಾವು ಯಾವ ದೃಷ್ಟಿಯಲ್ಲಿ ಕಡಿಮೆ ಎಂದು ಕೇಳುತ್ತೇನೆ ? ಶ್ರೀ ಜಯಪ್ರಕಾಶ್ ನಾರಾಯಣರವರನ್ನು ಪ್ರಗತಿ ವಿರೋಧಿ ಎಂದು ಕರೆಯತಕ್ಕ ತಮ್ಮ ನಾಲಿಗೆಯಲ್ಲಿ ಎಂಥ ಶಬ್ದಗಳೂ ಬರಲಿಕ್ಕೆ ಸಾಧ್ಯ. ತಮಗೆ ಏನಾದರೂ ಅವರ ಇತಿಹಾಸ ಗೊತ್ತೇ ? ಅವರ ತ್ಯಾಗ ಗೊತ್ತೇ. ತಮಗ ಗೊತ್ತಿರುವುದು ಒಂದೆ; ಹೊಡಿ–ಹೊಡಿ ಬುರುಡೆ ಹೊಡಿ, ದುಡ್ಡು ಹೊಡಿ, ಇವೆರಡೇ ಗೊತ್ತಿರುವುದ. ಶ್ರೀ ಜಯಪ್ರಕಾಶ್ ನಾರಾಯಣ್‌ರವರ ಜೊತೆಯಲ್ಲಿ ಭುಜಕೊಟ್ಟು ಹೋರಾಡಿದ ಮತ್ತೊಂದು ಜನ ಇದ್ದಾರೆ. ಅವರಂತೆ ತ್ಯಾಗ ಮಾಡುವ ಜನ ಇವೊತ್ತು ಒಂದು ನಯಾಪೈಸದಷ್ಟು ಇಲ್ಲ. ಅಂಥವರನ್ನು ದಸ್ತಗಿರಿ ಮಾಡಿ ಒಳಗೆಇಟ್ಟದ್ದೀರಿ. ಆದರೆ ಅವರು ಅಂಥ ಬಂಧನಗಳಿಗೆ ಬೆದರುವವರಲ್ಲ. ಅಂಥ ಬ್ರಿಟೀಷರ ಕಾರಾಗೃಹದಲ್ಲಿ ಇದ್ದು ಹೊರಗೆ ಬಂದಂತ ಮಹಾನುಭಾವರನ್ನು ಇವೊತ್ತು ತಾವು ಬಂಧನ ಮಾಡಿದ್ದೀರಿ. ಯಾರು ಯಾರನ್ನು ದಸ್ತಗಿರಿ ಮಾಡಿ ಇಟ್ಟದ್ದೀರಿ. ರಾಷ್ಟ್ರಕ್ಕೋಸ್ಕರ ಸೇವೆ ಸಲ್ಲಿಸದಂತ ವಿರೋಧಿಗಳನ್ನು, ರಾಷ್ಟ್ರದ್ರೋಹಿಗಳನ್ನು ಅಂದ ಮಂಸ್ತಾನ ಯೂಸಫ್‌ಪಟೇಲ್‌ರಂಥವರು ನಿಮ್ಮಲ್ಲಿ ಜೈಲಿಗೆ ಹಾಕ ಬೇಕಾದವರು ಇದ್ದರೆ ಹಾಕಿ, ಅದನು ನಾನು ವಿರೋಧಿಸುವುದಿಲ್ಲ. ದೇಶಪ್ರೇಮಿಗಳು ಯಾರು ಯಾರು ಇದ್ದಾರೆ ಅಂಥವರ ಬಗ್ಗೆ ಕಳಕಳಿ ಇಲ್ಲ ಎಂದರೆ ರಾಷ ದಲ್ಲಿ ಪ್ರಾಮಾಣಿಕತೆ, ಭಕ್ತಿ ಇದೆಯೇ ಎಂದು ಕೇಳಬೇಕಾಗಿದೆ. ಇದೇ ರೀತಿ ಕಾಲ ಇರುವುದಿಲ್ಲ. ಹಿಂದೆ ನಾನು ವಿದ್ಯಾರ್ಥಿಯಾಗಿದ್ದಾಗ ಪ್ರೆಸ್‌ಗ್ಯಾಲರಿಯಲ್ಲಿ ಬಂದು ಕುಳಿತಿದ್ದೆ. ಆಗಿನ ಮಾಜಿ ನಾಯಕರಾದ ಶ್ರೀ ಎಸ್. ಶಿವಪ್ಪನವರು ವಿರೋಧಪಕ್ಷದಲ್ಲಿ ಕುಳಿತಿದ್ದಾಗ ಆಗಿನ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರಿಗೆ ನಾನು ಅಲ್ಲಿಗೆ ಬರಬೇಕು, ನೀವು ಇಲ್ಲಿಗೆ ಬರಬೇಕು ಎಂದು ಹೇಳಿದರು, ಆಗ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಅಲ್ಲೇ ಕುಳಿತು ಒಂದು ಮಾತು ಹೇಳಿದ್ದು ನನಗೆ ಗೊತ್ತಿದೆ. ಅದೇನೆಂದರೆ ನನ್ನ ಜೀವ ಇರುವ ತನಕ ಈ ಸ್ಥಾನ ಬಿಟ್ಟುಕೊಡುವುದಿಲ್ಲ. ಇಲ್ಲಿ ಅದನ್ನು ಕೇಳದೇ ಇರುವವರು ಇರಬಹುದು, ಆದರೆ ಅದು ಬದಲಾವಣೆ ಹೇಗೆ ಆಯಿತು.

ಶ್ರೀ ಡಿ. ದೇವರಾಜ ಅರಸ್.—ನನ್ನ ಜೀವ ಇರುವವರೆಗೆ ಬಿಡುವುದಿಲ್ಲವೆಂದು ಹೇಳಿರಲಿಲ್ಲ. ನೀವು ಈ ಕಡೆ ಬರುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದರು.

ಶ್ರೀ ಕೋಣಂದೂರು ಲಿಂಗಪ್ಪ.—ಅದು ಏನೇ ಇರಲಿ ಯಾರು ಶಾಶ್ವತವಾಗಿ ಅಧಿಕಾರ ಗದ್ದುಗೆಯಲ್ಲಿ ಕುಳಿತಿರುತ್ತೇವೆಂದು ತಿಳಿದುಕೊಂಡು ವಿರೋಧಿಗಳ ಮೇಲೆ ಗದಾಪ್ರಹಾರ ಮಾಡುತ್ತಾರೋ ಅವರು ಒಂದು ಮಾತನ್ನು ನೆನಪಿನಲ್ಲಿಟ್ಟುಕೊಳ್ಳಬೇಕು, ಕಾಲ ಬದಲಾಗುತ್ತದೆ: ಸ್ಥಾನ ಮಾನಗಳು ಬದಲಾಗುತ್ತವೆ. ಯಾವ ಯಾವ ನಿಯಮಾವಳಿಗಳನ್ನು ಈ ತುರ್ತು ಪರಿಸ್ಥಿತಿಯಲ್ಲಿ ಹಾಕಿದ್ದೀರೋ ಅವುಗಳ ಪಟ್ಟಿ ಇದೇ ಸೆಕ್ರೆಟರಿಯೇಟ್‌ನಲ್ಲಿ ಇರುತ್ತದೆ. ಅವುಗಳ ಜೊತೆಯಲ್ಲಿ ಇನ್ನೂ ಸೇರಿಸಿ ಮುಂದೆ ಕಾಲ ಬಂದಾಗ ನಿಮಗೂ ಕೂಡ ಅದೇ ಶಿಕ್ಷೆ ಲಭ್ಯ ಆದೀತು, ಕಠೋರವಾದ ಕಷ್ಟ ಅನುಭವಿಸುವ ಕಾಲ ಬಂದೀತು ಎಂಬ ಎಚ್ಚರಿಕೆಯನ್ನು ಅಧಿಕಾರ ಗದ್ದುಗೆಯಲ್ಲಿ ಇರುವವರಿಗೆ ಕೊಡಲಿಕ್ಕೆ ಅಪೇಕ್ಷೆಪಡುತ್ತೇನೆ. ತುರ್ತು ಪರಿಸ್ಥಿತಿ ತರುವುದಕ್ಕೆ ಏನು ಅಂಥ ಪ್ರಬಲ ಕಾರಣವಾಯಿತು, ಏತಕ್ಕೆ ತರಬೇಕಿತ್ತು ? ನಮ್ಮ ಮಾನ್ಯ ಸಂಸದೀಯ ಸಚಿವರು ಆರ್ಥಿಕ ಪರಿಸ್ಥಿತಿಯನ್ನು ಬದಲಾವಣೆ ಮಾಡುವ ಸಲುವಾಗಿ ತುರ್ತುಪರಿಸ್ಥಿತಿಯನ್ನು ತಂದಿದ್ದೇವೆಂದು ಹೇಳಿದರು. ನಿಮ್ಮನ್ನು ಯಾರು ಕೇಳಿದ್ದಾರೆ ನಿಮಗೆ ದೂತ ಬಹುಮತ ಇದೆ. ಲೋಕ ಸಭೆಯಲ್ಲಿ ೪೨೦ ಜನರಿದ್ದಾರೆ. ನಿಮಗೆಯಾರು ಅಡ್ಡಿ ಆತಂಕ ತಂದಿದ್ದರು? ಯಾರು ಎನ್ನುವ ಬಗ್ಗೆ ನೀವೇಪರೀಕ್ಷೆ ಮಾಡಿ ಮಾಡಬೇಕಾದ ಕೆಲಸ, ಮಾಡಲು ಆಗದೆ ಹಿಂದೇಟು ಹೊಡೆದು ಹೇಡಿಗಳಂತೆ ಕುಳಿತಿರುವ ನೀವು ಈ ಆರ್ಥಿಕ

ದಿಕ್ಕನ್ನು ಬದಲಾವಣೆ ಮಾಡಿ ತೋರಿಸುತ್ತಿದ್ದೀರಿ ೨೦.೨೧ ಎಂದು ಹೇಳಿದರೆ ಪ್ರಧಾನ ಮಂತ್ರಿಗಳು ಹೊಸದ ಯಾವುದು ಇದೆ, ಹಿಂದೆ ಹೇಳಿದ್ದೇ ಇರತಕ್ಕದ್ದು, ಹೊಸದು ಯಾವುದಾದರೂ ಇದೆಯೇ ? ಹಿಂದೆ ಬಡತನ ಓಡಿಸುವ ಘೋಷಣೆ ಮಾಡಿದಿರಿ, ಅದರಲ್ಲಿ ಹೇಳದೆ ಇರತಕ್ಕದ್ದು ಹೊಸದು ಏನಾದರೂ ಇದೆಯೆ, ಯಾವುದೂ ಇಲ್ಲ. ಯಾವ ಉದ್ದೇಶದಿಂದ ತುರ್ತು ಪರಿಸ್ಥಿತಿಯನ್ನು ತಂದಿದ್ದೀರಿ. ಇವಕ್ಕೆ ಒಂದೇ ಕಾರಣ; ನಾನು ಈ ಸಂದರ್ಭದಲ್ಲಿ ನಮ್ಮ ರಾಷ್ಟ್ರದ ನಾಯಕರನ್ನು ಅಭಿನಂದಿಸುತ್ತೇನೆ.

* * *

ಒಟ್ಟಿನಲ್ಲಿ ಪ್ರಧಾನಮಂತ್ರಿಗಳ ಸ್ಥಾನ ಭದ್ರವಾಯಿತು. ಯಾವ ಕುರ್ಚಿಗಳು ಅಲುಗಾಡಿದವೋ ಆಗ ತುರ್ತು ಪರಿಸ್ಥಿತಿಯನ್ನ ದೇಶದಲ್ಲಿ ಮುಂದುವರಿಸಿದರು.

ಜೊತೆಗೆ ಈ ತುರ್ತು ಪರಿಸ್ಥಿತಿಗೆ ವಿರೋಧಪಕ್ಷದವರು ಕಾರಣವಲ್ಲ. ಇದಕ್ಕೆ ಬಹಳ ಮುಖ್ಯವಾದ ಕಾರಣವೆಂದರೆ ಈ ಕಾಂಗ್ರೆಸ್ ಪಕ್ಷ. ಈ ಕಾಂಗ್ರೆಸ್ ಪಕ್ಷದಲ್ಲಿ ಅವರಲ್ಲಿಯೇ ಇರತಕ್ಕ ಜಗಳ ಏನಿದೆ ಇದರಿಂದಾಗಿ ಅಪಾಯ ಬಂದಿದೆ. ಪ್ರಧಾನ ಮಂತ್ರಿಗಳು ತಮ್ಮ ಸ್ಥಾನ ಭದ್ರವಾಗಿರಬೇಕೆನ್ನುವ ಉದ್ದೇಶದಿಂದ ಈ ೨೦ ಅಂಶಗಳ ಸೂತ್ರವನ್ನು ತಂದಿದ್ದಾರೆಯೇ ಹೊರತು ಬೇರೆ ಯಾವುದೂ ಇಲ್ಲ ಒಬ್ಬ ವ್ಯಕ್ತಿಯ ಅಧಿಕಾರವನ್ನು ಉಳಿಸುವ ಸಲುವಾಗಿ ಅವರ ಪಕ್ಷದ ಎಲ್ಲರೂ ಕೂಡ ಅವರಿಗೆ ಬೆಂಬಲವನ್ನು ಕೊಡುವುದು ಅತ್ಯಂತ ಆತ್ಮಘಾತುಕ ವಿಷಯವೆಂದು ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಈ ಸಮಯದಲ್ಲಿ ಸನ್ಮಾನ್ಯ ಸದಸ್ಯರೂ ಹಾಗೂ ಮಿತ್ರರಾದಂಥ ಪಾಟೀಲ್‌ರವರು ರೈಟ್-ರಿಯಾಕ್ಷನರೀಸ್ ಎಂದು ಹೇಳಿ.

SRI V. N. PATIL.—He will have to withdraw such silly remarks, however much the word silly might hurt him.

MR. DEPUTY SPEAKER.—It is the sacred duty of every Hon. Member to be kind and charitable to other Hon. Members He should not hurt the feelings of other Hon. Members. That Ho.n Member has much respect as this Hon. Member has.

SRI V. N. PATIL.—It must be expunged. Otherwise that word 'Silly' must be there.

MR. DEPUTY SPEAKER.—Both will be there.

(Interruption)

* *

MR. DEPUTY SPEAKER.—It will not go on record.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ವಿ.ಎನ್. ಪಾಟೀಲ್‌ರವರು ಮಾತನಾಡುವಾಗ ಕೆಲವು ಒಳ್ಳೆಯ ಮಾತುಗಳನ್ನಾಡಿದ್ದಾರೆ. ಹಾಗೆಯೇ ಸರ್ಕಾರಕ್ಕೂ ಕೂಡ ಕೆಲವು ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ ನಾನು ತಮಗೆ ಒಂದು ಮಾತನ್ನು ಮಾತ್ರ ಹೇಳಬಯಸುತ್ತೇನೆ. ಅದೇನೆಂದರೆ ಅವರು ತಮಗೆ ತಮ್ಮ ಬೆಂಬಲವನ್ನು ಕೊಟ್ಟಿರುತ್ತಾರೆ ಎಂಬ ಉದ್ದೇಶದಿಂದ ಆ ಒಂದು ಕಾರಣದಿಂದ ಅವರಿಗೆ ತಾವು ಪ್ರೋತ್ಸಾಹವನ್ನು ಕೊಡುತ್ತಿದ್ದೀರಿ. ಇವತ್ತು ಜಯಪ್ರಕಾಶ್‌ನಾರಾಯಣ್‌ರವರಾಗಲಿ, ಅಥವಾ ಇವತ್ತು ದಸ್ತಗಿರಿಯಾಗಿರತಕ್ಕ, ದೇಶದ ಸ್ವಾತಂತ್ರ್ಯಕ್ಕೋಸ್ಕರವಾಗಿ ಯಾರು ಯಾರು ತ್ಯಾಗಮಾಡಿ ಜೈಲಿನಲ್ಲಿದ್ದಾರೆ ಅಂಥವರಿಗೆ ಬುದ್ಧಿಯನ್ನು ಹೇಳುವುದಕ್ಕೆ ಉಪನ್ಯಾಸ ಮಾಡುವುದಕ್ಕೆ ನೀತಿ ಬೋಧೆ ಮಾಡುವುದಕ್ಕೆ ಈ ಭಾರತದ ಕಮ್ಯುನಿಸ್ಟರಿಗೆ ಯಾವ ಒಂದು ನೈತಿಕವಾದ ಹಕ್ಕೂ ಇಲ್ಲವೆಂದು ಘಂಟಾಘೋಷವಾಗಿ ಹೇಳಬಯಸುತ್ತೇನೆ.

*** Matter expunged as ordered by the chair

** Matter not recorded as ordered by the Chair

MR. DEPUTY SPEAKER.—I was on my legs. I requested the Hon. Member to speak with some restraint. I did not want to expunge his speech as such. Nothing would be lost if he speaks in a restrained manner. Harsh words will not break bones. If he speaks in a dignified way, it will stay. Upanishads written thousands of years back have still stood the test of time.

ಶ್ರೀ ಕೋಣಂದೂರು ಲಿಂಗಪ್ಪ—ಸನ್ಮಾನ್ಯ ಅಧ್ಯಕ್ಷರೇ, ಭಾರತದ ಸ್ವಾತಂತ್ರ್ಯಕ್ಕಾಗಿ ಮಹಾತ್ಮಾ ಗಾಂಧೀಜಿಯವರಿಗೆ ಯಾರು ಅಡ್ಡಗಾಲನ್ನು ಕೊಟ್ಟು ಮೌಂಟ್ ಬೇಟನ್‌ನ ಬಗಲು ಪಕ್ಷಗಳಾಗಿದ್ದರೋ ಅವರು ಇವತ್ತು ಬುದ್ಧಿವಾದವನ್ನು ನೀತಿಯನ್ನು ಹೇಳಬೇಕಾದ ಅವಶ್ಯಕತೆ ಇಲ್ಲ ಎಂಬಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಯಾರ ಸಲಹೆ, ಸೂಚನೆಗಳ ಪ್ರಕಾರ ರಾಷ್ಟ್ರದ ಪ್ರಧಾನಿಗಳು ಹೆಜ್ಜೆ ಇಡುತ್ತಾರೋ ಅವರು ಅಪಾಯದ ಹಾದಿಯಲ್ಲಿ ಹೋಗುತ್ತಾ ಇದ್ದಾರೆಂದು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ವಿರೋಧ ಪಕ್ಷದವರನ್ನು ಸೆರೆಮನೆಯಲ್ಲಿಟ್ಟು ತಾವು ಆಡಿದ್ದೇ ಆಡಿ, ಮಾಡಿದ್ದೇಮಾಡಿ, ಸಾರ್ವಜನಿಕ ಸಭೆಗಳಲ್ಲಿ ವಿರೋಧ ಪಕ್ಷದವರುಮಾತನಾಡುವುದಕ್ಕೂ ಕೂಡ ಆಗದ ರೀತಿಯಲ್ಲಿ ಮಾಡಿಟ್ಟಿದ್ದೀರಿ. ತಾವು ಪ್ರಜಾ ಪ್ರಭುತ್ವವನ್ನು ಹತಮಾಡಿ ಸರ್ವಾಧಿಕಾರತ್ವದ ಕಡೆ ಹೆಜ್ಜೆ ಇಡುತ್ತಿದ್ದೀರೆಂದು ಹೇಳಬಯಸುತ್ತೇವೆ. ಇವತ್ತು ಒಂದು ಮಾತನ್ನು ಹೇಳುತ್ತೇನೆ. ನಿಮ್ಮ ಪಕ್ಷದವರೇ, ಇಲ್ಲಿ ಕುಳಿತಿರುವವರೇ ನಿಮ್ಮನ್ನು ಮಾನ್ಯ ಕೃಷ್ಣರವರನ್ನುದೂಷಿಸುತ್ತಾರೆ, ವಿರೋಧಿಸುತ್ತಾರೆ. ಸರ್ವಾಧಿಕಾರಿಗಳು ಯಾವತ್ತೂ ಕೂಡ ತಮ್ಮ ವಿರೋಧಿಗಳನ್ನು, ಬಿಡುವುದಿಲ್ಲ ಎಂಬುದನ್ನು ಹೇಳಬಯಸುತ್ತೇನೆ. ನಾಳೆ ಅವರನ್ನು ಜೈಲಿಗೂ ಕೂಡ ಕಳುಹಿಸುತ್ತಾರೆ,

MR. DEPUTY SPEAKER—I have been listening to the Hon- Members Some time back when he referred to so many names I said the same thing. I can understand non-contriversial persons are praised to a certain extent. But it will be objectionable when people who have been contreversial are praied because there will be pr tests Therefore, it is not correct to refer to the name of persons who are not here and especially about those who have become of late controversial.

ಶ್ರೀ ಕೋಣಂದೂರು ಲಿಂಗಪ್ಪ.—ಆದುದರಿಂದ ಮಾನ್ಯ ಅಧ್ಯಕ್ಷರೆ, ಸರ್ವಾಧಿಕಾರಿಗಳು ಯಾವತ್ತೂ ಕೂಡ ತಮ್ಮ ಎಡ, ಬಲ ಕೈಗಳನ್ನು ಮಾತ್ರವೇ ಅಲ್ಲ ತಮ್ಮ ನೆರಳನ್ನೂ ಕೂಡ ಅವರು ನಂಬುವುದಿಲ್ಲ, ಎಂಬುದನ್ನು ಚೆನ್ನಾಗಿ ನೆನಪಿನಲ್ಲಿಟ್ಟು ಕೊಳ್ಳಬೇಕು. ಆದುದರಿಂದ ಇವತ್ತು ಅನ್‌ಕ್ರೌಂಡ್ ಡಿಕ್ಟೇಟರ್ ಶ್ರೀಮತಿ ಇಂದಿರಾಗಾಂಧಿಯವರು ತಮ್ಮ ನೆರಳನ್ನೆ ನಂಬದೇ ಇರತಕ್ಕವರಾಗಿದ್ದಾರೆ. ಇದಕ್ಕೆ ಒಂದು ಸಾಕ್ಷಿಯನ್ನು ಹೇಳಬೇಕೆಂದರೆ ರಷ್ಯಾದಲ್ಲಿ ಸ್ಟ್ಯಾಲಿನ್‌ರವರು ಸರ್ವಾಧಿಕಾರಿಯಾಗಿದ್ದಾಗ ಅವರ ವಿರೋಧಿಯಾದ ಟ್ರೌಟಸ್ಕಿಯನ್ನು ೧೦ ಸಾವಿರ ಮೈಲಿಗಳ ಆಚೆಗೆ ತೆಗೆದುಕೊಂಡು ಹೋಗಿ ಕೊಲ್ಲಿಸಲಾಯಿತು.

SRI V. N. PATIL.—Co mmunism does not survive under his mercy

MR. DEPUTY SPEAKER.—Let us be wise and secure within the ambit of our own knowledge and understanding and not beyond. There are certain things which are controversial or which have become controversial. Why say thing with an assuming power of authority and without having facts as our hands?

4-30 P.M.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ......

SRI V. N. PATIL.—I seek your permission to intervene.

MR. DEPUTY SPEAKER.—The Rules of Procedure are well-known to the hon. Members. I can't permit. No hon. Member could interrupt the other hon. Member except on a point of order.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಈ ರಾಷ್ಟ್ರವನ್ನು ಸರ್ವಾಧಿಕಾರಿ ಕೈಯಲ್ಲಿ ತೆಗೆದುಕೊಂಡು ಹೋಗಿ ಕೊಡತಕ್ಕ ಜನ ಈ ರಾಷ್ಟ್ರದಲ್ಲಿ ಇದ್ದಾರೆ. ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾದ ದೇವಕಾಂತ ಬರೂವರವರು ಒಂದು ವಾಕ್ಯವನ್ನು ಹೇಳಿದ್ದಾರೆ. ಅದು ಏನು ಎಂದರೆ, "ಇಂಡಿಯಾದೇಶವೇ ಇಂದಿರಾ, ಇಂದಿರಾನೇ ಇಂಡಿಯಾ" ಎಂದು, ಇಂದಿರಾ ಗಾಂಧಿಯವರಿಗೆ ಸಂಪೂರ್ಣ ಸರ್ವಾಧಿಕಾರ ಕೊಡತಕ್ಕ......

MR. DEPUTY SPEAKER.—The hon. Member need not refer to all those words. They have not come under the signatures of so and so to take them as authentic. The hon. Member should not refer to such things unless he has authenticity thereto.

ಶ್ರೀ ಕೋಣಂದೂರು ಲಿಂಗಪ್ಪ.—20 ಅಂಶಗಳ ಆರ್ಥಿಕ ಕಾರ್ಯಕ್ರಮದ ಬಗ್ಗೆ ಒಳ್ಳೆಯದು ಹೇಳುತ್ತಾರೆ, ಎಲ್ಲೆಲ್ಲಿ ? ಸಿ.ಐ.ಎ. ಬಗ್ಗೆ ಹೇಳುತ್ತಾರೆ, ನಾನು ಒಂದು ಪ್ರಶ್ನೆ ಕೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಹೋದ ತಿಂಗಳು 21ನೇ ತಾರೀಖಿಗೆ ನಮ್ಮ ಕಾಲ ಮುಗಿದು ಹೋಗಿದೆ. ಅಮೇರಿಕಾಕ್ಕೂ ನಮಗೂ ಇರತಕ್ಕ ರಾಯ ಭಾರ ಬಾಂಧವ್ಯ ಏನು ಇದೆ, ಅದನ್ನು ತೊಡೆದುಹಾಕುವುದಕ್ಕೆ ಏನು ತೊಂದರೆ ಇದೆ, ಅದನ್ನು ಮಾಡಿ. ಸಿ.ಐ.ಎ. ಅವರು, ಚೀನಾದವರು, ಪಾಕಿಸ್ತಾನದವರು ನಮಗೆ ಏನು ಅಡ್ಡಿ ಆತಂಕಗಳನ್ನು ತಂದೊಡ್ಡುತ್ತಿದ್ದಾರೆ, ಇವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಲಿ, ಶಿಕ್ಷೆಗೆ ಗುರಿಮಾಡಿ ಮರಣದಂಡನೆ ವಿಧಿಸಲಿ. ಅದನ್ನು ಬಿಟ್ಟು, ಪ್ರಾಮಾಣಿಕರಾದ ಸಮಾಜವಾದಿಗಳನ್ನು, ಪ್ರಜಾಪ್ರಭುತ್ವವಾದಿಗಳನ್ನು ಸೆರೆವಾಸಕ್ಕೆ ಕಳುಹಿಸತಕ್ಕ ಈ ಪ್ರಚಾರ ಏನು ಇದೆ, ಅದು ನಾಳೆ ನಿಮ್ಮ ಕೊರಳಿಗೆ ಬರುತ್ತೆ ಎನ್ನತಕ್ಕ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ನನ್ನ ಗೆಳೆಯರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ, ಡಾಕ್ಟರ್ ಲೋಹಿಯಾರವರು ಹೇಳಿದಂಥ ಒಂದು ಮಾತನ್ನು ಹೇಳಿದರು. ಆಕಾಲಿಕ ಚಂಡಿ, ಚಿನ್ನ ಮಸ್ತಕ ರಕ್ತ ಪಿಪಾಸಿಣಿ ಹಾಗೆ ಇವರು ಅತ್ಯಾಚಾರ ಪೀಠವನ್ನು ಅಲಂಕರಿಸಿಕೊಳ್ಳುತ್ತಿದ್ದಾರೆ. ನಿಮಗೂ ಕೂಡ ನಾಳೆ ಇದೇಗತಿ ಆಗುತ್ತದೆ. ಹುಲಿಗೆ ರಕ್ತದ ರುಚಿ ಸಿಕ್ಕಿದ ಮೇಲೆ, ಎಲ್ಲರ ರಕ್ತದ ರುಚಿಯೂ ಬೇಕಾಗುತ್ತದೆ: ನಿಮ್ಮ ರಕ್ತದ ರುಚಿಯೂ ಬೇಕಾಗುತ್ತದೆ. ಆಬಗ್ಗೆ ಎಚ್ಚರದಿಂದ ಇರಬೇಕೆಂದು ಹೇಳಿ, ಕಡೆಯದಾಗಿ ಎರಡು ವಾಕ್ಯಗಳನ್ನು ಓದಲಿಕ್ಕೆ ಅಪೇಕ್ಷೆ ಪಡುತ್ತೇನೆ.

> "ತೆರೆಬಿದ್ದರೂ ರಂಗಬಿಡದ ಚಿರಯುವಕ"
> ಅಡಿಗರಾಡಿದಮಾತು, ಹಸಿ ಹಸಿ ಇಂದು, ಎಂದು
> ಸುರೇಂದ್ರನ ಒಡ್ಡೋಲಗ ಜಗಜ್ಜಾಹೀರು !
> ಕಪಾಲಮುಸುಕಿನ ಗಜೇಂದ್ರ ಮೋಕ್ಷದ ಮೊರೆ,
> ಕರಾಳ ಕಡಲಿನ ತಿಮಿಂಗಿಲ ಜಾತ್ರೆ...
> "ಕುದುರೆಗಿಂತ ಲದ್ದಿ ಬಿರುಸು"

ಓಟ,

> ನಾಗಾಲೋಟ,
> ಗುರಿ ಇಲ್ಲದ ಚೆಲ್ಲಾಟ,
> ವೇಗಕ್ಕೆ, ತಲತಿರುಗಿನ ಆವೇಗಕ್ಕೆ
> ಎಲಾ ತಿರುವು ಮುರುವು—
> ಶಾಪಗ್ರಸ್ತ ಇಂದ್ರ ಆಗ,
> ನಾಯಿನರಿಗಳ ಪಾಲು.

ಇಂದ್ರಲೋಕದ ಒಳಗೆ

> ಚಂದ್ರಬಿಂಬದ ತಾರೆ !
> ಉಳಿವೆನೋ, ಅಳಿವೆನೋ
> ಗಂಟೆ ಗಂಟೆಗೂ ಒಳಗುದಿಯ ಬೇಗೆ.

ಗಂಗಾತಟದಲಿ ಶಿವಲೀಲೆ

> ಭಸ್ಮಾಸುರನದು ರಕ್ಕಸಲೀಲೆ
> ಮನ ಮನದೊಳು ಮೋಹಿನಿ ಮೊರೆ
> ಜ್ವಾಲಾಮುಖಿ—ವಸುಂಧರೆ

ವಾಲಿ— ಸುಗ್ರೀವರ ಆಸರೆ
ಪಕ್ಕಪಕ್ಕನೆ ನೆಕ್ಕನಲ್ಲಿ, ರಾಮು—
ಯಶವಂತನಾರೆಂದು ಸವಾಲು ?
ಥೂ, ಇದು ಮೋಸ, ವಂಚನೆ,
ದ್ರೋಹ ಚಿಂತನೆ—

ಮಲ್‌ಹತ ಮಹಾರೋಗದ ಮೇರು—
ನೇರವಾಲ್ಲದೆ ಸುರುಳಿಯಾಗಿ ಎಂದೂ
ಸುತ್ತಿಕೊಂಡದ್ದು ಸತ್ಯ.

"ನಾಯಿಯ ಬಾಲ ಎಂದೂ ಡೊಂಕೆ"
ಕತ್ತರಿಸಿದರೆ ನೇರ,
ಆಗ ಮೋಟುಬಾಲದ ಘೋರ
ಹತ್ಯೆಯೋ, ಆತ್ಮಹತ್ಯೆಯೋ
ಕೊನೆಗಂಡ ವಾಲಿ ನಿಜ

ಸುಗ್ರೀವ ಸೀತಾರಾಮರ ಶರಣಾಗತ—

SRI B.B. SAYANAK.—Mr. Deputy Speaker Sir, I rise to oppose the motion moved by the Hon. Minister for Parlimentary Affairs. There is the rules of procedure and we are guided by that. I fail to understand the necesdry to suspend some of the rules pertaining to questions, call attention notices etc. I know the Maharashtra Government has also called for an emergency session. But they have not suspended any rules pertaining to question hour or call attention notices. But here the Government has come forward with a motion to suspend the rules. I don't know why ? There is emergency in Centre and they wanted to pass the Emergency Bill. But here we have to semple ratify the amendment of the Consititution. When such is the case where was the necessity to suspend the rules of procedure and conduct of business of this House ? I am not against he Twenty point programme announced by the prime Minister. But the implementation or execution of it is very necessary. The Government of India and all the State Governments have been saying that the Opposition Leaders or the Opposition Parties were exploiting the situation. But now I want to say that it is the Police Department which is exploiting the situation under the guise of emergency. The emergency is a grazing ground for the police department ; they are calling on the shop-keepers they are collecting thousands and lakhs of rupees in the name of emergency ; I want to know what action the Government of Karnataka is taking against them ?

Then another thing is the Taluka Boards have constructed some houses for poor people. Most of those houses have collapsed during the rainy season. What action the Government has taken against the B.D. Os who are responsible for construction of these buildings ? When there is the emergency six Ministers of Karnataka including Chief Minister have gone to Belgaum to attend the marriage ceremony of the daughter of B. Shankaranand Central Minister. What was the necessity for this ? Is this emergency ? You are spending the money of poor people by attending such marriage ceremony.

SRI B. B. SAYANAK.—For the marriage of the son of the Prime Minister, she is not going to call anybody. But you want to go for marriage ceremony, at the time of emergency. What has happended to your 20 point programme ? Are you strictly following the programme. You must bear in mi d that you will have to follow strictly the economy measures. You must keep aside the marriage functions, and other fuctions. You must pay your attention to the needs of the public and to the poor people in particular In this emergency our voice of the Opposition as also the voice of Leaders is curbed. There is a shortage of Marathi teachers in the primary schools in border area for last three years. I had brought this to the notice of the Education Minister, and also the Governor of Karnataka, some of the Schools in the border areas, have closed down for want of teachers. My people cannot agitate for this because of this emergency.

There is water scarcity in Belgaum City. About 45 lakhs gallons of water is required every day in Belgaum City. The Government is supplying only 27 lakhs gallons to this City. There is a shortage of 18 lakhs gallons every day. When there is plenty of rain in Belgaum, I do not understand why there is shortage. There is acute shortage of water in Belgaum City. The people are suffer ng a ot on account of this sho tage Nobody is caring for this dire necessity of the people. I have approached the Municipal Commissioner, and the Divisional Commissioner. They say you can go and approach the Minister. If I approach Sri Naiker Minister for nunicipliaties he will say I will transfer that Administrator. But what happens ? He is not going to transfer him. But we have no voice to speak anything more because of this emergency. This emergency will never solve the problems of the poor people. The Government is saying that prices are coming down. To the extent of 25%. If we go to shops to buy anything you will understand to what extent the prices have gone up. The prices are increasing. I request the Deputy Commissioner and the Divisional Commissioner to call a meeting of the Shop-keepers, Officers concerned and the leaders of the area, they are not calling for a meeting. This situation has given ample opportunity to P lice Office-s to coll ct money in the name of emergency. These things are happening. When that is the position how are you going to solve the problem of garibi batao ? How are you going to eradicate the poverty ? Somebody has said that J P. is a re-actionary or anti actioned. I am not favourable to J.P.'s agitation. But I can say that J.P. is a great national leader. When we were under Briti h Rule, he had fought for nations independence and he had slaked his life for the nation Whatever be the views of J.P's at present, he is a great man and not a reactionarpv or artinationed. With these word I conalude my speech. I thank you.

† ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ವ್ಯವಹಾರ ಸಚಿವರು ಈ ಈ ಸದನದ ಒಪ್ಪಿಗೆಗಾಗಿ ಒಂದು ನಿರ್ಣಯವನ್ನು ಮಾಡಿದ್ದಾರೆ. ಈ ನಿರ್ಣಯದ ಪ್ರಕಾರ ಖಾಸಗೀ ಕಾರ್ಯಕಲಾಪಗಳು ಯಾವ ಈ ಸದನದ ನಿಯಮಗಳ ಪ್ರಕಾರ ನಡೆಯಬೇಕಾಗಿತ್ತೋ ಹಕ್ಕುಗಳ ಚಲಾವಣೆ ಆಗಬೇಕಾಗಿತ್ತೋ ಅದನ್ನು ಈ ನಿರ್ಣಯವನ್ನು ಸದನ ಒಪ್ಪಿದರೆ ಅದಷ್ಟೂ ಮೊಟಕಾಗುತ್ತವೆ ಎಂಬುದು ಈ ನಿರ್ಣಯದ ಮೂಲ ಉದ್ದೇಶ. ನನಗೆ ಸಿಕ್ಕಿರತಕ್ಕ ಕಾಲದಲ್ಲೇ ನಾನು ಅದನ್ನು ಪಟ್ಟಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಅದು ಅಸಾಧ್ಯವಾದುದು. ನಾವು ಯಾವ ನಿಲುವಳಿ ಸೂಚನೆಯನ್ನು ತರುತ್ತಿದ್ದೆವೋ, ಯಾವ ಹಕ್ಕುಬಾಧ್ಯತೆಯ ನಿರ್ಣಯವನ್ನು ಮಂಡನೆ ಮಾಡುತ್ತಿದ್ದೆವೋ ಯಾವ ಪ್ರಶ್ನೆಯನ್ನು ಸರ್ಕಾರದ ಮುಂದೆ ಇಟ್ಟು ಈ ಸದನದಲ್ಲಿ ಉತ್ತರವನ್ನು ಪಡೆಯುತ್ತಿದ್ದೆವೋ ಅಥವಾ ನಿಯಮ ೩೭೭ರ ಪ್ರಕಾರ ಏನೇನು ವಿಷಯಗಳನ್ನು ನಾವು ಸಭೆಯ ಮುಂದೆ ಇಡುತ್ತಿದ್ದೆವೋ ಅವುಗಳನ್ನು ದೊಡ್ಡ ಪಟ್ಟಿ ಮಾಡುವುದಕ್ಕೆ ಹೋದರೆ ನನಗೆ ಕಷ್ಟವಾಗುತ್ತದೆ ಅದು ಅಸಾಧ್ಯವಾದ ಮಾತು ಕೂಡ ಹೌದು, ಮಾನ್ಯ ಸದಸ್ಯರಾದ ಶ್ರೀ ಸಯನಕ ಅವರು ಕುಡಿಯುವ ನೀರಿನ ಪ್ರಶ್ನೆ ಹೇಳಿದರು, ಶಾಲೆಯ ಬಗ್ಗೆ ಪ್ರಶ್ನೆ ಹೇಳಿದರು. ಇದನ್ನು ಮಾಡಿಕೊಳ್ಳಲಿಲ್ಲ ಎಂದು ಹೇಳುವುದಕ್ಕೆ ಈ ನಿರ್ಣಯವನ್ನು ಒಪ್ಪಿದರೆ ಹಕ್ಕು ಬರುವುದಿಲ್ಲ. ಅನ್ಯಾಯಗಳ ಬಗ್ಗೆ ನಾವು ಈ ಸದನದಲ್ಲಿ ಪ್ರಸ್ತಾಪ ಮಾಡುವ ಹಕ್ಕು ನಮಗಿದೆ. ಈ ನಿರ್ಣಯ ಇನ್ನೂ ಅನುಮೋದನೆ ಆಗಲಿಲ್ಲ. ನಮಗೆ ಈಗಲೂ ಹಕ್ಕು ಉಂಟು. ಈ ನಿರ್ಣಯವನ್ನು ಒಪ್ಪಿದರೆ ಈ ಹಕ್ಕುಗಳ ಮೊಟಕಾಗುತ್ತದೆಂದು ಇದರ ಒಟ್ಟಾರೆ ಅಭಿಪ್ರಾಯವೆಂದು ಭಾವಿಸುತ್ತೇನೆ. ಇಲ್ಲಿ ಮಾನ್ಯ ಸಚಿವರೂ ಕೂಡ ಈ ನಿರ್ಣಯವನ್ನು ಮಂಡಿಸ ತಕ್ಕಂಥ ಕಾಲದಲ್ಲಿ ಇದರ ಬಗ್ಗೆ ವ್ಯಾಖ್ಯಾನ ಹೇಳಿದರು. ಈ ಕೇಂದ್ರ ಸರ್ಕಾರದ ೨೦ ಅಂಶಗಳ ಕಾರ್ಯ ಕ್ರಮ ಏನಿದೆ ಈ ಕಾರ್ಯಕ್ರಮವನ್ನು ಜಾರಿಗೆ ಕೊಡಬೇಕು, ಅದಕ್ಕೋಸ್ಕರವಾಗಿ ಜೊತೆಗೆ this session is in the nature of emergency ಅನ್ನತಕ್ಕಂಥ ಪದಗಳನ್ನು ಈ ನಿರ್ಣಯದಲ್ಲಿ ಪ್ರಯೋಗ ಮಾಡಿದ್ದಾರೆ. ಆದ್ದರಿಂದ ಈ ೨೦ ಅಂಶಗಳ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ, ಸರ್ಕಾರಿ ಕಲಾಪಗಳನ್ನು ಮಾತ್ರ ಮಾಡಿದರೆ ಸಾಧ್ಯವಾಗುತ್ತದೆಂದು ಅವರ ಮಾತಿನ ಅರ್ಥ. ನಾನು ಸ್ಪಷ್ಟಪಡಿಸುವುದು ಏನೆಂದರೆ ನಾವು ಖಾಸಗೀ ಕಾರ್ಯಕಲಾಪಗಳನ್ನು ಉದಾಹರಣೆಗೆ ವಾರದ ಕೊನೆಯಲ್ಲಿ ಶನಿವಾರವನ್ನು ಖಾಸಗೀ ಕಾರ್ಯಕಲಾಪಗಳಿಗೆ ಮೀಸಲಾಗಿ ಇಡುತ್ತಿದ್ದೇವು. ಹಾಗೆಯೇ ಬೇರೆ ವಿಷಯಗಳಿಗೂ ಕೂಡ ಇಡುತ್ತಿದ್ದೇವು. ಈ ಕಲಾಪಗಳನ್ನು ಈಗ ನಾವು ತರುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಈ ನಿರ್ಣಯವನ್ನು ಒಪ್ಪಿದರೆ ಇದು ಮೊಟಕಾಗುತ್ತದೆ. ಈ ವಿಷಯವನ್ನು ನಾನು ವಿತರ್ಕ ಪ್ರಸ್ತಾಪ ಮಾಡುತ್ತೇನೆಂದರೆ ಇವತ್ತು ಈ ಹಕ್ಕು ಪ್ರತಿಯೊಬ್ಬ ಪ್ರಜೆಗೂ ರಾಜ್ಯಾಂಗಬದ್ಧವಾಗಿ ಇರಬೇಕಾದಂಥ ಹಕ್ಕು. ನಮ್ಮ ಹಕ್ಕನ್ನು ಚಲಾವಣೆ ಮಾಡತಕ್ಕಂಥ ಕಾಲದಲ್ಲಿ ಯಾರೂ ಅಡ್ಡಿ ಬರುವುದಕ್ಕೆ ಸಾಧ್ಯವಿಲ್ಲವೆಂಬುದು ಪ್ರಜಾಪ್ರಭುತ್ವದ ಲಕ್ಷಣ. ಈ ಪ್ರಜಾಪ್ರಭುತ್ವ ಉಳಿಯಬೇಕು ಎನ್ನುವುದಾದರೆ ಕೊನೆಯಪಕ್ಷ ದೇಶದಲ್ಲಿ ಇರುವ ಪ್ರತಿಯೊಬ್ಬ ಪ್ರಜೆಗೂ ಕೂಡ ಸಮಾನವಾದ ಅವಕಾಶ ಮತ್ತು ಮೂಲ ಭೂತವಾದ ಹಕ್ಕುಗಳು ಉಳಿಯಬೇಕು. ಜನತೆಯ ಪ್ರತಿನಿಧಿಗಳಾಗಿರತಕ್ಕ ನಾವು ಜನತೆಯ ಆಶೋತ್ತರ ಗಳ ಬಗ್ಗೆ ವಿಚಾರ ಮಾಡುವ ಕಾಲದಲ್ಲಿ ಅವರ ಕಷ್ಟಕೋಟಲೆಗಳ ಬಗ್ಗೆ ವಿಚಾರ ಮಾಡುವ ಕಾಲದಲ್ಲಿ ನಮಗಿರತಕ್ಕ ಹಕ್ಕಿಗೋಸ್ಕರ ಈ ಕಾರ್ಯಕಲಾಪಗಳನ್ನು ಇಡಬೇಕಾಗಿತ್ತು. ಹಕ್ಕಿನ ಪ್ರಶ್ನೆ ಬಂದಾಗ ಸದನದಲ್ಲಿ ಮಾತನಾಡತಕ್ಕಂಥ ಒಂದು ಅವಕಾಶವನ್ನು ಕಾಯಿದೆಯಲ್ಲಿ ಇಡಬೇಕಾದರೂ ಕೂಡ ನಾವು ಹಕ್ಕನ್ನು ಚಲಾವಣೆ ಮಾಡತಕ್ಕ ಪ್ರಯತ್ನ ಮಾಡಿದಾಗ ನಾವು ಹಕ್ಕನ್ನು ಕಳೆದುಕೊಂಡಿದ್ದೇವೆಂದು ಹೇಳಿ ಕಳಿತುಕೊಳ್ಳುವುದಕ್ಕಾಗುವುದಿಲ್ಲ. ಜವಾಬ್ದಾರಿಯನ್ನು ಗಮನಿಸಬೇಕಾಗುತ್ತದೆ. ಎಮರ್‌ಜೆನ್ಸಿ ಎಂಬ ವಿಷಯವನ್ನು ಪ್ರಸ್ತಾಪ ಮಾಡಿದೆ ಇದನ್ನು ತರಲು ಏನು ಒಂದು ಅವಶ್ಯಕತೆ ಇತ್ತು ಎಂಬುದನ್ನು ಕೇಳ ಬೇಕಾಗಿದೆ. ಯಾವ ಯುದ್ಧ ನಮ್ಮ ದೇಶದ ಮೇಲೆ ನಡೆಯುತ್ತಿದೆ ಎಂದು ಕೇಳಬೇಕಾಗಿದೆ. ನಮ್ಮ ದೇಶದ ಮೇಲೆ ಯಾವ ರಾಷ್ಟ್ರಗಳು ಆಕ್ರಮಣವನ್ನು ಎಸಗಿವೆ ಎಂದು ಈ ಒಂದು ತುರ್ತು ಪರಿಸ್ಥಿತಿ ಯನ್ನು ತಂದಿದ್ದೀರೆಂದು ಕೇಳಬೇಕಾಗಿದೆ. ಪ್ರೆಸ್‌ಗಳ ಮೇಲೂ ಸೆನ್‌ಸಾರ್ ಹಾಕಿದ್ದಾರೆ. ಯುದ್ಧ ನಡೆದಂತ ಕಾಲದಲ್ಲಿ ಅಂದರೆ ಪಾಕಿಸ್ಥಾನ, ಚೈನಾ ದೇಶಗಳು ನಮ್ಮ ದೇಶದ ಮೇಲೆ ಯುದ್ಧವನ್ನು ಘೋಷಿಸಿದಾಗಲೂ ಕೂಡ ಪ್ರೆಸ್ ಸೆನ್‌ಸಾರ್ ಮಾಡಿರಲಿಲ್ಲ. ಪತ್ರಿಕೆಗಳ ಮೇಲೆ ಸರ್ಕಾರಕ್ಕೆ ಯಾವ ಒಂದು ಹತೋಟಿಯನ್ನು ಇಟ್ಟುಕೊಂಡಿರಲಿಲ್ಲ. ಇದನ್ನು ನೋಡಿದರೆ ಸ್ವಾತಂತ್ರ್ಯ ಬಂದಮೇಲೆ ಇದೇ ಮೊಟ್ಟಮೊದಲ ಬಾರಿ ಹೀಗೆ ಮಾಡುತ್ತಿರುವುದು ಎಂದು ಕಾಣುತ್ತದೆ. ಆಡಳಿತ ನಡೆಸುತ್ತಿರುವ ಮಿತ್ರರ ತಲೆಯಲ್ಲಿ ಬೇರೆ ಮಹಾಯುದ್ಧ ಅಂದರೆ ಪ್ರಪಂಚದ ಮೂರನೇ 'ಮಹಾಯುದ್ಧ ನಡೆಯುತ್ತಿದೆ ಎಂದು ಕಾಣುತ್ತದೆ. ಪ್ರೆಸ್ ಸೆನ್‌ಸಾರ್ ತಂದಿರತಕ್ಕ ವಿಷಯವನ್ನು ಕೇಳುವ ಹಕ್ಕಿಲ್ಲ ಆದ್ದರಿಂದ ಈ ಎಮರ್ ಜೆನ್ಸಿ ಏನು ತಂದಿದ್ದೀರಿ ಅದರ ಬಗ್ಗೆ ಪೂರ್ಣ ರೀಸನ್ ದಯಮಾಡಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದರು ಆರ್ಡರ್ ಪಾಸ್ ಮಾಡಿದರು. ಅದು ಶ್ರೀಮತಿ ಇಂದಿರಾಗಾಂಧಿಯವರ ಹೆಸರಿನಲ್ಲಿ ಬರಲಿಲ್ಲ, ಯಾರು ಪಾಸ್ ಮಾಡಿದರು ಎಂಬುದು ಇಲ್ಲ ಪತ್ರಿಕೆಯಲ್ಲಿ

ಓದಿದ್ದೇನೆ, ಸೈನ್ಯದಲ್ಲಿ ಭಿನ್ನಾಭಿಪ್ರಾಯ ಹುಟ್ಟಿಕೊಂಡಿತ್ತು ಎನ್ನತಕ್ಕ ಮಾತನ್ನು ಹೇಳಿದ್ದರೆ, ಆ ರೀತಿ ಏನಾದರೂ ಸೈನ್ಯದಲ್ಲಿ ಗಡಬಿಡಿ ಪ್ರಯತ್ನವಾಗಿದ್ದರೆ ಎಮರ್‌ಜೆನ್ಸಿ ತಂದು ಸರ್ಕಾರಕ್ಕೆ ಸೂಚನೆ ಕೊಡಬೇಕಾಗಿತ್ತು. ಆ ರೀತಿ ಮಾಡಲಿಲ್ಲ. ಇದರಿಂದ ರಾಜ್ಯಾಂಗದಲ್ಲಿರುವ ಸಂಪೂರ್ಣ ಕಾನೂನನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಆಪಾದನೆಯನ್ನು ಏಕೆ ಮಾಡಬಾರದು, ಎಮರ್‌ಜೆನ್ಸಿ ತಂದಿರುವುದನ್ನು ನಿರ್ಣಯದಲ್ಲಿ ತಿಳಿಸಿದ್ದಾರೆ ಬೇರೆ ಯಾವುದಾದರೂ ಕಾರಣಗಳಿದ್ದರೆ ಏನು ಎಂಬುದನ್ನು ನಮ್ಮ ಸದನಕ್ಕೆ ತಿಳಿಸಬೇಕು. ಕೇಂದ್ರ ಸರ್ಕಾರದವರು ಎಮರ್‌ಜೆನ್ಸಿಯನ್ನು ಘೋಷಿಸಿ ಪ್ರಶ್ನೋತ್ತರ ವೇಳೆಯನ್ನು ತೆಗೆದಿದ್ದಾರೆ, ಖಾಸಗಿ ಕಾರ್ಯಕಲಾಪಗಳನ್ನು ತೆಗೆದಿದ್ದಾರೆ. ಅದಕ್ಕೋಸ್ಕರವಾಗಿ ನಾವು ಕೂಡ ಇಲ್ಲಿ ತಂದಿದ್ದೇವೆ ಎನ್ನುವ ಮಾತನ್ನು ಅವರು ಹೇಳಿಬಿಟ್ಟರು ತುರ್ತು ಪರಿಸ್ಥಿತಿಯ ಘೋಷಣೆ ಅನವಶ್ಯಕವಾಗಿತ್ತು. ತುರ್ತು ಪರಿಸ್ಥಿತಿ ಎಂದು ಏನು ಒಂದು ನಿರ್ಣಯವನ್ನು ಮಾನ್ಯ ಸದಸ್ಯರು ಮಂಡಿಸಿದ್ದಾರೆ ಈ ನಿರ್ಣಯ ಸರಿಯಲ್ಲ. ನಮ್ಮ ಮಿತ್ರರು ಹೇಳಿದ್ದಾರೆ ಮೂಲಭೂತವಾದ ಹಕ್ಕನ್ನು ಕಿತ್ತುಹಾಕಿರುವುದು ಅದು ಅಪಾಯದ್ದು. ಖಾಸಗಿ ಕಾರ್ಯಕಲಾಪಗಳಿಗೆ ಅಡ್ಡಿ ಮಾಡದೆ ಸಂಪೂರ್ಣವಾಗಿ ಅದನ್ನು ಹಾಕಿಕೊಳ್ಳಬೇಕು. ೨೦ ವರ್ಷಗಳಿಂದಲೂ ಸದನದ ಕಾರ್ಯಕ್ರಮಗಳಿಗೆ ಬೆಂಬಲ ಕೊಟ್ಟಿದ್ದೇವೆ. ಈಗ ಘೋಷಿಸಿರುವ ೨೦ ಅಂಶಗಳ ಪಟ್ಟಿಯನ್ನು ಸದನದಲ್ಲಿ ಇಡಿ: ಅದಕ್ಕೆ ಸಂಪೂರ್ಣ ಬೆಂಬಲವನ್ನು ಕೊಡುತ್ತೇನೆ. ೨೦ ಅಂಶಗಳ ಕಾರ್ಯಕ್ರಮವನ್ನು ಏನು ಪ್ರಸ್ತಾಪ ಮಾಡಿದ್ದೀರಿ ಅದು ನಮಗೆ ತಿಳಿದಿಲ್ಲ. ದಯಮಾಡಿ ಆ ಅಂಶಗಳನ್ನು ತಿಳಿಸಿ. ನಿರ್ಣಯವನ್ನು ಪಾಸ್ ಮಾಡಲಿಕ್ಕೆ ಮಿನಿಸ್ಟರ್ ಇದ್ದಾರೆ. ಅದಕ್ಕೆ ನಾವು ಬೆಂಬಲವನ್ನು ಕೊಡುತ್ತೇವೆ. ಸುಮ್ಮನೆ ನಿರ್ಣಯವನ್ನು ಇಟ್ಟು ಎಮರ್‌ಜೆನ್ಸಿ ಬಂದಿದೆ ಎಂದು ಹೇಳಿ ನಮಗಿರತಕ್ಕ ಹಕ್ಕುಬಾಧ್ಯತೆಗಳನ್ನು ಮೊಟಕು ಮಾಡಿದ್ದೀರಿ. ದಯಮಾಡಿ ನಾನು ಸಂಬಂಧಪಟ್ಟ ಜನರನ್ನು ಕೇಳಿಕೊಳ್ಳುತ್ತೇನೆ, ಈ ನಿರ್ಣಯವನ್ನು ವಾಪಸ್ ತೆಗೆದುಕೊಳ್ಳಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).— ಮಾನ್ಯ ಉಪಸಭಾಪತಿಗಳೇ, ಈಗ ಏನು ಸಂಸದೀಯ ಸಚಿವರು ಸಭೆಯ ಕೆಲವು ನಿಯಮಾವಳಿಗಳಿಗೆ ಕೆಲವು ಮಾರ್ಪಾಡುಗಳನ್ನು ಮಾಡತಕ್ಕ ಸೂಚನೆಗಳನ್ನು ಮಂಡಿಸಿದ್ದಾರೆ. ಅವರು ಮಂಡನೆ ಮಾಡತಕ್ಕ ಕಾಲದಲ್ಲಿ ಈ ಒಂದು ನಿರ್ಣಯದ ಅಂಗೀಕಾರ ಏತಕ್ಕೆ ಆಗಬೇಕು ಎನ್ನುವುದಕ್ಕೆ ಅವರು ವಿವರಣೆಯನ್ನು ಕೊಟ್ಟಿದ್ದರಲ್ಲಿ ಬಹಳ ವಿಫಲರಾಗಿದ್ದಾರೆ ಎನ್ನತಕ್ಕದನ್ನು ನಾನು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಾರದು. ಮಾನ್ಯ ಉಪಸಭಾಪತಿಗಳೇ ಅವರು ವಿವರಣೆಯನ್ನು ಕೊಡತಕ್ಕ ಕಾಲದಲ್ಲಿ ಒಂದು ಮಾತನ್ನು ಹೇಳಿದರು. ಜೂನ್ ೨೬ರಂದು ರಾಷ್ಟ್ರದಲ್ಲಿ ಅಂತರಿಕ ಭದ್ರತೆಗೆ ಅಪಾಯ ಬಂದಿರತಕ್ಕ ಸನ್ನಿವೇಶ ಕಂಡು ಈ ಒಂದು ತುರ್ತುಪರಿಸ್ಥಿತಿಯನು ಘೋಷಣೆ ಮಾಡಿದಮೇಲೆ ಕೆಲವು ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತರುವುದಕ್ಕೆ ಕೆಲವು ನಿಯಮಾವಳಿಗಳನ್ನು ಮಾರ್ಪಾಡು ಮಾಡಬೇಕಾಗಿ ಬಂದಿದೆ ಎನ್ನತಕ್ಕಂಥದ್ದನ್ನು ಈ ಸಭೆಯಲ್ಲಿ ತಿಳಿಸಿದರು. ಮಾನ್ಯ ಸಭಾಪತಿಗಳೇ ತುರ್ತು ಪರಿಸ್ಥಿತಿಯನ್ನು ೧೯೭೧ರಲ್ಲಿ ನಮ್ಮ ರಾಷ್ಟ್ರದಲ್ಲಿ ಘೋಷಣೆ ಆಯಿತು. ಅಲ್ಲಿಂದ ತುರ್ತು ಪರಿಸ್ಥಿತಿಯನ್ನು ತೆಗೆದು ಹಾಕಬೇಕೆಂದು ಹೇಳಿ ವಿರೋಧ ಪಕ್ಷದವರು ಒತ್ತಾಯಪಡಿಸಿದ್ದರಿಂದ ಹಲವಾರು ಸಾರಿ ಬೇಡಿಕೆಗಳು ಬಂದರೂ ಕೂಡ ಸರ್ಕಾರ ಅದನ್ನು ತೆಗೆಯಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ೧೯೭೫ ಜೂನ್ ೨೬ರಂದು ಅಂತರಿಕ ಭದ್ರತೆಗೆ ಧಕ್ಕೆ ಬಂದಿದೆ ಎಂದು ಒಂದು ವಾದವನ್ನು ಮುಂದಿಟ್ಟು ಪುನಃ ತುರ್ತುಪರಿಸ್ಥಿತಿಯನ್ನು ಘೋಷಣೆಮಾಡಿದ್ದಾರೆ. ಈ ಸಂದರ್ಭದಲ್ಲಿ ಈ ಒಂದು ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಿರತಕ್ಕಂಥ ಸಂಸದೀಯ ಸಚಿವರು ಈವತ್ತಿನದಿವಸ ಸದನದ ಸದಸ್ಯರಿಗೆ ಇರತಕ್ಕ ಒಂದು ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ನನ್ನ ಮಿತ್ರರು ಹೇಳಿದರು, ಕರ್ನಾಟಕ ರಾಜ್ಯದಲ್ಲಿ ಅಂತರಿಕ ಭದ್ರತೆ ಪ್ರಶ್ನೆ ಇಲ್ಲ, ರಾಷ್ಟ್ರದಲ್ಲಿ ಉಂಟಾಗಿರತಕ್ಕ ಅಂತರಿಕ ಭದ್ರತೆಯ ಪ್ರಶ್ನೆ ಇದನ್ನು ಸಾಮಾನ್ಯ ದೃಷ್ಟಿಯಿಂದ ನೋಡಬೇಕಾಗಿದೆ ಎನ್ನುವ ಮಾತನ್ನು ಹೇಳಿದರು, ಆ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಸದನದ ಕಾರ್ಯಕಲಾಪಗಳಿಗೆ ನಾನು ಮೊದಲು ತಿಳಿಸಿದಹಾಗೆ ಗೊತ್ತುಮಾಡಿರತಕ್ಕ ಕಾರ್ಯಕ್ರಮಗಳ ಬಗ್ಗೆ ನೋಡಿದಾಗ ಕಾರ್ಯಕ್ರಮದ ಪಟ್ಟಿಯಲ್ಲಿ ಇರತಕ್ಕದ್ದು ಯಾವುದೇ ಒಂದು ತುರ್ತು ಪರಿಸ್ಥಿತಿಯ ಒಂದು ಸನ್ನಿವೇಶವನ್ನು ಆಳವಡಿಸಿರುವಂತಹ ಕಾರ್ಯಕ್ರಮ ನಿಯೋಜಿತವಾಗಿಲ್ಲವೆಂದು ಈ ಸಂದರ್ಭದಲ್ಲಿ ತಿಳಿಯಬಯಸುತ್ತೇನೆ.

5 P.M.

ಇವತ್ತು ರಾಷ್ಟ್ರದ ಮುಖಂಡರುಗಳು ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡತಕ್ಕಂಥ ಕಾಲದಲ್ಲಿ ಹಲವಾರು ದಿಗ್ಬಂಧನಗಳನ್ನು ಹಾಕಿದ್ದಾರೆ. ಈ ಸದನದಲ್ಲಿ ಇವತ್ತು ವಿರೋಧಪಕ್ಷದ ವತಿಯಿಂದ ಮಾತನಾಡುವುದು ಪತ್ರಿಕೆಗಳಲ್ಲಿ ಬರಲಿಕ್ಕೆ ಸಾಧ್ಯವಿಲ್ಲ. ಸರ್ಕಾರದ ವತಿಯಿಂದು ಕೊಡತಕ್ಕಂಥ ಉತ್ತರ ಏನ ಇದೆ ಅದು ಮಾತ್ರ ಪತ್ರಿಕೆಗಳಲ್ಲಿ ಬರುತ್ತದೆ. ಒಂದು ಕಡೆ ಜನವಾಣಿಯ ಮುಖವಾಣಿವಾದ ಪತ್ರಿಕೆಗಳ

ಏನು ಇವೆ ಅವುಗಳನ್ನು ಇವತ್ತು ಕತ್ತುಹಿಸುಕಿ ನಾವು ಪ್ರಜಾಪ್ರಭುತ್ವವನ್ನು ರಕ್ಷಣೆಮಾಡುತ್ತಿದ್ದೇವೆ ಎಂದು ಹೇಳತಕ್ಕಂಥಾದ್ದು, ಮತ್ತೊಂದು ಕಡೆ ಶಾಸನಸಭೆಯ ಸದಸ್ಯರುಗಳ ಹಕ್ಕನ್ನು ಮೊಟಕುಗೊಳಿಸಿ ಪ್ರಜಾಪ್ರಭುತ್ವವನ್ನು ಉಳಿಸಲಿಕ್ಕೆ ಹೊರಟಿದ್ದೇವೆ ಎಂದು ಹೇಳತಕ್ಕಂಥಾದ್ದು ಏನು ಇದೆ ಇದು ಕೇವಲಹಾಸ್ಯಾಸ್ಪದವಾದ ಮಾತು ಎಂದು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಮಾನ್ಯ ಸಭಾಪತಿಗಳೇ, ರಾಷ್ಟ್ರದ ನಾಯಕರು ಈ ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡತಕ್ಕಂಥ ಕಾಲದಲ್ಲಿ ಪತ್ರಿಕೆಗಳಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ರೇಡಿಯೋ ಪ್ರಸಾರ ಭಾಷಣ ಮಾಡತಕ್ಕಂಥ ಕಾಲದಲ್ಲಿ ನಾಲ್ಕು ಪ್ರಮುಖ ಕಾರಣಗಳನ್ನು ಕೊಟ್ಟಿದ್ದಾರೆ. ಒಂದನೆಯ ಕಾರಣ ಚುನಾಯಿತ ಸರ್ಕಾರ ತನ್ನ ಅವಧಿ ಪೂರ್ಣವಾಗುವವರೆಗೆ ಕೆಲಸಮಾಡಲು ವಿರೋಧಪಕ್ಷದವರು ಅಡ್ಡಿ ಉಂಟುಮಾಡಿದರು ಎಂದು ಎರಡನೆ ಕಾರಣ, ಇವತ್ತು ರಾಷ್ಟ್ರದಲ್ಲಿ ಮಿಲಿಟರಿ ಮತ್ತು ಪೋಲೀಸ್‌ನವರು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡುವುದಕ್ಕೆ ಅಡಚಣೆ ತರುತ್ತಿದ್ದಾರೆ ಎನ್ನುವುದು. ಮತ್ತೊಂದು ಕಾರಣ ಸರ್ಕಾರದ ಸಹೋದ್ಯೋಗಿ, ನಾನು ಪ್ರಧಾನ ಮಂತ್ರಿಗಳ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ, ಮಿಶ್ರಾರವರ ಹತ್ಯೆ, ಮತ್ತೊಂದು ಕಾರಣ, ಶ್ರೇಷ್ಠ ನ್ಯಾಯಾಧೀಶರ ಹತ್ಯೆಗೆ ಪ್ರಯತ್ನ ಎಂದು ಹೇಳಿ ಈ ನಾಲ್ಕು ಪ್ರಮುಖ ಕಾರಣಗಳನ್ನು ಜನತೆಯ ಮುಂದೆ ಇಟ್ಟು ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದ್ದಾರೆ. ಈ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದ ಮೇಲೆ ೧೯೪೭ ರಿಂದ ಇಲ್ಲಿಯವರೆಗೆ ನಡೆದುಕೊಂಡು ಬಂದಿರತಕ್ಕಂಥ ರಾಜಕೀಯ ಬೆಳವಣಿಗೆಯನ್ನು ವೀಕ್ಷಣೆ ಮಾಡಿ ನೋಡಿದಾಗ ಬಹುಶಃ ಅವರು ಈಗ ಕೊಟ್ಟಿರತಕ್ಕ ಕಾರಣಗಳು ಏನಿವೆ ಅವುಗಳ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡುವದಕ್ಕೆ ಸರಿಯಾದಂಥ ಕಾರಣಗಳು, ಪ್ರಾಮಾಣಿಕವಾದಂಥ ಕಾರಣಗಳು ಎಂದು ಯಾವ ಒಬ್ಬ ವ್ಯಕ್ತಿಯೇ ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ಸದನದಲ್ಲಿ ಕುಳಿತಿರತಕ್ಕ ಯಾವ ವ್ಯಕ್ತಿಯೇ ಆಗಲೀ, ಯಾವ ರಾಜಕೀಯ ಪಕ್ಷಕ್ಕೆ ಸೇರಿದವರೇ ಆಗಿರಲಿ ಸದಸ್ಯರ ಹಕ್ಕನ್ನು ಕಸಿದುಕೊಳ್ಳುವುದಕ್ಕೆ, ಸದಸ್ಯರ ಹಕ್ಕನ್ನು ಸೀಮಿತಮಾಡುವುದಕ್ಕೆ ಪ್ರಯತ್ನ ನಡೆಸಿದಾಗ ಇದನ್ನು ಪಕ್ಷಾತೀತ ದೃಷ್ಟಿಯಿಂದ ನೋಡಬೇಕು ಎಂದು ನಾನು ಕೈಜೋಡಿಸಿ ಕೇಳಿಕೊಳ್ಳುತ್ತೇನೆ; ಕಳೆದ ೨೭ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕ ರಾಜಕೀಯ ಘಟನೆಗಳನ್ನು ನೋಡಿದಾಗ ಈಗ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ ಕಾರಣಗಳು ಏನಿವೆ ಅವು ಎಷ್ಟರಮಟ್ಟಿಗೆ ಸಮಂಜಸವಾಗಿವೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಉಪಸಭಾಪತಿಗಳೇ, ೧೯೪೭ರಿಂದ ಅವಿಭಾಜ್ಯ ಕಾಂಗ್ರೆಸ್ ರಾಷ್ಟ್ರದ ಆಡಳಿತ ಸೂತ್ರವನ್ನು ವಹಿಸಿಕೊಂಡಾಗಿನಿಂದ ನಡೆದಿರತಕ್ಕ ಅಂಶಗಳನ್ನು ವೀಕ್ಷಣೆ ಮಾಡಿನೋಡಿದರೆ ಈಗ ಕೇಂದ್ರ ಸರ್ಕಾರ ಕೊಟ್ಟಿರತಕ್ಕ ಕಾರಣಗಳು ಸಕಾರಣಗಳಲ್ಲ ಎಂದು ತಿಳಿಯಬಯಸುತ್ತೇನೆ. ಮಾನ್ಯ ಬೈರೇಗೌಡರು ಕೇರಳದಲ್ಲಿ ಹಿಂದೆ ಚುನಾಯಿತ ಸರ್ಕಾರವನ್ನು ಅವಿಭಾಜ್ಯ ಕಾಂಗ್ರೆಸ್‌ನವರು ಕಿತ್ತುಹಾಕಿದರು ಎಂದು ಹೇಳಿದರು. ಯಾವ ಕಾಂಗ್ರೆಸ್ಸೇ ಆಗಿರಲಿ ಕೆಟ್ಟ ಸಂಪ್ರದಾಯವನ್ನು ಹಾಕಿದ್ದರೆ ಅದು ಸರಿ ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. ಕೆಟ್ಟ ಸಂಪ್ರದಾಯದ ಬುನಾದಿಯ ಮೇಲೆ ಕೆಲಸಮಾಡುವಂಥ ಪಾಪದ ಫಲ ಇವತ್ತು ದೇಶದಲ್ಲಿದೆ. ಅಷ್ಟೇ ಅಲ್ಲ ವೆಸ್ಟ್ ಬೆಂಗಾಲ್‌ನಲ್ಲಿ ಚುನಾಯಿತ ಸರ್ಕಾರವನ್ನು ವಜಾ ಮಾಡಿದರು. ಅದಕ್ಕಾಗಿ ಬಿಹಾರನಲ್ಲಿ ಜನತಾ ಆಂದೋಲನ ನಡೆಯಿತು, ಸಹಸ್ರಾರು ಜನ ಅದರಲ್ಲಿ ಭಾಗವಹಿಸಿದರು. ಅವತ್ತು ತುರ್ತು ಪರಿಸ್ಥಿತಿ ಬರಲಿಲ್ಲ, ತೆಲಂಗಾಣದಲ್ಲಿ ಸಾಕಷ್ಟು ಚಳುವಳಿಯಾಗಿ ಅನೇಕ ಜನ ನಿರಪರಾಧಿಗಳ, ಅನೇಕ ಜನ ಹೆಣ್ಣು ಮಕ್ಕಳ ಮಾನಾಪಹರಣ ನಡೆಯಿತು, ಅವತ್ತು ತುರ್ತು ಪರಿಸ್ಥಿತಿ ಬರಲಿಲ್ಲ, ಒರಿಸ್ಸಾನಲ್ಲಿ ಚುನಾಯಿತ ಪ್ರತಿನಿಧಿಗಳು ವಿರೋಧಪಕ್ಷದ ವತಿಯಿಂದ ಸರ್ಕಾರದ ರಚನೆ ಮಾಡುವುದಕ್ಕೆ ಕಗ್ಗೊಲೆ ಮಾಡಿದ್ದಾರೆ, ಅದರ ಹೊಣೆಗಾರಿಕೆಯನ್ನು ಹೊರಲಿಕ್ಕೆ ತಯಾರಿಲ್ಲ. ಆದರೆ ಇವತ್ತು ವಿರೋಧಪಕ್ಷದ ಚುನಾಯಿತ ಸರ್ಕಾರ ತನ್ನ ಅವಧಿ ಪೂರ್ಣವಾಗಿ ಕೆಲಸಮಾಡುವುದಕ್ಕೆ ಅವಕಾಶ ಕೊಡಲಿಲ್ಲ ಎಂದು ಜನತೆ ಮುಂದೆ ಇಟ್ಟಿರತಕ್ಕ ಘೋಷಣೆಯ ಔಚಿತ್ಯವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಜವಹರಲಾಲರನ್ನು ಹತ್ಯೆ ಮಾಡುವುದಕ್ಕೆ ದೇಶದ್ರೋಹಿಗಳು ಎರಡು ಬಾರಿ ಪ್ರಯತ್ನ ಮಾಡಿದರು. ಆ ಕಾಲದಲ್ಲಿ ರಾಷ್ಟ್ರದ ಆಂತರಿಕ ಭದ್ರತೆಗೆ ಧಕ್ಕೆ ಬರಲಿಲ್ಲ; ಅಷ್ಟೇ ಅಲ್ಲ, ಅಂದು ಭ್ರಷ್ಟಾಚಾರಕ್ಕೆ ಒಳಗಾಗಿದ್ದಂಥ ಮುಖ್ಯಮಂತ್ರಿ ಕೈರಾನ್ ರವರನ್ನು ಕೊಲೆ ಮಾಡಿದಂಥ ಕಾಲದಲ್ಲಿ ದೇಶದ ಆಂತರಿಕ ಭದ್ರತೆಗೆ ಧಕ್ಕೆಬರಲಿಲ್ಲ. ಅಂದು ಆಡಳಿತ ನಡೆದಂಥ ಮುಖಂಡರುಗಳು ಈ ನಿರ್ಣಯ ಮಾಡಿದರು ಎಂದು ತಿಳಿದುಕೊಂಡರೆ, ಇವತ್ತು ಹತ್ಯೆ, ನ್ಯಾಯಾಧೀಶರ ಬಗೆ ನಡೆದಂಥ ಪ್ರಕರಣ ಇವುಗಳನ್ನು ಮುಂದಿಟ್ಟು ದೇಶದ ಆಂತರಿಕ ಭದ್ರತೆಗೆ ಧಕ್ಕೆ ಬಂದಿದೆ ಎಂದು ಹೇಳುವುದರ ಔಚಿತ್ಯವನ್ನು ನಾನು ಕೇಳಬಯಸುತ್ತೇನೆ. ಅಷ್ಟೇ ಅಲ್ಲ, ಎಲ್.ಎನ್. ಮಿಶ್ರಾ ಅವರಿಗೆ ಕೊಲೆ ಮಾಡಿದವನಿಗೆ ಶಿಕ್ಷೆ ಮಾಡುವುದಕ್ಕೆ ಕಾಯಿದೆ ಇರಲಿಲ್ಲವೇ, ಕಾನೂನು ಇರಲಿಲ್ಲವೇ. ಮಿಶ್ರಾರವರಿಗೆ ಕೊಲೆ ಮಾಡಿದವನಿಗೆ ಶಿಕ್ಷೆ ಮಾಡಲಿಕ್ಕೆ ವಿರೋಧಪಕ್ಷಗಳು ಸಹಾಯ ಮಾಡಲಿಲ್ಲ ಎಂದು ಮಾನ್ಯ ಮಿತ್ರರು ಹೇಳಿದರು. ಈ ಒಂದು ಪ್ರಕರಣದಲ್ಲಿ ತೊಡಗಿರತಕ್ಕ ದುಷ್ಟವ್ಯಕ್ತಿಗಳು ಯಾರಿದ್ದಾರೆ ಅವರನ್ನು ಸದೆ ಬಡಿಯುವುದರಲ್ಲಿ ನಾವು ಯಾರಾದರೂ ಅಡ್ಡಿ ಬಂದಿದ್ದೇವೆಯೇ ಎನ್ನುವುದನ್ನು ಸರ್ಕಾರ

ದವರು ತಿಳಿಸಬೇಕು ತಾವು ದಯಮಾಡಿ, ಮಿಶ್ರಾರವರ ಕೊಲೆ ಪ್ರಕರಣದಲ್ಲಿ ಇಂತಿಂಥ ಮುಖಂಡರು ಬಂದು ಅಪರಾಧಿಗೆ ಶಿಕ್ಷೆ ಮಾಡಲಿಕ್ಕೆ ಅಡ್ಡಿಪಡಿಸಿದರು ಎಂದು ತಿಳಿಸಿ ಕೇವಲ ಅಂತರಿಕ ಭದ್ರತೆಗೆ ಕೆಲವು ಕಾರಣಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡಿದರೆ ಜನತೆಯು ವಿಶ್ವಾಸವನ್ನು ಪಡೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಗಳೇ, ಇವತ್ತು ಒಂದು ಮನಸ್ಸಿಗೆ ವ್ಯಥೆಯಾಗತಕ್ಕ ವಿಷಯ, ಎಂದರೆ, ಕೇವಲ ಕೆಲವು ನಿಯಮಾವಳಿಗಳನ್ನು ತಿದ್ದುಪಡಿ ಮಾಡುವುದಿಲ್ಲ. ಬಾಂಗ್ಲಾದೇಶದಲ್ಲಿ ಸರ್ವಾಧಿಕಾರತ್ವ ಬಂತು. ಆಗ ಆ ಪಾರ್ಲಿಮೆಂಟಿನಲ್ಲಿ ಕೆಲವು ನಿರ್ಣಯಗಳನ್ನು ತೆಗೆದುಕೊಂಡರು. ಅಲ್ಲಿಯೂ ಕೂಡ ಪ್ರಶ್ನೋತ್ತರ ಕಾಲವನ್ನು ತೆಗೆದುಹಾಕಿದ್ದಾರೆ. ಅದನ್ನು ನಮ್ಮ ಪ್ರಧಾನ ಮಂತ್ರಿಗಳು ಸ್ವಾಗತ ಮಾಡಿದರು. ಅದರ ಬಗ್ಗೆ ಸಂದೇಶವನ್ನು ಕಳಿಸಿದರು. ಅದರ ಹಿನ್ನೆಲೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಪ್ರಜಾಪ್ರಭುತ್ವದ ಅವಸಾನಕ್ಕೆ ಇದು ಮೊದಲನೆ ಹೆಜ್ಜೆ ಎಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಇವತ್ತು ನಾನು ಅಲಹಾಬಾದ್ ಹೈಕೋರ್ಟಿನ ತೀರ್ಮಾನ ಮತ್ತು ಸುಪ್ರೀಂ ಕೋರ್ಟಿನ ತೀರ್ಮಾನಗಳನ್ನು ಸೂಚಿಸುವುದಕ್ಕೆ ಹೋಗುವುದಿಲ್ಲ. ಅದರ ವ್ಯಾಪ್ತಿ ಈ ಕಕ್ಷೆಗೆ ಬರುವುದಿಲ್ಲ. ಬಹುಶಃ ಸರ್ಕಾರದ ಮಂತ್ರಿಗಳು ಉತ್ತರ ಕೊಡತಕ್ಕಂಥ ಕಾಲದಲ್ಲಿ "Why Emergency" This is a publication of the Government of India— ಇದರ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬಹುದು. ನಾನು ಇದನ್ನು ಓದಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಇದರಲ್ಲಿ ಕೇವಲ ನಾಲ್ಕಾರು ಮುಖಂಡರುಗಳ ಭಾಷಣಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಈ ನಾಲ್ಕಾರು ಮುಖಂಡರುಗಳನ್ನು ಬಂಧಿಸುವುದಕ್ಕೆ ತುರ್ತು ಪರಿಸ್ಥಿತಿ ಬೇಕಾಗಿದೆಯೇ ? ಒಂದು ಕೇಳಿ ಈ ನಾಲ್ಕಾರು ಮುಖಂಡರುಗಳು ದೇಶದ್ರೋಹದ ಚಟುವಟಿಕೆ ಬಗ್ಗೆ ಭಾಷಣಮಾಡಿದ್ದಾರೆ ಎಂದು ಗೊತ್ತಾಗಿತ್ತು ಎಂದು ಇಟ್ಟುಕೊಳ್ಳೋಣ ಆದರೆ ಅವರು ಹೇಳಿರತಕ್ಕ ಅಭಿಪ್ರಾಯ ಭೇದ ಇರಬಹುದು. ಅದನ್ನು ಒಪ್ಪುವುದು ಬಿಡುವುದು ತಮಗೆ ಸೇರಿದಂಥ ವಿಷಯ.

ಈ ಹೇಳಿಕೆಗಳನ್ನು ತಾವು ಒಪ್ಪಿ ಎಂದು ನಾನು ತಮ್ಮ ಮೇಲೆ ಒತ್ತಾಯ ಮಾಡಲಿಕ್ಕೆ ತಯಾರಿಲ್ಲ. ಇವುಗಳನ್ನು ಒಪ್ಪತಕ್ಕದ್ದು ಬಿಡತಕ್ಕದು ತಮ್ಮಗೆ ಬಿಟ್ಟ ವಿಷಯ. ಪ್ರಜಾತಂತ್ರದಲ್ಲಿ ಅಭಿಪ್ರಾಯ ಭೇದ ಬರುತ್ತದೆ. ಇಂಥ ಅಭಿಪ್ರಾಯ ಭೇದ ಇದ್ದಾಗ ಒಂದು ವೇಳೆ ಅವರ ಹೇಳಿಕೆಯಿಂದ ರಾಷ್ಟ್ರದ ಭದ್ರತೆ ಕುತ್ತು ಅಯಿತು ಎನ್ನುವ ನಿರ್ಣಯಕ್ಕೆ ತಾವು ಬಂದಿದ್ದರೆ, ಅವರು ನಾಲ್ಕಾರು ಜನರನ್ನು ಬಂಧಿಸುವುದಕ್ಕೆ ತುರ್ತು ಪರಿಸ್ಥಿತಿ ಘೋಷಣೆಯೇ ? ೬೦ ಕೋಟಿ ಜನತೆಯ ಸ್ವಾತಂತ್ರ್ಯದ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿರತಕ್ಕದ್ದು ನಿಜವಾಗಿಯೂ ಸ್ವಾತಂತ್ರ್ಯ ಪಡೆದಿರತಕ್ಕ ಪ್ರತಿಯೊಬ್ಬ ವ್ಯಕ್ತಿಗೂ ಅವನು ಯಾವುದೇ ಪಕ್ಷದಲ್ಲಿರಲಿ ಇವತ್ತು ಅದರ ಬಗ್ಗೆ ಕಳಕಳಿಯನ್ನು ವ್ಯಕ್ತ ಮಾಡಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರೇ ನನಗೆ ಇದು ಇನ್ನೂ ಅರ್ಥವಾಗದ ಜಟಿಲ ಪ್ರಶ್ನೆಯಾಗಿದೆ. ಚುನಾವಣೆಯಲ್ಲಿ ಆರಿಸಲ್ಪಟ್ಟ ಪ್ರತಿನಿಧಿಗಳಿಗೆ ಸರ್ಕಾರ ಸರಿಯಾಗಿ ಕೆಲಸ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿಲ್ಲ. ದೇಶದ ಬಡವರನ್ನು ಮುಂದಿಟ್ಟು ಇವತ್ತು ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದ್ದರೆ ನಾನು ಕೇಳುತ್ತಿರಲಿಲ್ಲ ಆದರೆ ಇವತ್ತು ನಾವು ತೆಗೆದುಕೊಳ್ಳತಕ್ಕ ನಿರ್ಣಯವಾದರೂ ಏನು ? ಯಾವ ಜನ ನಿಮ್ಮನ್ನು ಚುನಾವಣೆಯಲ್ಲಿ ಗೆಲ್ಲಿಸಿ ಇಲ್ಲಿ ಕಳುಹಿಸಿದ್ದಾರೋ ಅವರ ಪ್ರತಿನಿಧಿಗಳಾಗಿ ನಾವು ಇಲ್ಲಿ ಕೆಲಸ ಮಾಡಿದ್ದೇವೆ ಎಂದು ತಿಳಿದು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾವ ಜನತೆಯಿಂದ ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆಯೋ ಅವರ ಸಮಸ್ಯೆಯನ್ನು ಇಲ್ಲಿ ಚರ್ಚೆಮಾಡುವುದಕ್ಕೆ ಸಾಧ್ಯವಿಲ್ಲ. ನಿರ್ಜೀವ ವಸ್ತುಗಳಾಗಿ ಸರ್ಕಾರದವರು ಕೊಟ್ಟಂಥ ಅಥವಾ ಇಟ್ಟಂಥ ಕಾರ್ಯಕಲಾಪಗಳನ್ನು ಮಾಡಿ ತಾವು ಹೋಗಬೇಕು ಎಂದು ಹೇಳಿ ನಾವು ಇಲ್ಲಿ ನಿರ್ಣಯ ಮಾಡುತ್ತಿದ್ದೇವೆ. ಇವತ್ತು ವಿರೋಧಪಕ್ಷದಲ್ಲಿವತಕ್ಕ ಜನ ಪ್ರಧಾನ ಮಂತ್ರಿಗಳು ಮಾಡಿರತಕ್ಕ ೨೦ ಅಂಶಗಳಿಗೆ ಬೌಂಡೆಡ್ ಲೇಬರರ್ಸ್ ಹಾಗೆ ಕೆಲಸ ಮಾಡಿ ಈ ನಿರ್ಣಯವನ್ನು ತೆಗೆದುಕೊಳ್ಳಬೇಕೇ ? ನಾನು ಹೇಳುತ್ತೇನೆ ತಮ್ಮ ಪಕ್ಷವಾಗಲೀ, ಈ ಪಕ್ಷವಾಗಲೀ, ಯಾವ ಜನತೆಯಿಂದ ನಾವು ಆರಿಸಿ ಬಂದಿದೆಯೋ ಆ ಜನತೆಯ ಸಮಸ್ಯೆಗಳ ಬಗ್ಗೆ ಕುರಿತು ಚರ್ಚೆ ಮಾಡುವುದಕ್ಕೆ ಇಲ್ಲಿ ಅವಕಾಶವಿಲ್ಲ ಎಂದು ಹೇಳಿದರೆ ಬಹುಶಃ ಇದು ಎಂಥಹ ಪ್ರಜಾಪ್ರಭುತ್ವ ? ಜನತೆಯ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಾವು ಪ್ರಶ್ನೆಗಳನ್ನು ಕೇಳುವುದಾದರೆ, ಅದಕ್ಕೂ ಇವರು ತಡೆ ಹಿಡಿಯುತಕ್ಕ ಕಾನೂನನ್ನು ಅನ್ವಯಿಸಿದರೆ ನಾವು ಹೇಗೆ ಕೆಲಸಮಾಡಬೇಕು ? ಇರತಕ್ಕ ಕಾಯಿದೆಯೊಳಗೆ ನಾವು ಸಭೆಯಲ್ಲಿ ಯಾವುದೇ ಒಂದು ಪ್ರಶ್ನೆ ಕೇಳತಕ್ಕದ್ದು ಮತ್ತು ಸರ್ಕಾರದ ಗಮನವನ್ನು ಸೆಳೆಯತಕ್ಕದ್ದು ಇವಕ್ಕೆ ಚುನಾಯಿತ ಪ್ರತಿನಿಧಿಗಳಿಗೆ ಅರ್ಹತೆಯಿಲ್ಲ ಎಂದು ನಾವು ಇಲ್ಲಿಗೆ ಬಂದು ಐದು ವರ್ಷ ಮೂಕ ಪಶುಗಳಂತೆ ಕೆಲಸಮಾಡಿ ನೀವು ಕೊಟ್ಟಂಥ ಕಾರ್ಯಕ್ರಮವನ್ನು ಒಪ್ಪಬೇಕು ಎಂದರೆ ಇದು ಯಾವ ಪ್ರಜಾಪ್ರಭುತ್ವದ ಲಕ್ಷಣ ? ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ದುರ್ದೈವದಿಂದ ೧೯೭೫ರಲ್ಲಿ ಅದಂಥ ಘಟನೆಯಿಂದಾಗಿ,

ಒಂದು ಕಡೆ ಪ್ರಧಾನ ಮಂತ್ರಿಗಳು ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದೂ ಮತ್ತೊಂದು ಕಡೆ ಇನ್ನೊಬ್ಬರನ್ನು ತೆಗೆದುಕೊಳ್ಳಬೇಕು ಎಂದು ಅಸಹಕಾರದ ಪೈಪೋಟಿಯ ಕಾರಣದಿಂದಾಗಿ ದೇಶದಲ್ಲಿ ಕಾಂಗ್ರೆಸ್ ಇಬ್ಭಾಗವಾಯಿತು. ಸ್ವಾತಂತ್ರ್ಯಕ್ಕಾಗಿ ಲಕ್ಷೋಪಲಕ್ಷ ಜನ ಪ್ರಾಣವನ್ನು ಕಳೆದುಕೊಂಡರು. ಕಾಂಗ್ರೆಸ್ ಇಭ್ಭಾಗವಾದ ಮೇಲೆ ಅನೇಕ ದುಷ್ಟ ಶಕ್ತಿಗಳು ಕಾಂಗ್ರೆಸ್ ಅನ್ನು ಸೇರಿದವು ಎಂದರೆ ತಪ್ಪಾಗಲಾರದು. ೧೯೬೯ರಲ್ಲಿ ಕಾಂಗ್ರೆಸ್ ಇಭ್ಭಾಗವಾದಮೇಲೆ ಶ್ರೀಮತಿ ಗಾಂಧಿಯವರು ಆಡಳಿತ ಪಕ್ಷದಿಂದ ಬಂದಂಥ ಸ್ವಾತಂತ್ರ್ಯವನ್ನು ಘೋಷಣೆ ಮಾಡಿದರು, ಇಂದು ಏನಾಗಿದೆ, ಎಂದು ಕ್ರಿಟಿಕಲ್ ಡೆಮಾಕ್ರಸಿಯಾಗಿದೆ ೧೯೭೧ರಲ್ಲಿ ನಡೆದಂಥ ಚುನಾವಣೆಯಲ್ಲಿ ಇಡೀ ರಾಷ್ಟ್ರದ ಜನ ಶ್ರೀಮತಿ ಇಂದಿರಾಗಾಂಧಿಯವರಿಗೆ ಹಿಂದೆ ಬಂದು ಬೆಂಬಲ ಸೂಚಿಸಿದರು. ಈಗ ನಾಲ್ಕು—ನಾಲ್ಕುವರೆ ವರ್ಷವಾಗಿದೆ, ಇವತ್ತು ತಮ್ಮ ೨೦ ಕಾರ್ಯಕ್ರಮಗಳನ್ನು ಜನತೆಯ ಮುಂದೆ ಕೇಂದ್ರ ಸರ್ಕಾರದವರು ಇಟ್ಟಿದ್ದಾರೆ. ಇದರಲ್ಲಿ ಹೊಸ ಅಂಶ ಯಾವುದಾದರೂ ಇದೆಯೇ? ಇನಕಂ ಟ್ಯಾಕ್ಸ್ ರಿಯಾಯಿತಿಯನ್ನು ಕೊಡತಕ್ಕದ್ದನ್ನು ಬಿಟ್ಟರೆ ಬಾಕಿ ಎಲ್ಲಾ ಕಾರ್ಯಕ್ರಮಗಳು ೧೯೭೭ ಕ್ಕೆ ಪೂರ್ವದ ಜನತೆಯ ಮುಂದೆ ಇಟ್ಟಂಥ ಕಾರ್ಯಕ್ರಮಗಳು. ಆರ್ಥಿಕ ಸಮೀಕ್ಷೆಯನ್ನು ನಡೆಸುವುದಕ್ಕೆ ರಚಿಸಿದಂತಹ ಸಮಿತಿಯವರು ತಮ್ಮ ಅಭಿಪ್ರಾಯವನ್ನು ಈಗಾಗಲೆ ವರಮಾನ ತೆರಿಗೆಯ ಬಗ್ಗೆ ಸೂಚಿಸಿದ್ದಾರೆ, ಗೃಹನಿರ್ಮಾಣ ಯೋಜನೆಗೆ ನಾವು ನಮ್ಮ ಸಹಕಾರವನ್ನು ಕೊಡಲಿಲ್ಲವೇ ? ಬಾಂಗ್ಲಾ ತೆರಿಗೆಯನ್ನು ಮತ್ತೆ ಕೊಡಬೇಕು ಎಂದು ಕೇಳಿದಾಗ ನಾವು ಅದಕ್ಕೆ ಮನ್ನಣೆ ಕೊಡಲಿಲ್ಲವೇ ? ಭೂಸುಧಾರಣೆಯನ್ನು ಜಾರಿಗೆ ತರತಕ್ಕದ್ದಕ್ಕೆ ನಾವು ಸಹಕಾರವನ್ನು ಕೊಡಲಿಲ್ಲವೆ ? ಬಹುಶಃ ಇತ್ತ ಕಡೆ ಎಲ್ಲಾ ತಿದ್ದುಪಡಿಗಳನ್ನು ವಾಪಸ್ ತೆಗದುಕೊಂಡು ತಮ್ಮ ಬಿಲ್ಲನ್ನು ಪಾಸ್ ಮಾಡುವುದಕ್ಕೆ ಅವಕಾಶ ಮಾಡಿದ್ದೇವೆ ನಾನು ಕೇಳುತ್ತೇನೆ, ತಾವು ಯಾವ ಒಂದು ಕಾಯಿದೆಯನ್ನು ಮಾಡಿದ್ದಿರೋ ಆ ಕಾಯಿದೆಗೆ ನಾವು ಮನ್ನಣೆ ಕೊಡಲಿಲ್ಲವೆ ? ಯಾವ ಅರ್ಥಿಕ ಕಾರ್ಯಕ್ರಮಗಳ ಬಗ್ಗೆ ನಾವು ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಎನ್ನುವುದನ್ನು ಹೇಳಿ ? ಚುನಾವಣೆಯ ಪ್ರಣಾಳಿಕೆಯಲ್ಲಿ ಮತ್ತೊಂದು ಮಾತನ್ನು ಹೇಳಿಕೊಂಡು ಬಂದಿದ್ದಾರೆ, ಅದನ್ನು ನಮ್ಮ ಮಿತ್ರರು ಬಹಳ ಅರ್ಥಗರ್ಭಿತವಾಗಿ ಹೇಳಿದ್ದಾರೆ. ಶ್ರೀಮತಿ ಗಾಂಧಿಯವರು ಅಧಿಕಾರದಲ್ಲಿ ಇರಬೇಕು ಎಂದು ಹೇಳಿ, ದೇವೆಗೌಡರು ಪಟ್ಟಭದ್ರಹಿತಾಸಕ್ತಿಗಳು ಎಂದು ಹೇಳುತ್ತಾರೆ. ೧೯೭೬ನೇ ಇಸವಿಯ ತನಕ ಯಾರು ಒಂದು ಸಾವಿರ ಕೋಟಿ ರೂಪಾಯಿಗಳನ್ನು ಮಾಡಿದ್ದಾರೋ ಯಾರು ಅಷ್ಟು ಆಸ್ತಿಯನ್ನು ಮಾಡಿದ್ದಾರೋ ಅವರು ಇವತ್ತು ಸಮಾಜವಾದಿಗಳು. ಇದನ್ನು ದೇವೇಗೌಡರು ಹೇಳಿದರೆ ಅವರು ಪ್ರತಿಗಾಮಿಗಳು. ಇವತ್ತು ನಾನು ಕೇಳುತ್ತೇನೆ. ಈ ೨೦ ಅಂಶಗಳ ಕಾರ್ಯಕ್ರಮಕ್ಕೆ ನಾವು ಎಂದು ಅಡ್ಡಿಯನ್ನು ತಂದಿದ್ದೇವೆ ? ಇದನ್ನು ತಾವುಪ್ರಾಮಾಣಿಕವಾಗಿ ಹೇಳಬೇಕು, ಕೇಂದ್ರ ಸರ್ಕಾರದಿಂದ ಈ ೨೦ಅಂಶಗಳ ಘೋಷಣೆಯನ್ನು ಹೊರಡಿಸಿದ್ದಾರೆ ಅವರಲ್ಲಿ ಬಹುಪಾಲು ಅಂಶಗಳನ್ನು ಕರ್ನಾಟಕ ಸರ್ಕಾರದವರು ಮಾಡಿದ್ದಾರೆಂದರೆ ಅದು ತಪ್ಪಾಗಲಾರದು. ಹಲವಾರು ಲೋಪದೋಷಗಳನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ ಹೊರತು ನಾವು ಯಾವ ಅಡ್ಡಿಯನ್ನು ಇದರ ಬಗ್ಗೆ ತಂದಿಲ್ಲ. ಇವತ್ತು ಆರ್ಥಿಕ ಕಾರ್ಯಕ್ರಮಗಳನ್ನು ಜಾರಿಗೆ ತರತಕ್ಕ ಕ್ರಮವಾಗಿ ಸಭೆಯ ಸದಸ್ಯರ ಹಕ್ಕು ಭಾದ್ಯತೆಗಳನ್ನು ಕಿತ್ತು ಹಾಕತಕ್ಕದ್ದು ಯೋಗ್ಯವೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಗಳೇ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ ಪ್ರಧಾನ ಮಂತ್ರಿಗಳು ಒಂದು ಸಾರಿ ಹೇಳುತ್ತಾರೆ, 'ಕಂಟ್ರಿ ಈಸ್ ಇಂಪಾರ್ಟೆಂಟ್ ದ್ಯಾನ್ ಡೆಮಾಕ್ರಸಿ' ಎಂದು. ಬಹುಶಃ ಪ್ರಜಾಪ್ರಭುತ್ವದ ಬಗ್ಗೆ ಅವರು ಇಷ್ಟೊಂದು ಹಗುರವಾಗಿ ಕಾಣುವುದಿಲ್ಲ, ಎಂದು ನನ್ನ ಭಾವನೆ ಪ್ರಜಾತಂತ್ರಕ್ಕೆ ಯೋಗ್ಯವಾಗಿರತಕ್ಕ ಯಾವ ವ್ಯಕ್ತಿಯೂ ಕೂಡ ಇದನ್ನು ಒಪ್ಪುವುದಕೆ ಸಿದ್ಧವಿಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ ಬಹುಶಃ ತಮ್ಮ ಮನಸ್ಸಿನಲ್ಲಿ ಒಂದು ಭಾವನೆ ಇರಬಹುದು. ಅದು ವಿರೋಧಿ ಪಕ್ಷಗಳನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ಯಶಸ್ವಿಯಾಗುತ್ತೇವೆ ಎಂದು. ಆದರೆ, ನಾನು ಇಷ್ಟು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ—ಪ್ರಾಮಾಣಿಕವಾಗಿ ಯೋಚನೆ ಮಾಡಿ, ಈ ಸದನದ ಸದಸ್ಯರಿಗೆ ಇರತಕ್ಕ ಹಕ್ಕುಬಾದೆ [illegible] ಕೇವಲ ವಿರೋಧಿ ಪಕ್ಷಗಳ ಸದಸ್ಯರಿಗೆ ಮಾತ್ರ ಸೀಮಿತವಲ್ಲ. ಇವತ್ತಿನ ದಿವಸ ಸರ್ಕಾರದ ವಿರುದ್ಧಕ್ಕಾಗಿ ಯಾರಾದರೂ ಯಾವುದೇ ಒಂದು ಮಾತನ್ನು ಹೇಳಿದರೆ ಅವರನ್ನು ಹತ್ತಿಕ್ಕುವುದಕ್ಕೆ ಸಾಕಾದಷ್ಟು ಅವಕಾಶ ಇದೆ ಇದೊಂದನ್ನು ದೃಷ್ಟಿಯಲ್ಲಿಟ್ಟುಕೊಂಡು, ತುರ್ತುಪರಿಸ್ಥಿತಿ ಮುಖೇನ, ಅವರೆ ಚೌಕಟ್ಟಿನೊಳಗೆ ಕೆಲಸ ಮಾಡುವುದಕ್ಕೆ ಹೊರಟಿದ್ದೀರಿ. ಇವತ್ತಿನ ದಿವಸ ಒಬ್ಬ ನಿರಪರಾಧಿಯಾದ ವ್ಯಕ್ತಿಯನ್ನು ಬಂಧಿಸಿದರೆ ಅವನು ಕೋರ್ಟಿಗೆ ಹೋಗುವುದಕ್ಕೂ ಅವಕಾಶವಿಲ್ಲದಾಗಿದೆ. ಅಷ್ಟೇ ಸಾಲದು ಎಂಬಂತೆ ಈ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶ ಇಲ್ಲದೇ ಇರತಕ್ಕದ್ದು. ಮತ್ತು ಜನತೆಯ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಕಳುಹಿಸುವುದಕ್ಕೂ ಅವಕಾಶ ಇಲ್ಲದೇ ಇರತಕ್ಕದ್ದು ಎಂದರೆ ಹೇಗೆ ? ಇನ್ನು ಮ...ವಾಗಿದೆ ಒರುವಂಥ ಸಂವಿಧಾನದ ೩೯ನೇ ಕಲಂನ ತಿದ್ದುಪಡಿಯಲ್ಲಿ, ನಿರಪರಾಧಿಯಾದ ವ್ಯಕ್ತಿಯೊಬ್ಬನು ಬಂಧನ

ಕ್ಕೊಳಗಾದರೆ, ಆತ ನ್ಯಾಯಾಲಯದಲ್ಲಿ ನ್ಯಾಯವನ್ನು ದೊರಕಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಇದನ್ನು ನಾವು ಪ್ರಾಮಾಣಿಕವಾಗಿ ಯೋಚನೆ ಮಾಡೋಣ. ಒಂದು ವೇಳೆ, ರಾಜ್ಯ ಸರಕಾರದ ಮುಖ್ಯ ಮಂತ್ರಿಗಳು ತಮ್ಮ ರಾಜಕೀಯ ವಿರೋಧಿ ಶಕ್ತಿಗಳನ್ನು ಬಗ್ಗುಬಡಿಯಬೇಕು ಎನ್ನುವಂಥ ಒಂದು ದುಷ್ಕೃತ್ಯಕ್ಕೆ ಕೈಹಾಕತಕ್ಕದ್ದು ಇದ್ದರೆ, ನಾನು ಕೇಳುತ್ತೇನೆ ಅವನಿಗೆ ವೆಂಟಿಲೇಷನ್ ಬೇಡವೇ ? ಅವನಿಗೆ ನ್ಯಾಯಾಲಯದ ಮುಂದೆ ತನ್ನ ಒಂದು ನ್ಯಾಯವನ್ನು ಕೇಳುವುದಕ್ಕೆ ಅವಕಾಶ ಬೇಡವೇ ? ದಯಮಾಡಿ, ಮಾನ್ಯ ಮುಖ್ಯ ಮಂತ್ರಿಗಳು ಸದನಕ್ಕೆ ತಿಳಿಸಬೇಕು. ಒಂದು ಕಡೆ ನ್ಯಾಯ ಬೇಡುವುದನ್ನು ತಡೆಗಟ್ಟುವುದು, ಮತ್ತೊಂದು ಕಡೆ ಜನತೆಗೆ ಸಂಬಂಧಪಟ್ಟ ಪ್ರಶ್ನೆಗಳನ್ನು, ಸಮಸ್ಯೆಗಳನ್ನು ಸರಕಾರಕ್ಕೆ ಪ್ರಶ್ನೆ ಹಾಕುವುದರ ಮೂಲಕ, ಗಮನ ಸೆಳೆಯುವ ಮೂಲಕ ಚರ್ಚೆ ಮಾಡುವುದಕ್ಕೆ ಅಥವಾ ಸರಕಾರವೇನಾದರೂ ಕರ್ತವ್ಯ ಲೋಪ ಮಾಡಿದ್ದರೆ, ಅದನ್ನು ನಿಯಮಾವಳಿಗಳ ಪ್ರಕಾರ ಸರಕಾರಕ್ಕೆ ತಿಳಿಸುವುದಕ್ಕೆ ಇರುವ ಒಂದು ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರೆ ಇದು ಯಾವ ನ್ಯಾಯ ? ಅಷ್ಟೇ ಅಲ್ಲದೇ, ಈ ಸದನದ ಕಾರ್ಯಕಲಾಪಗಳೂ ಕೂಡ ಪತ್ರಿಕೆಯಲ್ಲಿ ವರದಿಯಾಗಕೂಡದು ಎನ್ನುವಂಥ ನಿಬಂಧನೆಯನ್ನು ಏನು ಹಾಕಿದ್ದೀರಿ, ಈ ಒಂದು ಕೆಲಸ ಪ್ರಜಾಪ್ರಭುತ್ವವನ್ನು ರಕ್ಷಿಸುತ್ತದೆ ಎನ್ನುತಕ್ಕಂಥಾ ವಾದ ತಿರುಳಿಲ್ಲದ ವಾದ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ ಆದುದರಿಂದ. ನಾನು ತಮಗೆ ತಿಳಿಸುವುದೇನೆಂದರೆ. ಯಾರೂ ಶಾಶ್ವತವಾಗಿ ಅಧಿಕಾರದಲ್ಲಿರುವುದಕ್ಕೆ ಸಾಧ್ಯವಿಲ್ಲ ಬಹುಶಃ ನೀವು ಈಗ ಅಧಿಕಾರದಲ್ಲಿರತಕ್ಕವರು ಆಜೀವಪರ್ಯಂತವಾಗಿ ಅಧಿಕಾರದಲ್ಲಿರುತ್ತೇವೆ ಎಂದು ಮನಸ್ಸು ಮಾಡಿಕೊಂಡಿದ್ದರೆ, ಅದು ಸಾಧ್ಯವಿಲ್ಲ. ಇದೇ ಕಾನೂನು, ಇನ್ನೊಬ್ಬ ತಿಳಿಗೇಡಿ ವ್ಯಕ್ತಿ ಅಧಿಕಾರಕ್ಕೆ ಬಂದಾಗ, ಅವನ ಕೈಗೆ ಸಿಕ್ಕಿದರೆ ಅದರಿಂದಾಗತಕ್ಕ ಅನಾಹುತಗಳೇನು ಎಂಬುವುದನ್ನು ತಾವು ಸ್ವಲ್ಪ ಆಲೋಚನೆ ಮಾಡಬೇಕಾಗುತ್ತದೆ. ಆದುದರಿಂದ, ಯಾವ ವ್ಯಕ್ತಿಯೂ ಕೂಡ ಆಜೀವಪರ್ಯಂತ ಅಧಿಕಾರದಲ್ಲಿರಲು ಸಾಧ್ಯವಿಲ್ಲ. ರಾಜಕೀಯ ಚೌಕಟ್ಟಿನಲ್ಲಿ ಕೆಲಸ ಮಾಡುವಂಥ ಕಾಲದಲ್ಲಿ, ಇಂಥಾ ಕೆಲವು ನಿರ್ಣಯಗಳನ್ನು ಮಾಡುವುದರ ಮೂಲಕ ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ಬೆಳಸಲಿಕ್ಕೆ ಹೊರಟಿದ್ದೇವೆ ಎಂದು ಹೇಳತಕ್ಕ ಮಾತು ಏನು ಇದೆ, ಅದು ಅರ್ಥರಹಿತವಾದ ಮಾತು ಪ್ರಜಾಪ್ರಭುತ್ವವನ್ನು ರಕ್ಷಿಸಬೇಕಾದರೆ ಅದು ತುರ್ತುಪರಿಸ್ಥಿತಿ ಮುಖಾಂತರವಲ್ಲ ; ಹಾಗೆ ಮಾಡಿದರೆ ಅದು ಯೋಗ್ಯವಾದುದಲ್ಲ. ಆದುದರಿಂದ, ಈ ಒಂದು ನಿರ್ಣಯ ಏನು ಇದೆ. ಅದರ ಬಗ್ಗೆ ಪಕ್ಷಾತೀತವಾದ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ

ದಿವಂಗತ ಪಂಡಿತ ಜವಹರಲಾಲ್ ನೆಹರು ಅವರು ಒಬ್ಬ ಉನ್ನತ ವ್ಯಕ್ತಿ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಪಂಡಿತ ಜವಹರಲಾಲ್ ನೆಹರೂ ಅವರು ಆದರ್ಶ ಪ್ರಜಾಪ್ರಭುತ್ವವಾದಿಗಳಾಗಿದ್ದರು. ಇಂಥವರ ಲಕ್ಷೋಪಲಕ್ಷ ಜನರ ತಪೋಬಲದಿಂದ ಗಳಿಸಿದ ಸ್ವಾತಂತ್ರ್ಯವನ್ನು ಇವತ್ತಿನ ದಿವಸ ಅವಸಾನ ಸ್ಥಿತಿಗೆ ತೆಗೆದುಕೊಂಡು ಹೋಗತಕ್ಕದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವುದು ಬೇಡ ಎಂದು ಹೇಳುತ್ತೇನೆ. ನಾನು ಈ ಮಾತನ್ನು ನೊಂದ ಮನಸ್ಕನಾಗಿ ಹೇಳುತ್ತಿದ್ದೇನೆ. ಪ್ರಜಾಪ್ರಭುತ್ವವನ್ನು ರಕ್ಷಿಸುವುದಕ್ಕೆ ನಮ್ಮ ಸಹಕಾರವನ್ನು ಕೊಡಲಿಕ್ಕೆ ನಾವು ಯಾವಾಗಲೂ ಸಿದ್ಧರಿದ್ದೇವೆ. ನನ್ನ ಅಭಿಪ್ರಾಯವೇ ಬೇರೆ, ತಮಗೆ ಗೊತ್ತಿರಬಹುದು, ನಾನು ಅನೇಕ ಸಂದರ್ಭಗಳಲ್ಲಿ ಈ ಸದನದಲ್ಲಿ ಹೇಳಿದ್ದೇನೆ. ಹುಡುಗರನ್ನು, ವಿದ್ಯಾರ್ಥಿಗಳನ್ನು ಪ್ರಚೋದನೆ ಮಾಡಿ, ನಾನು ಯಾರನ್ನೂ ಇಕ್ಕಟ್ಟಿಗೆ ಸಿಕ್ಕಿಸುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೇನೆ. ಎನ್.ಜಿ.ಓ. ಗಳಿಗೆ ವೇತನ ಕೊಡತಕ್ಕ ವಿಷಯ ಬಂದಾಗಲೂ ಕೂಡ ನನ್ನ ಅಭಿಪ್ರಾಯವನ್ನು ಹೇಳಿದ್ದೇನೆ, ಅಧಿಕಾರದಲ್ಲಿ ಇದ್ದು ಕೆಲಸ ಮಾಡತಕ್ಕ ಕಾಲದಲ್ಲಿ ಜನತೆಗೆ ನಾನು ಉಪಯೋಗವೊಂದನ್ನು ಹೊರತು ಅವರ ಅಭಿವೃದ್ಧಿಗೆ ಅಡ್ಡಿ ತರತಕ್ಕಂಥ ಕೆಳಮಟ್ಟದ ರಾಜಕೀಯಕ್ಕೆ ನಾನು ಕೈಹಾಕುವವನಲ್ಲ. ಪ್ರಜಾಪ್ರಭುತ್ವವನ್ನು ಉಳಿಸಬೇಕು ಎನ್ನುವುದರ ಬಗ್ಗೆ ವಿರೋಧಿ ಪಕ್ಷಗಳ ವತಿಯಿಂದ ತಮಗೆ ಯಾವ ಸಹಕಾರ ಬೇಕು ಅವೆಲ್ಲವನ್ನೂ ಒದಗಿಸುವುದಕ್ಕೆ ನಾನು ಸಿದ್ಧನಿದ್ದೇನೆ. ಈ ಮಾತನ್ನು ನಾನು ಪ್ರಾಮಾಣಿಕತೆಯಿಂದ ಹೇಳುತ್ತೇನೆ. ಆದರೆ, ಈ ಒಂದು ನಿರ್ಣಯ ಏನು ಇದೆ, ಇದನ್ನು ಕೇವಲ ವಿರೋಧಿ ಪಕ್ಷಗಳನ್ನು ಹತ್ತಿಕ್ಕುವುದಕ್ಕೆ ಮಾತ್ರ ತೆಗೆದುಕೊಂಡುಬಂದಿದ್ದರೆ. ಅದರ ಕಾವು ಇಂದಲ್ಲ ನಾಳೆ ತಮಗೂ ಮುಟ್ಟುತ್ತದೆ ಎಂದು ತಿಳಿಸುತ್ತೇನೆ. ಸ್ವಾತಂತ್ರ್ಯವನ್ನು ಗಳಿಸುವುದಕ್ಕೆ ಮತ್ತು ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕೆ ಅನೇಕ ಜನ ದುಡಿದಿದ್ದಾರೆ. ಅವರಲ್ಲಿ ಅನೇಕರು ಈ ಸದನದಲ್ಲಿ ಇದ್ದಾರೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಯಾವುದೋ ರಾಜಕೀಯ ಭೇದಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂಥ ಅನೇಕ ವ್ಯಕ್ತಿಗಳನ್ನು ಇವತ್ತಿನ ದಿವಸ ಸೆರೆಮನೆಯಲ್ಲಿ ಇಟ್ಟು. ನಾವು ಪ್ರಜಾಪ್ರಭುತ್ವ ರಕ್ಷಣೆಗೆ ಹೊರಟಿದ್ದೇವೆ, ಇದು ಯಾವ ನ್ಯಾಯ? ಇವತ್ತಿನ ದಿವಸ ಅನೇಕ ಜನರು ಇದನ್ನು ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ. ಆದರೆ, ಸನ್ನಿವೇಶಕ್ಕೆ ಬಲಿಯಾಗಿ, ತಮ್ಮ ಮನಸ್ಸಿನಲ್ಲಿ ಏನು ಅಭಿಪ್ರಾಯವಿದ್ದರೂ ಅದನ್ನು ಹೊರಗೆಡುವುದಕ್ಕೆ ಸರ್ವಸ್ವಾತಂತ್ರ್ಯ ಇಲ್ಲದಾಗಿದೆ. ಹಾಗೇನಾದರೂ ಹೊರಗೆಡುವುದಕ್ಕೆ ಪ್ರಯತ್ನ ಮಾಡಿದರೆ, ಕೆಲವು ಮಿತ್ರರಿಗೆ ಆಗಿರತಕ್ಕ ಶಾಸ್ತಿ ನಮಗೂ ಆಗುತ್ತದೆ ಎನ್ನುವುದು ಈಗಾಗಲ

ನಿದರ್ಶನವಾಗಿದೆ. ಅದು ತಮಗೂ ಗೊತ್ತಿದೆ. ಆದುದರಿಂದ, ಇವತ್ತಿನ ದಿವಸ ನಮ್ಮ ದೇಶದಲ್ಲಿ ಉಂಟಾಗಿರತಕ್ಕ ಪ್ರಜಾಪ್ರಭುತ್ವದ ಅವಸಾನವನ್ನು ತಡೆಹಿಡಿಯಲಿಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಪ್ರಯತ್ನ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಮ್ಮ ಪಕ್ಷದ ವತಿಯಿಂದ ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ಇರತಕ್ಕ ಯಾವವೊಬ್ಬ ವ್ಯಕ್ತಿಯ ಸಹಕಾರವನ್ನಾಗಲೀ ತೆಗೆದುಕೊಳ್ಳಿ, ನಮ್ಮ ಕಡೆಯಿಂದ ಯಾವುದೇ ಬೇಷರತ್ ಸಹಕಾರ ಕೊಡಲಿಕ್ಕೆ ನಾವು ತಯಾರಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಸ್ಪಷ್ಟ ಪಡಿಸಬಯಸುತ್ತೇನೆ. ಆದರೆ, ಪ್ರಜಾಪ್ರಭುತ್ವವನ್ನು ಬೆಳೆಸಲಿಕ್ಕೆ ಬದಲಾಗಿ, ಅವರ ಕೊನೇ ಉಸಿರನ್ನು ಮುಚ್ಚಿ ಚರಮ ಗೀತೆ ಹಾಡುವುದು ಬೇಡ ಎಂದು ನಾನು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ನಮ್ಮ ಭಾರತ ದೇಶ ಅಭದ್ರವಾಗಲಿ ಎನ್ನುವ ಹಂಬಲ ಹೊರದೇಶಗಳಿಗೆ ಇರಬಹುದು. ಇಲ್ಲಿ ಎಡ ಬಣ ಮತ್ತು ಬಲ ಬಣ ಎಂದು ಇರುವವರೆಲ್ಲಾ ಬೇಡ. ಎಲ್ಲರಿಗೂ ಸ್ವಾರ್ಥ ಎನ್ನುವುದು ಇದೆ. ಭಾರತ ದೇಶ ಅಭದ್ರವಾದರೆ, ಅದರ ಪ್ರಯೋಜನವನ್ನು ಪಡೆಯಬಹುದು ಎನ್ನುವಂಥ ಸ್ವಾರ್ಥ ಪ್ರತಿಯೊಬ್ಬರಿಗೂ ಇದೆ ಆದುದರಿಂದ, ಅಂಥಾ ಒಂದು ಪರಿಸ್ಥಿತಿಗೆ ನಮ್ಮ ದೇಶವನ್ನು ಕೊಂಡೊಯ್ಯುವುದು ಬೇಡ. ಈ ದೇಶ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಭದ್ರ ಬುನಾದಿಯ ಮೇಲೆ ಬೆಳೆಯಬೇಕಾದರೆ, ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ, ತಾವು ತೆಗೆದುಕೊಳ್ಳತಕ್ಕ ಯಾವುದೇ ಕಾರ್ಯಕ್ರಮಗಳಿಗೆ ನಮ್ಮ ಬೆಂಬಲ ಇದೆ ಎನ್ನುವ ಮಾತನ್ನು ನಾನು ವಿರೋಧಿ ಪಕ್ಷಗಳ ವತಿಯಿಂದ ಸ್ಪಷ್ಟ ಪಡಿಸುತ್ತೇನೆ. ಆದುದರಿಂದ ತಾವು ದಯುಮಾಡಿ ಈ ಒಂದು ನಿರ್ಣಯ ಏನು ಇದೆ, ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಾನು ಒಂದು ಆಶ್ವಾಸನೆಯನ್ನು ಕೊಡಬಯಸುತ್ತೇನೆ, ಅದೇನೆಂದರೆ, ಈ ಸದನ ನಡೆಯುವವರೆಗೂ ತುರ್ತುಪರಿಸ್ಥಿತಿ ಬಗ್ಗೆ ಯಾವುದೇ ಪ್ರಶ್ನೆಗಳನ್ನು ಕಳುಹಿಸುವುದಿಲ್ಲ ; ನಾವು ತುರ್ತುಪರಿಸ್ಥಿತಿ ಬಗ್ಗೆ ಪ್ರಸ್ತಾಪ ಮಾಡುವುದೇ ಬೇಡ. ಸೇಲ್ಸ್ ಟ್ಯಾಕ್ಸ್ ಬಿಲ್ಲಿಗೂ ಪ್ರಶ್ನೋತ್ತರ ವೇಳೆಗೂ ಏನು ಸಂಬಂಧ ? ಯೂನಿವರ್ಸಿಟಿ ಬಿಲ್ಲಿಗೂ ಪ್ರಶ್ನೋತ್ತರ ವೇಳೆಗೂ ಏನು ಸಂಬಂಧ ? ಆದುದರಿಂದ, ನಾನು ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಕೊನೆಯದಾಗಿ ನಾನು ಪ್ರಧಾನ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಭಾರತ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಇತಿಶ್ರೀ ಹಾಡಿದ ಕೆಟ್ಟ ಹೆಸರು ಅವರ ವಂಶಕ್ಕೆ ಬರುವುದು ಬೇಡ ಅವರು ಒಬ್ಬರೇ ಇದಕ್ಕಾಗಿ ದುಡಿದಿಲ್ಲ ; ಅನೇಕ ಜನ ದುಡಿದಿದ್ದಾರೆ. ಆದರೆ, ಇಂತಹವರ ಮುಖಂಡತ್ವದಲ್ಲಿ ಪ್ರಜಾಪ್ರಭುತ್ವ ಭಾರತದಲ್ಲಿ ಅವಸಾನವಾಯಿತು ಎನ್ನುವುದು ಬೇಡ ಆದರೆ, ನಾನು ಈ ಸ್ಥಾನದಲ್ಲಿ ಉಳಿಯಬೇಕು ಎನ್ನುವಂಥ ಒಂದು ಹಂಬಲದಿಂದ ಈ ಮಾತನ್ನು ಹೇಳುತ್ತಾ ಇಲ್ಲ. ಭಾರತ ದೇಶದಲ್ಲಿ ಪ್ರಜಾಪ್ರಭುತ್ವ ಉಳಿದರೆ, ರಾಜಕೀಯ ಪಕ್ಷಗಳು ಉಳಿಯುತ್ತವೆ. ಆದರೆ, ಇಲ್ಲಿ ಪಕ್ಷ, ಅಥವಾ ರಾಜಕಾರಣ ಮುಖ್ಯವಲ್ಲ. ಆದುದರಿಂದ, ಮಾನ್ಯ ಸಂಸದೀಯ ಸಚಿವರು ಸಭೆಯಲ್ಲಿ ಮಂಡಿಸಿರತಕ್ಕ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕಳಕಳಿಯಿಂದ ಮನವಿ ಮಾಡಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

MR. DEPUTY CHIRMAN.—Mr. T.R. Shamanna has sent me a letter I would request him to explain what it is.

SRI T. R SHAMANNA —Sir, while speaking in the morning, I made a reference to grant of a piece of land to the husband of a Minister I regret for having made that remark without verification. The land was granted to another person of the same name. Therefore, please permit me to withdraw the remark I have made. But my allegation that favouritism has been shown to that person stands.

SRI D DEVARAJ URS.—I was not here when he made that remark. But I was told that he had taken a challenge on the ground that Government has sanctioned some Corporation land to the husband a lady Minister. Anyway, I am glad that he has taken pains verify the facts well within time...

SRI S. M. KRISHNA.—We took pains to verify and we informed him that it is worng.

SRI D. DEVARAJ URS.—So, sense has dawned on him well within time because I am told that he had taken a challenge.

SRI T. R. SHAMANNA.—I take full responsibilitey for whatever I have said but the only thing is that I regret for having mada a remark without verification.

SRI D. DEVARAJ URS.—Then the other piont that he has referred to is also a mistake His allegation was that some gentleman by name Soni has been given land near Uls or Fan by this Government which is also totally far, faraway from truth.

SRI T. R. SHAMANNA.—I never said that. I only referred to the huts built thereon.

SRI D. DEVARAJ URS.—But that was not given during our regime but during the previous regime.

SRI D. POOSALINGAM.—That was given to Soni only.

SRI D. DEVARAJ URS.—During what period ?

SRI D. POSALINGAM.—During the period of the Administrator in the year 1966.

SRI T. R SHAMANNA.—What I said was that land was given to Soni and huts are being constructed thereon with the assistance of Congress Party pudaries.

SRI D. DEVARAJ URS.—He was also a Congress pujari once

SRI T. R. SHAMANNA.—The referance was made to land.

SRI D. DEVARAJ URS.—This has been going on since Adam's days. When he was in the party he knows about it. Why does he refer only to this instance ? It has gone on since many years and is going on even today. Let him write to us.

SRI T. R. SHAMANNA.—I have already writien.

SRI D DEVARAJ URS —Then we will taken action.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಉಪಾಧ್ಯಕ್ಷರೆ, ಈ ಗೊತ್ತುವಳಿಯನ್ನು ನಾನು ಸದನದ ಮುಂದೆ ಮಂಡಿಸಿದಾಗ ಈ ದೇಶದಲ್ಲಿ ಜಾರಿಯಲ್ಲಿರತಕ್ಕ ತುರ್ತು ಪರಿಸ್ಥಿತಿ ಘೋಷಣೆಯ ಗುಣಾವಗುಣಗಳ ಅವಶ್ಯಕತೆ ಅನಾವಶ್ಯಕತೆಗಳ ಬಗ್ಗೆ ವ್ಯಾಖ್ಯಾನ ಮಾಡುವ ಅವಕಾಶ ಬರುತ್ತದೆ ಎಂದು ನಾನು ನಿರೀಕ್ಷಿಸಿರಲಿಲ್ಲ. ಏಕೆಂದರೆ ಅದು ಈ ಸದನದ ಕಾರಣವಲ್ಲ. ಈ ಸದನದ ಜವಾಬ್ದಾರಿ ಅಲ್ಲ ಈ ಸದನಕ್ಕೆ ಸೇರಿದಂತಹ ವಿಚಾರವೂ ಅಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ನೀವು ಹೇಳಿದ ರೆಸಲ್ಯೂಷನ್ ವಿತ್‌ಡ್ರಾ ಮಾಡಿಕೊಳ್ಳಿ.

ಶ್ರೀ ಎಸ್. ಎಂ. ಕೃಷ್ಣ.—೩೫೨ನೇ ವಿಧಿಗನುಗುಣವಾಗಿ ರಾಷ್ಟ್ರಪತಿಗಳಿಗೆ ಎಮರ್ಜೆನ್ಸಿ ಎಗ್ಸಿಸ್ಟ್ ಎನ್ನತಕ್ಕದ್ದು ಸ್ಯಾಟಿಸ್‌ಫೈ ಆಗಬೇಕು.

ಶ್ರೀ ಎಚ್. ಡಿ. ದೇವೇಗೌಡ.— ನಾವು ವಿರೋಧಪಕ್ಷಗಳವರು ಸರ್ಕಾರಕ್ಕೆ ಕಿರುಕುಳ ಕೊಡಲಿಲ್ಲ, ಮುಖ್ಯಮಂತ್ರಿಗಳ ಮೇಲೆ ಗದಾಪ್ರಹಾರ ಮಾಡಲಿಲ್ಲ ನಾವೇನೂ ಗುದ್ದಾಡುವುದಕ್ಕೆ ಹೋಗಲಿಲ್ಲ. ಈ ಪ್ರಶ್ನೋತ್ತರ ವೇಳೆಯನ್ನು ಏತಕ್ಕೆ ತೆಗೆದುಹಾಕುತ್ತಿದ್ದೀರಿ ?

SRI S. M. KRISHNA.—When they were speaking, most of the time I was temted to get up and retort but I exercised self restraint. I would expect the same treatment from my learned friends from the other side We appreciate their co-operation and welcome it. Particularly the speech of the Leader of the Opposition was a moving one. He traced the history of the division of the Congress Party, the freedom movement and all that But I wish the same appeal were directed to those leaders who created conditions of anarchy in the country. ತುರ್ತುಪರಿಸ್ಥಿತಿ ಬರುವುದಕ್ಕಿಂತ ಮುಂದೆಯೂ ಇವರು ಪ್ರಧಾನ ಮಂತ್ರಿಗಳಾಗಿದ್ದರು, ಈ ತುರ್ತುಪರಿಸ್ಥಿತಿ ಬಂದಮೇಲೂ ಕೂಡ ಪ್ರಧಾನ ಮಂತ್ರಿಗಳೇ ಆಗಿದ್ದಾರೆ. ಇವತ್ತು ಈ ತುರ್ತು ಪರಿಸ್ಥಿತಿ ಎನ್ನುವುದು ಒಂದು ಫೋಬಿಯ. ಅವರು ಸರ್ವಾಧಿಕಾರಿ, ಇವರು ಸರ್ವಾಧಿಕಾರಿ ಎಂದು ಹಿಂದೆಯೂ ಹೇಳುತ್ತಿದ್ದರು. ಇವತ್ತು ಪ್ರಧಾನಮಂತ್ರಿಗಳನ್ನು ಸರ್ವಾಧಿಕಾರಿ ಎಂದು ಕರೆದರೆ ಅದಕ್ಕೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಈ ನಿಲುವನ್ನು, ಧೋರಣೆಯನ್ನು ಅಷ್ಟು ತೀವ್ರವಾಗಿ ತೆಗೆದುಕೊಳ್ಳಬೇಕಾಗಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಪ್ರಧಾನ ಮಂತ್ರಿಗಳ ಬಗ್ಗೆ ಸೀರಿಯಸ್ ಆಗಿರುವಷ್ಟು ನಾವು ಸೀರಿಯಸ್ ಆಗಿಲ್ಲ.

ಶ್ರೀ ಎಸ್. ಎಂ ಕೃಷ್ಣ.—ದೇಶದಲ್ಲಿ ಏನೊಂದು ಪರಿಸ್ಥಿತಿ ಉಂಟುಮಾಡಿದ್ದೀರಿ ಎಂದರೆ de-recognition of Goverments, no tax campaign, ಪ್ರಧಾನಮಂತ್ರಿಗಳು constitutionally she cannot continue as Prime Minister. ಸುಪ್ರೀಂಕೋರ್ಟ್ ತೀರ್ಮಾನ ಕೊಟ್ಟ ಮೇಲೆ constitutionally ಬೇಡ, morally she has no right to continue we shall not allow her to continue as Prime Minister, we shall not allow Parliament to function ಎಂದು ಹೇಳಿ......

SRI KONANDUR LINGAPPA.—Why did you remove Dr Channa Reddy ?

ಶ್ರೀ ಎಸ್ ಎಂ. ಕೃಷ್ಣ. ಅವರು ಕವಿತೆ ಹಾಡಿದಾಗ ನಾನು ಹೀಗೆ ಮಾತನಾಡಲಿಲ್ಲ. ಅವರು ನನ್ನ ಸ್ನೇಹಪೂರ್ವಕವಾದ ಸದಸ್ಯರು. ಈಗ ಆತ್ಮ ಪರಿಶೋಧನೆ ನಿಮ್ಮಲ್ಲಿ ಆಗಬೇಕೆ ಅಥವಾ ನಮ್ಮಲ್ಲಿ ಆಗಬೇಕೆ ಎಂಬುದು.

ಶ್ರೀ ಕಾಗೋಡು ತಿಮ್ಮಪ್ಪ.—ಈ ಆತ್ಮಪರಿಶೋಧನೆ ಎಲ್ಲರಲ್ಲೂ ಆಗಬೇಕು.

ಶ್ರೀ ಎಸ್.ಎಂ. ಕೃಷ್ಣ.– ಯಾರಿಗೇ ಈ ದೇಶದಲ್ಲಿ ಪ್ರಜಾಪ್ರಭುತ್ವ ಉಳಿದುಕೊಳ್ಳಬೇಕೆಂದು ಮನಸ್ಸಿದೆಯೋ ಅಂತಹ ಪ್ರತಿಯೊಬ್ಬರೂ ಕೂಡ ನಮ್ಮ ದೇಶ ನಿಜವಾಗಿಯೂ ಪ್ರಜಾಪ್ರಭುತ್ವದ ಕಡೆಗೆ ಹೋಗುತ್ತಿದೆಯೇ ಎಂಬುದನ್ನು ಯೋಚನೆ ಮಾಡಬೇಕು. ಹಿಂದೆ ನಾವು tyranny of majority ಎಂದು ಕೇಳುತ್ತಿದ್ದೆವು. ಈಗ ಎಂತಹ ಒಂದು ಪರಿಸ್ಥಿತಿ ಉತ್ಪನ್ನವಾಗಿದೆ ಎಂದರೆ tyranny of the Minority over the majority ಅಂಥ ಪರಿಸ್ಥಿತಿ ಈ ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆಯೇ ಎನ್ನುವುದನ್ನು ನಾವುಗಳೆಲ್ಲರೂ ಕೂಡ ಅಂದರೆ ಎರಡೂ ಕಡೆಯುವರೂ ವಿಚಾರ ಮಾಡತಕ್ಕ ಕಾಲ ಬಂದಿದೆ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ಶಾಮಣ್ಣನವರು ಉಪಯೋಗಿಸಿದಂಥ ರೀತಿಯಲ್ಲಿ ಈ ರಾಷ್ಟ್ರದ ಸ್ವಾತಂತ್ರ್ಯವನ್ನು ಉಪಯೋಗಿಸಿದರೆ, ಈ ರಾಷ್ಟ್ರ ಉಳಿಯುವುದಕ್ಕಾಗುತ್ತದೆಯೇ? ಪ್ರಜಾಪ್ರಭುತ್ವದ ಹೆಸರನ್ನು ಕೇಳುವುದಕ್ಕೆ ತಾನೆ ಸಾಧ್ಯವಾಗುತ್ತದೆಯೇ? ಬಹಳ ವರ್ಷಗಳಕಾಲ ಅನಿರ್ಬಂಧಿತ ಸ್ವಾತಂತ್ರ್ಯವನ್ನು ಅನುಭವಿಸಿ "ನಿಯಂತ್ರಣ" ಎಂಬ ಶಬ್ದವೇ ಈ ಶಬ್ದಕೋಶದಲ್ಲಿ ಅಳಿಸಿ ಹೋಗಿತ್ತು.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಶಾಮಣ್ಣನವರು ಉಪಯೋಗಿಸಿದಂಥ ಏನೊಂದು ಆರೋಪ ಇದೆ ಅದರ ಬಗ್ಗೆ ಇವತ್ತು ಈ ಕಾನೂನು ಚೌಕಟ್ಟಿನಲ್ಲಿ ಕ್ರಮ ತೆಗದುಕೊಳ್ಳುವುದಕ್ಕೆ ಅವಕಾಶ ಇತ್ತು. ಅದನ್ನು ಅವರು ವಾಪಸ್ಸು ತೆಗೆದುಕೊಂಡಿದ್ದಾರೆ. ಮಾನ್ಯ ಬಂಗಾರಪ್ಪನವರು ಏನೊಂದು ಅಪಾದನೆ ಮಾಡಿದರು ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಈ ನಿಯಮಗಳ ಪ್ರಕಾರ ಅವಕಾಶ ಇತ್ತು. ಅವರೂ ಅದನ್ನು ವಾಪಸ್ಸು ತೆಗೆದುಕೊಂಡರು. ಅದಕ್ಕೋಸ್ಕರ ಈ ಪ್ರಶ್ನೋತ್ತರ ವೇಳೆಯನ್ನು ತೆಗೆದುಬಿಡಬೇಕೆ ?

ಶ್ರೀ ಎಸ್ ಎಂ. ಕೃಷ್ಣ.—ಇಂಥ ವಿಧಿಗಳನ್ನು ಸೇರಿಸಿ ಮಾಡಿದ್ದೇವೆ ಸೈನ್ಯದಲ್ಲಿದ್ದವರಿಗ ನಿಮ್ಮ ಮನಸ್ಸು ಒಪ್ಪಿದರೆ ಆರ್ಡರನ್ನು ಜಾರಿಗೆ ತನ್ನಿ, ಇಲ್ಲದಿದ್ದರೆ ನಿಮ್ಮ ತುಪಾಕಿಯನ್ನು ಹಿಂದಕ್ಕೆ ತಿರುಗಿಸಿ ಎಂದು ಹೇಳಿದ್ದಾರೆ, ನಾವು ಗಡಿಬಿಡಿ ಆಗುವವರೆಗೆ ಕಾಯಬೇಕಾಗಿತ್ತೆ?

ಶ್ರೀ ಕೋಣಂದೂರು ಲಿಂಗಪ್ಪ.—ಸೈನ್ಯದಲ್ಲಿ ಆರೀತಿ ನಿಯಮಗಳು ಇಲ್ಲವೇ ತೆಗೆದುನೋಡಿ?

Mr. DEPUTY SPEAKER.—We are working in Democracy.

ಶ್ರೀ ಎಸ್.ಎಂ ಕೃಷ್ಣ.—ದೇಶದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಿಕೊಂಡು ಹೋಗುವುದಕ್ಕೆ ಪ್ರಯತ್ನಪಡುತ್ತಿದ್ದೇವೆ ನಮ್ಮ ಮಾನ್ಯ ಮಿತ್ರರಾದ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದರು, you are crip ling our functioning ಎಂದು. ಮಾನ್ಯ ದೇವೇಗೌಡರು ಅವನ್ನು ಸರ್ವಥಾ ಒಪ್ಪಿದರು. ನಾವಿಬ್ಬರೂ ಮೊದಲು ಅಲ್ಲಿ ಕುಳಿತಿದ್ದೆವು ನಂತರ ನೀವು ಇಲ್ಲಿ ಬಂದಿರಿ ನಾನು ಅಲ್ಲೇ ಕುಳಿತಿದ್ದೆ. ಮತ್ತೆ ನಾನು ಇಲ್ಲಿಗೆ ಬಂದಾಗ ನೀವು ಆಕಡೆಗೆ ಹೋಗಿ ಕುಳಿತುಕೊಂಡಿದ್ದೀರಿ ಆರೀತಿ ವಸ್ತುಸ್ಥಿತಿ ಬದಲಾವಣೆಯಾಗುತ್ತಿದೆ. ಈ ರೀತಿಯಲ್ಲಿ ಒಂದು ರಾಜಕೀಯ ಚದುರಂಗ ನಡೆಯುತ್ತಿದೆ. De-recognition of Constitutionally established Government. ಇವುಗಳನ್ನೆಲ್ಲಾ ನಾವು ಮಾಡುತ್ತಾ ಹೋದರೆ ನಾವು ರಾಜ್ಯಭಾರ ಮಾಡುವುದಕ್ಕಾಗುತ್ತದೆಯೆ? ಇವತ್ತು ನಾವು ರಾಜ್ಯಭಾರ ಮಾಡುವುದಕ್ಕೆ ಸಾಧ್ಯವಾಗದೇ ಹೋದರೆ ನಾಳೆ ನೀವು ಇಲ್ಲಿ ಬಂದು ರಾಜ್ಯಭಾರ ಮಾಡುವುದಕ್ಕಾಗುವುದಿಲ್ಲ. There are certain ground rules for decent democratic functioning.

ಶ್ರೀ ಎಸ್. ಬಂಗಾರಪ್ಪ.—ಇಂಥ ಒಂದು ಕಾನ್‌ಸ್ಟಿಟ್ಯೂಷನಲ್ ಡೆಮೋಕ್ರೆಟಿಕ್ ಸೆಟ್‌ಅಪ್‌ನಲ್ಲಿ ಬಹಳ ಅನ್ಯಾಯವಾಗುತ್ತದೆಂದು ಹೇಳಿದರೆ, ರೆಪ್ರೆಸೆಂಟೆಟಿವ್ಸ್ ಆಗಿ ನಾವು ಎಲೆಕ್ಟ್ ಆಗಿ ಬಂದಿರುವ ಈ ಸದನದಲ್ಲಿ ನಮಗೆ ಪ್ರಶ್ನೋತ್ತರ ವೇಳೆಯನ್ನು ಇಟ್ಟುಕೊಂಡಿದ್ದೇವೆ ಅದನ್ನು ಮೊಟಕು ಮಾಡುತ್ತಿರುವುದು ತಪ್ಪಲ್ಲವೆ?

Sri S M. KRISHNA.—The differe ce is this suspension is only for the current sitting of the Assemble. I think the Hon. Member is under a mistaken impression that it is for all time to come.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ಕರೆಂಟ್ ಸೆಷನ್‌ಗೆ ಮಾತ್ರ, ಮುಂದೆ ಇಲ್ಲವೆಂದು ಹೇಳುತ್ತೀರಿ. ಅದು ಗ್ಯಾರಂಟಿ ಏನು ಕೊಡುತ್ತೀರಾ, ಸ್ವಾಮಿ ?

ಶ್ರೀ ಕೆ. ಹೆಚ್. ರಂಗನಾಥ್.—ಹೀಗೇ ನಡೆದರೆ ಇದು ಮುಂದೆ ಖಾಯಂ ಆಗುತ್ತದೆ.

SRI S.M. KRISHNA.—The res lution itself is very clear we cannot subvert the resolution further nor we can perpe uate it, unless the situation demands so, and I hope the situation will not demand so. Economic offences ಗೆ ordinary law of the land ಪ್ರಕಾರ ಏಕೆ ಶಿಕ್ಷೆ ಮಾಡಬಾರದು ಎಂದರೆ, Publi memory is short. How smugglers were released when they were taken under the MISA ?

SRI KAGODU THIMMAPPA.—How many smugglers were left out?

SRI S.M. KRISHNA.—Because of the law how many smuggle s were let off? Is it the business of the Government to arrest them and produce them before the Courts and they to be released on some technical grounds and again go on arresting them? So we had to invoke the extraodinary powers that the Parliament has got.

SRI K.H. RANGANATH.—About 960 were arrested during this period and they were release becau e of this law. Otherwise they would n t have been released

SRI KAGODU THIMMAPPA.—How many are still out ?

SRI S.M. KRISHNA.—So, let us be very clear and let us not Soft peddle over the events that have taken place after 26th June. The qualitative change that has come up in the society, the scare that has gone into the minds of these economic offenders are to be looked at. I am not worried about my farmer friends or my future friends. That is irrelevant for the purpose of this debate. All that we are concerned is how within the limits we could function so that the situation in the present circumstances is appreciated. Well some people they have stakes. For example, Mr. Konandur Lingappa, he has no stakes.

SRI KONANDUR LINGAPPA.—The Hon. Mnister is saying it so irresponsibly. I cannot tolerate this. ಮಾನ್ಯ ಸಚಿವರು ಆ ಮಾತನ್ನು ಮರ್ಯಾದೆಯಿಂದ ವಾಪಸ್ಸು ತೆಗೆದುಕೊಳ್ಳಬೇಕು

SRI H.D. DEVE GOWDA.—If the Ministry is not going to follow the Delhi instructions, the Ministry itself wou d be at Stake.

SRI S.M. KRISHNA.—If I have hurt my friend Mr. Lingappa by using that world 's ake" I would withdraw it. In fact he would be the person I am to offend the least.

ಶ್ರೀ ಕೋಣಂದೂರು ಲಿಂಗಪ್ಪ — ಈ ರಾಷ್ಟ್ರ ಪರಕೀಯರಿಂದ ಬಾಧಿತು ಪರದೇಶಕ್ಕೆ ಹೋಗುತ್ತಿದೆ. ಕನ್ನಡದಲ್ಲಿ ಮಾತನಾಡುವುದಕ್ಕೆ ಬಂದರೂ ಇನ್ನೂ ಇಂಗ್ಲೀಷಿನಲ್ಲೇ ಮಾತನಾಡುತ್ತಿದ್ದಾರೆ.

SRI S.M. KRISHNA.—I will take that suggestion also.

I will switch on to Kannada What more does he want? ಆದ್ದರಿಂದ ನಾವು ಈ ತುರ್ತುಪರಿಸ್ಥಿತಿಯ ನಿಜವಾದ ಅರ್ಥವನ್ನು ಕಲ್ಪನೆಮಾಡಿಕೊಂಡು ಅರ್ಥಮಾಡಿಕೊಂಡು ಅದರ ಜವಾಬ್ದಾರಿ ಯಾರಯಾರದು ಎಷ್ಟರಎಷ್ಟರಮಟ್ಟಿಗೆ ಎನ್ನತಕ್ಕದನ್ನು ವಿಚಾರ ಮಾಡಬೇಕು. ನಮ್ಮ ರಾಜಕೀಯ ಭಾವೋದ್ವೇಗಗಳನ್ನು ಬದಿಗಿಟ್ಟು ಕೊಂಚ ವಿಚಾರ ಮಾಡಬೇಕು. ಶ್ರೀಮಾನ್ ದೇವೇಗೌಡರು ಯೋಚನೆಮಾಡಿದ ರೀತಿಯಲ್ಲಿ ಆಳವಾಗಿ ಯೋಚನೆ ಮಾಡಿದರೆ, ಪ್ರಜಾಪ್ರಭುತ್ವದ ಹಾದಿ ಹಸನಾದೀತು, ಸುಲಲಿತವಾದೀತು ಅಲ್ಲದೆ ಸಂಸದೀಯ ದೃಷ್ಟಿಯಿಂದ ಪ್ರಜಾಪ್ರಭುತ್ವಕ್ಕೆ ಇನ್ನು ಹೆಚ್ಚು ಅರ್ಥ ಈ ದೇಶದಲ್ಲಿ ಬರುತ್ತದೆ ಎಂದು ಹೇಳಿ, ಈ ನಿರ್ಣಯವನ್ನು ಒಪ್ಪಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

MR DEPUTY SPEAKER.—I will now put the amendment moved by hon. Member Mr. T.R. Shamanna to the vote of the house. The question is :

"That at the end of the resolution, the following proviso shall be added :

"Provided that during the emergency Session a member with the previous consent of the Hon'ble Speaker be permitted to raise under rule 312 or in any other manner as suggested by the Speaker, any matter of public interest."

The motion was negatived and the amendment was lost.

MR. DEPUTY SPEAKER.—I will now put the motion moved by the Hon. Minister for Parliamentary Affairs to the vote of the House. The question is :

' That this House resolves that the current Session of the Legislative Assembly being in the nature of an emergency session to transact certain urgent and important Government business, only Government Business and no other business whatsoever including questions, call attention and any other business to be initiated by a private member be brought before or transacted during the session and all relevant rules on the subject in the Rules of Procedure and Conduct of Business in Legislative Assembly stand suspended to that extent."

The House divided

Ayes	—	84
Noes	—	21

SRI D. DEVARAJ URS.—I doubt whether it is 84 or something more.

MR. DEPUTY SPEAKER.—Let us recount again. Now it is (votes were counted again) Ayes —108 Noes —21

The Motion was adopted

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಪ್ರಧಾನ ಮಂತ್ರಿಗಳ ಚುನಾವಣೆಯನ್ನು ಪ್ರಶ್ನಿಸುವ ಅರ್ಜಿಯ ಮೇಲೆ.........

MR. DEPUTY SPEAKER.—I could have allowed the hon. Member provided it fits in. Under what rule shall I allow him? I am not repugnant to allow him to make a statement I had a second thought and this is a very serious thought even if he wanted to say something prior to putting it to voting. Looking into content of it I do not want to create a bad precedent. It would be extremely repugnant and highly dangerous. Under what rules can I permit you?

SRI D. DEVARAJ URS.—Constitutional amendment is there.

MR DEPUTY SPEAKER.—Prior to voting of Constitutional Amendment I could have permitted him.

ಶ್ರೀ ಕಾಗೋಡು ತಿಮ್ಮಪ್ಪ.—ಕೆಲವು ಮಸೂದೆಗಳನ್ನು ತೀರ್ಮಾನ ಮಾಡಿದಾಗ ವಿರೋಧಪಕ್ಷದ ಸ್ನೇಹಿತರು ಆ ತೀರ್ಮಾನವನ್ನು ಪ್ರತಿಭಟಿಸಿ ಹೋದಂತಹ ಸಂದರ್ಭಗಳು ಇವೆ. ಆ ಹಿನ್ನೆಲೆಯಲ್ಲಿ ನಾನು ಮಾತನಾಡುತ್ತಾ ಇರುವುದು.

SRI S. M. KRISHNA.—Unfortunately that would be a contempt of the House. You have exercised your right even for asking for a division.

SRI H. D. DEVE GOWDA.—What action has been taken, ಅದರ ಬಗ್ಗೆ ಮಾತನಾಡುವುದಕ್ಕೆ ಆಗುವುದಿಲ್ಲ.

SRI S. M. KRISHNA.—When Rule 312 is suspended, under what rule, Mr. Deputy Speaker, he is making a statement?

MR. DEPUTY SPEAKER.—Under which particular rule is he going to do it? If it is some stringent, violent and malacious language, it will have to be expunged.

SRI KAGODU THIMMAPPA.—This House has established so many precedents after voting a Bill or motions There are instances where a statement was made and the opposition staged a walk out.

MR. DEPUTY SPEAKER.—During the third reading certain remarks have been made. In speeches also they have made use of stringent language. After the close of the chapter, how can it be done ?

SRI KAGODU THIMMAPPA.—There are instances where the opposition made statements while staging a walk out.

MR. DEPUTY SPEAKER —I will put a small question. We have discussed certain things in whatever dignified manner we can do, we have done and that matter is allowed to rest. If he wants to rake it in a violent language, I will have to expunge it. We will have to work within the frame work of the rules of procedure. If he had given me earlier, I could have gone through it and even then I am afraid, I will be creating a dangerous precedent.

SRI KAGODU THIMMAPPA.—The Opposition have made statements after passing of the resolutions and Bills. There are precedents.

SRI H. M. CHANNABASAPPA. Now rules have been suspended and there is no question of making a statement.

ಶ್ರೀ ಕಾಗೋಡು ತಿಮ್ಮಪ್ಪ.—ವಿಧಿನಿಯಮಗಳು ಎಲ್ಲಾ ಹೋಗಿ ಆಗಿದೆ.

ಶ್ರೀ ಎಚ್. ಎಂ ಚನ್ನಬಸಪ್ಪ.—ವಿಧಿನಿಯಮಗಳನ್ನು ಯಾರೂ ತಳ್ಳಿಹಾಕುವುದಕ್ಕೆ ಆಗುವುದಿಲ್ಲ, ಅದು ಸ್ಪಷ್ಟವಾದದ್ದು. ಅದರ ಪ್ರಕಾರ ಕೆಲಸ ಮಾಡಬೇಕು. ಆಗ ನಮಗೆ ಅಭ್ಯಂತರ ಇಲ್ಲ ಈಗ ಇಲ್ಲಿ ಸ್ಟೇಟ್‌ಮೆಂಟ್ ಮಾಡುವುದರಲ್ಲಿ ಮಾಡತಕ್ಕಂಥ ಕಾಲ ಅಕಾಲವಾಗಿದೆ. ಕಾರಣ ಈ ಸಮಸ್ಯೆ ವಿಷಯದಲ್ಲಿ ಬೇಕಾದಷ್ಟು ಚರ್ಚೆ ಆಯಿತು. ಇದರಲ್ಲಿ ನೀವೆಲ್ಲರೂ ಪಾತ್ರವಹಿಸಿದ್ದೀರಿ. ಪಾತ್ರ ವಹಿಸಿದ ಮೇಲೆ ಓಟು ಆಯಿತು ಅಲ್ಲಿಗೆ ಇದು ಮುಗಿಯಿತು ಮತ್ತೆ ಇದೇ ವಿಷಯದಲ್ಲಿ ಸ್ಟೇಟ್‌ಮೆಂಟ್ ಮಾಡುವುದಾದರೆ ಇದು ವಿಧಿನಿಯಮಗಳಿಗೆ ವ್ಯತಿರಿಕ್ತವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ನಿರ್ಣಯ ಪಾಸ್ ಆಗಿದೆ. ಆದರೆ ಸರ್ಕಾರದ ಕ್ರಮವನ್ನು ಪ್ರತಿಭಟಿಸಿ ಈ ಸದನದಿಂದ ಹೊರಗೆ ಹೋಗುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ. ಈಗ ನಾವು ಹೊಸ ಯಾವುದೋ ಸಂಪ್ರದಾಯವನ್ನು ಹಾಕುತ್ತಿದ್ದೇವೆಂದು ಹೇಳಿ ಒಂದು ಕ್ರಿಯಾಲೋಪವನ್ನು ಎತ್ತಿದ್ದಾರೆ. ನಾವು ಹೊಸ ಸಂಪ್ರದಾಯವನ್ನೇನು ಹಾಕುತ್ತಾ ಇಲ್ಲ. ನಮಗೆ ಗೊತ್ತಿದೆ ಅನೇಕ ಸಾರಿ ಸಭೆಯು ನಿರ್ಣಯ ತೆಗೆದುಕೊಂಡ ಮೇಲೆ ಸಭೆಯ ನಿರ್ಣಯವನ್ನು ಪ್ರಶ್ನೆ ಮಾಡಲಿಕ್ಕೆ ಅಧಿಕಾರ ಇಲ್ಲ ಈ ಸಭೆಯ ನಿರ್ಣಯವನ್ನು ಪ್ರಶ್ನೆ ಮಾಡತಕ್ಕದ್ದು ಕಂಟೆಂಪ್ಟ್ ಆಫ್ ದಿ ಹೌಸ್ ಆಗುತ್ತದೆಂದು ತಿಳಿದುಕೊಂಡಿದ್ದೇನೆ. ಸರ್ಕಾರದವರು ಏನು ಒಂದು ನಿರ್ಣಯವನ್ನು ಮಂಡಿಸಿದ್ದಾರೆ ಆ ನಿರ್ಣಯವನ್ನು ಪಾಸ್ ಮಾಡತಕ್ಕದ್ದರಲ್ಲಿ ಸರ್ಕಾರ ತಳೆದಂಥ ಆಸಕ್ತಿ, ಸರ್ಕಾರದವರು ತಳೆದಂಥ ನಿಲುವು ವಿರೋಧಪಕ್ಷದ ಸದಸ್ಯರಿಗೆ ಇರತಕ್ಕ, ಈ ಮನೆಯ ಸದಸ್ಯರಿಗೆ ಇರತಕ್ಕ ಹಕ್ಕಿನ ಸ್ವಾತಂತ್ರ್ಯವನ್ನು ಅಪಹರಣ ಮಾಡತಕ್ಕ ದೃಷ್ಟಿಯಿಂದ ಈ ಸರ್ಕಾರ ಈ ನಿರ್ಣಯವನ್ನು ಮಂಡಿಸಿ ತೀರ್ಮಾನ ಮಾಡುವುದಕ್ಕೆ ಬಂದಿದ್ದಾರೆ. ಈ ಮನೆಯಲ್ಲಿ ಕೆಲಸಮಾಡುವುದಕ್ಕೆ ಸರ್ವಸ್ವತಂತ್ರ ಇಲ್ಲದೆ ಇರುವ ಕಾಲದಲ್ಲಿ ಜನತೆ ಕೇಳತಕ್ಕ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯುವುದಕ್ಕೆ ಈ ತುರ್ತುಪರಿಸ್ಥಿತಿಯಲ್ಲಿ ಅಧಿಕಾರ ಇಲ್ಲ. ಅಧಿಕಾರದ ಹರಣ ಮಾಡಿದ್ದಾರೆ: ಇದ್ದಂಥ ಹಕ್ಕನ್ನು ಮೊಟಕು ಮಾಡಿದ್ದಾರೆ ಸರ್ಕಾರದ ಈ ನಿಲುವನ್ನು ಪ್ರತಿಭಟಿಸಿ ಈ ಸಭೆಯ ಮುಂದಿನ ಎಲ್ಲಾ ಕಾರ್ಯಕಲಾಪಗಳನ್ನು ಬಹಿಷ್ಕರಿಸಿ ಹೊರಗೆ ಹೋಗುತ್ತೇವೆ

(ವಿರೋಧಪಕ್ಷದ ಸದಸ್ಯರೆಲ್ಲರೂ ಸಭೆಯಿಂದ ನಿರ್ಗಮಿಸಿದರು)